# ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)

# ಮಾರ್ಗಸೂಚಿ(ಶೈಕ್ಷಣಿಕ ವಿಭಾಗ)

# 2025-26

# ಪರಿವಿಡಿ


| | | |
|---|---|---|
| 1 | ನಿಗದಿಪಡಿಸಿರುವ ಭಾಷೆಗಳು ಮತ್ತು ಸಂಯೋಜನೆಗಳು | 3-4 |
| 2 | ದಾಖಲಾತಿ | 5-13 |
| 3 | ಪ್ರವೇಶ ಹಂಚಿಕೆ/ಸೀಟುಗಳ ಹಂಚಿಕೆ | 14-23 |
| 4 | ಶುಲ್ಕಗಳ ವಿವರ | 24-36 |
| 5 | ಕಾಲೇಜು / ಸಂಯೋಜನೆ /ವಿಷಯಬದಲಾವಣೆ | 37-40 |
| 6 | ವಿಕಲಚೇತನ ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳ ಕುರಿತು. | 41-45 |
| 7 | ಸಾಂಸ್ಕೃತಿಕ, ಶೈಕ್ಷಣಿಕ ಪ್ರವಾಸ ಹಾಗೂ ಇತರೆ ಚಟುವಟಿಕೆಗಳು | 46-50 |
| 8 | ರಾಷ್ಟ್ರೀಯ ಹಸಿರು ಪಡೆ | 51-51 |

## ಅಧ್ಯಾಯ-01

### ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡಲು ನಿಗದಿಪಡಿಸಿರುವ ಭಾಷೆಗಳು ಮತ್ತು ಸಂಯೋಜನೆಗಳು

**ಭಾಗ-1 ರಲ್ಲಿ ಆಯ್ಕೆ ಮಾಡಿಕೊಳ್ಳಬೇಕಾದ ಭಾಷೆಗಳು ಮತ್ತು ಅವುಗಳ ಸಂಕೇತ ಸಂಖ್ಯೆ ಕೆಳಗಿನ ಪಟ್ಟಿಯಲ್ಲಿನ ಭಾಷಾ ವಿಷಯಗಳಲ್ಲಿ ಯಾವುದಾದರೂ ಎರಡನ್ನು ಆಯ್ಕೆಮಾಡಿಕೊಳ್ಳುವುದು.**

| ಭಾಷಾ ವಿಷಯ | ಕನ್ನಡ | ಇಂಗ್ಲೀಷ್ | ಹಿಂದಿ | ತಮಿಳು | ತೆಲುಗು | ಮಲೆಯಾಳಂ | ಮರಾಠಿ | ಉರ್ದು | ಸಂಸ್ಕೃತ | ಅರೇಬಿಕ್ | ಫ್ರೆಂಚ್ |
|---|---|---|---|---|---|---|---|---|---|---|---|
| ಸಂಕೇತ ಸಂಖ್ಯೆ. | 01 | 02 | 03 | 04 | 05 | 06 | 07 | 08 | 09 | 11 | 12 |

**ಭಾಗ-2ರಲ್ಲಿ ಆಯ್ಕೆ ಮಾಡಿಕೊಳ್ಳಬೇಕಾದ ಐಚ್ಛಿಕ ವಿಷಯಗಳು ಮತ್ತು ಅವುಗಳ ಸಂಕೇತ ಸಂಖ್ಯೆ.**
**ನಿಗದಿತ ಸಂಯೋಜನೆಗಳ ಪಟ್ಟಿಯಲ್ಲಿರುವ ಯಾವುದಾದರೂ 04 ವಿಷಯಗಳ ಒಂದು ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವುದು.**

| ಐಚ್ಛಿಕವಿಷಯ | ಸಂಕೇತಸಂಖ್ಯೆ | ಐಚ್ಛಿಕವಿಷಯ | ಸಂಕೇತಸಂಖ್ಯೆ |
|---|---|---|---|
| ಐಚ್ಛಿಕ **ಕನ್ನಡ** | 16 | ಸಂಖ್ಯಾಶಾಸ್ತ್ರ | 31 |
| ಇತಿಹಾಸ | 21 | ಮನ:ಶಾಸ್ತ್ರ | 32 |
| ಅರ್ಥಶಾಸ್ತ್ರ | 22 | ಭೌತಶಾಸ್ತ್ರ | 33 |
| ತರ್ಕಶಾಸ್ತ್ರ | 23 | ರಸಾಯನಶಾಸ್ತ್ರ | 34 |
| ಭೂಗೋಳಶಾಸ್ತ್ರ | 24 | ಗಣಿತ | 35 |
| ಕರ್ನಾಟಕಸಂಗೀತ | 25 | ಜೀವಶಾಸ್ತ್ರ | 36 |
| ಹಿಂದೂಸ್ತಾನಿಸಂಗೀತ | 26 | ಭೂಗರ್ಭಶಾಸ್ತ್ರ | 37 |
| ವ್ಯವಹಾರಅಧ್ಯಯನ | 27 | ಎಲೆಕ್ಟ್ರಾನಿಕ್ಸ್ (ವಿದ್ಯುನ್ಮಾನವಿಜ್ಞಾನ) | 40 |
| ಸಮಾಜಶಾಸ್ತ್ರ | 28 | ಗಣಕವಿಜ್ಞಾನ | 41 |
| ರಾಜ್ಯಶಾಸ್ತ್ರ | 29 | ಶಿಕ್ಷಣ | 52 |
| ಲೆಕ್ಕಶಾಸ್ತ್ರ | 30 | ಗೃಹವಿಜ್ಞಾನ | 67 |
| | | ಮೂಲಗಣಿತ | 75 |

### NSQF ವಿಷಯಗಳು

| **NSQF ವಿಷಯ** | **Electronics and Hardware** | **Apparels Made Ups and Home Furnishing** | **IT** | **Retail** | **Automobile** | **Health Care** | **Beauty & Welnes** |
|---|---|---|---|---|---|---|---|
| **Subject Code** | **59** | **60** | **61** | **62** | **63** | **64** | **65** |

- **NSQF** ವಿಷಯಗಳು ಲಭ್ಯವಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಯಾವುದಾದರೊಂದು **NSQF** ವಿಷಯವನ್ನು ಆಯ್ಕೆಮಾಡಿಕೊಂಡಿದ್ದಲ್ಲಿ ವ್ಯಾಸಂಗ ಮಾಡುತ್ತಿರುವ ಮಾಧ್ಯಮವನ್ನು ಹೊರತುಪಡಿಸಿ ಇನ್ನೊಂದು ಭಾಷಾ ವಿಷಯವನ್ನು ಆಯ್ಕೆ ಮಾಡಿಕೊಳ್ಳುವುದು.
- ವಿಜ್ಞಾನ ಸಂಯೋಜನೆಯ ವಿದ್ಯಾರ್ಥಿಗಳು ಆಂಗ್ಲ ಭಾಷೆಯನ್ನು ಹೊರತುಪಡಿಸಿ ಇನ್ನೊಂದು ಯಾವುದಾದರೂ ಭಾಷೆಯ ಬದಲಾಗಿ **NSQF** ವಿಷಯವನ್ನು ಆಯ್ಕೆ ಮಾಡಿಕೊಳ್ಳುವುದು.

# ಸಂಯೋಜನೆವಾರು ವಿಷಯ ಸಂಕೇತಗಳು

| ಕಲಾ ವಿಭಾಗದ ಸಂಯೋಜನೆವಾರು ವಿಷಯ ಸಂಕೇತಗಳು | | | | ವಾಣಿಜ್ಯ ವಿಭಾಗದ ಸಂಯೋಜನೆವಾರು ವಿಷಯ ಸಂಕೇತಗಳು | | ವಿಜ್ಞಾನ ವಿಭಾಗದ ಸಂಯೋಜನೆವಾರು ವಿಷಯ ಸಂಕೇತಗಳು | |
|---|---|---|---|---|---|---|---|
| 1 | 21 22 28 29 | 20 | 16 21 28 32 | 1 | 21 22 27 30 | 1 | 33 34 35 36 |
| 2 | 21 22 24 29 | 21 | 21 22 29 52 | 2 | 22 24 27 30 | 2 | 33 34 35 41 |
| 3 | 21 22 23 29 | 22 | 21 24 29 52 | 3 | 22 27 30 41 | 3 | 33 34 35 40 |
| 4 | 16 21 22 29 | 23 | 22 28 29 52 | 4 | 22 27 30 31 | 4 | 31 33 34 35 |
| 5 | 16 21 22 24 | 24 | 22 24 29 52 | 5 | 27 30 31 75 | 5 | 33 34 36 67 |
| 6 | 16 21 22 28 | 25 | 22 28 29 32 | 6 | 27 30 31 41 | 6 | 33 34 35 37 |
| 7 | 21 22 29 32 | 26 | 22 23 28 32 | 7 | 22 27 29 30 | | |
| 8 | 16 21 22 52 | 27 | 21 22 24 28 | 8 | 22 27 30 75 | | |
| 9 | 16 21 29 52 | 28 | 21 22 25 28 | 9 | 22 27 28 30 | | |
| 10 | 16 21 24 52 | 29 | 21 22 26 28 | | | | |
| 11 | 16 21 28 52 | 30 | 21 22 26 29 | | | | |
| 12 | 21 22 28 32 | 31 | 21 22 25 29 | | | | |
| 13 | 21 22 28 52 | 32 | 21 22 29 75 | | | | |
| 14 | 21 28 29 52 | 33 | 21 22 28 75 | | | | |
| 15 | 21 24 28 52 | 34 | 21 22 24 75 | | | | |
| 16 | 21 22 23 28 | 35 | 22 29 32 67 | | | | |
| 17 | 16 21 22 25 | 36 | 21 28 29 16 | | | | |
| 18 | 16 21 22 26 | 37 | 22 28 32 67 | | | | |
| 19 | 16 21 28 25 | | | | | | |

1. ಪಿಯುಸಿ ವ್ಯಾಸಂಗ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಯು ಭಾಗ-1 ರಲ್ಲಿ 2(ಎರಡು) ಭಾಷೆಗಳನ್ನು ಮತ್ತು ಭಾಗ-2 ರಲ್ಲಿ 4(ನಾಲ್ಕು) ಐಚ್ಛಿಕ ವಿಷಯಗಳ ಒಂದು ಸಂಯೋಜನೆಯನ್ನು ವ್ಯಾಸಂಗ ಮಾಡಬೇಕಾಗುತ್ತದೆ. ಎಸ್.ಎಸ್.ಎಲ್.ಸಿ/10ನೇ ತರಗತಿಯನ್ನು ಅಂಗೀಕೃತ ಬೋರ್ಡ್ ಗಳು (COBSE ಪಟ್ಟಿಯಲ್ಲಿರುವ) ನಡೆಸುವ ಪರೀಕ್ಷೆಯಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು COBSE ಸದಸ್ಯತ್ವದ ಪಟ್ಟಿಯನ್ನುಅನುಸರಿಸುವುದು.

2. ಪ್ರಥಮ ಹಾಗೂ ದ್ವಿತೀಯ ಪದವಿ ಪೂರ್ವ ತರಗತಿಗಳಿಗೆ **NCERT**ಯಿಂದ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ ಹಾಗೂ ವಾಣಿಜ್ಯ ವಿಷಯಗಳಾದ ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರ ಹಾಗೂ 2023-24 ರಿಂದ **ಮನ:ಶಾಸ್ತ್ರ, ಗೃಹವಿಜ್ಞಾನ ಮತ್ತು ಗಣಕವಿಜ್ಞಾನ ವಿಷಯಗಳಲ್ಲಿ** NCERT ಪಠ್ಯಪುಸ್ತಕಗಳನ್ನೇ ಅಧಿಕೃತ ಪಠ್ಯಪುಸ್ತಕಗಳನ್ನಾಗಿ ಅಳವಡಿಸಿಕೊಳ್ಳಲಾಗಿದೆ. ಉಳಿದ ವಿಷಯಗಳಿಗೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯು ಹೊರತಂದಿರುವ ಪಠ್ಯಪುಸ್ತಕಗಳನ್ನೇ ಅಧಿಕೃತ ಪುಸ್ತಕಗಳನ್ನಾಗಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು.

3. ಹಿಂದೂಸ್ತಾನಿ ಸಂಗೀತ (26) ಮತ್ತು ಕರ್ನಾಟಕ ಸಂಗೀತ (25) ವಿಷಯಗಳಿಗೆ ಸಂಬಂಧಿಸಿದಂತೆ ಮೌಖಿಕ ಹಾಗೂ ತಾತ್ವಿಕ ಎರಡೂ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳು ಇರುವುದರಿಂದ, ಮೌಖಿಕ ಮತ್ತು ತಾತ್ವಿಕ ಎರಡೂ ಭಾಗಗಳಲ್ಲಿ ಒಂದೇ ಬಾರಿಗೆ ಉತ್ತೀರ್ಣರಾಗಬೇಕು.

4. ಎನ್.ಎಸ್.ಕ್ಯೂ.ಎಫ್. ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಯನ್ನು ಸಮಗ್ರ ಶಿಕ್ಷಣ ಕರ್ನಾಟಕ (ಎಸ್.ಎಸ್.ಕೆ) ಇ-ಮೇಲ್ sskplanning2022@gmail.comನ್ನುಸಂಪರ್ಕಿಸಬಹುದಾಗಿದೆ.

# ಅಧ್ಯಾಯ-೦2
## ದಾಖಲಾತಿ

**I ಪ್ರಥಮ ಪಿಯುಸಿ ದಾಖಲಾತಿಗಾಗಿ ಮಾರ್ಗಸೂಚಿ:**

1. ಕರ್ನಾಟಕ ರಾಜ್ಯದ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ COBSE ಪಟ್ಟಿಯಲ್ಲಿರುವ ಬೋರ್ಡ್‌ಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪ್ರಥಮ ಪಿಯುಸಿಗೆ ದಾಖಲಾಗಲು ಅರ್ಹರಿರುತ್ತಾರೆ.
2. 2025-26ನೇ ಸಾಲಿನಿಂದ ಶೈಕ್ಷಣಿಕ ಸಾಲಿಗೆ ಇತರೆ ರಾಜ್ಯಗಳಿಂದ ಸಿ.ಬಿ.ಎಸ್.ಇ/ಐ.ಸಿ.ಎಸ್.ಇ ಬೋರ್ಡ್‌ಗಳಿಂದ ರಾಜ್ಯಪಠ್ಯ ಕ್ರಮದಲ್ಲಿ ಪ್ರಥಮ ಪಿಯುಸಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಈ ಕೆಳಕಂಡ ವಿಧಾನದಲ್ಲಿ ತಾತ್ಕಾಲಿಕ ಅರ್ಹತಾ ಪತ್ರವನ್ನು ಪಡೆದುಕೊಳ್ಳುವುದು:

**ವಿದ್ಯಾರ್ಥಿಗಳು ಅರ್ಹತಾ ಪತ್ರವನ್ನು ಪಡೆಯಲು ತೆಗೆದುಕೊಳ್ಳಬೇಕಾದ ಕ್ರಮಗಳು: (Eligibility Certificate)**

- I. **"ತಾತ್ಕಾಲಿಕ** ಅರ್ಹತಾ ಪ್ರಮಾಣಪತ್ರಕ್ಕೆ **ಅರ್ಜಿಸಲ್ಲಿಸಲು PU PORTAL (www.pue.karnataka.gov.in) ನಲ್ಲಿ ವಿದ್ಯಾರ್ಥಿಗಳಿಗೆ ಲಾಗ್ ಇನ್ ಒದಗಿಸಲಾಗಿದೆ.(OTP Based).**
- II. **ಎಲ್ಲಾ ಅಗತ್ಯ ದಾಖಲೆಗಳನ್ನು ವಿದ್ಯಾರ್ಥಿಯು uploadಮಾಡಿ, payment ಮಾಡುವುದು. ತದನಂತರ ವಿದ್ಯಾರ್ಥಿಗೆ Unique Id ಸೃಜನೆಯಾಗುತ್ತದೆ.**
- III. **ಒಮ್ಮೆ ಪಾವತಿಸಿದ ಶುಲ್ಕವನ್ನುಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.**
- IV. **ಸೃಜನೆಯಾದ Unique Id ನ್ನು ವಿದ್ಯಾರ್ಥಿಯು ದಾಖಲಾತಿ ಬಯಸಿದ ಕಾಲೇಜಿನ ಪ್ರಾಂಶುಪಾಲರಿಗೆ ನೀಡುವುದು.**
- V. **ಆಯಾ ಕಾಲೇಜಿನ ಪ್ರಾಚಾರ್ಯರು ಸದರಿ ವಿದ್ಯಾರ್ಥಿಯ Unique Id ಬಳಸಿಕೊಂಡು, ದಾಖಲೆಗಳನ್ನು ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ, ಖಚಿತಪಡಿಸಿಕೊಂಡು ಅನುಮೋದಿಸಿ "ಅರ್ಹತಾಪ್ರಮಾಣಪತ್ರ" ಡೌನ್ ಲೋಡ್ ಮಾಡಿಕೊಂಡು, ನಿಯಮಾನುಸಾರ ದಾಖಲಾತಿ ಮಾಡಿಕೊಂಡು, ಸದರಿ ಪ್ರಮಾಣ ಪತ್ರದಲ್ಲಿ ಕಾಲೇಜಿನ ಹೆಸರು ನಮೂದು ಮಾಡಿ ಸಹಿ ಮಾಡುವುದು.**
- VI. **Unique Id ಯನ್ನು SATS ನಲ್ಲಿನ ಮೂದಿಸಿ ದಾಖಲಾತಿ ವಿವರಗಳನ್ನು ನಮೂದಿಸುವುದು.**
- VII. **ಒಂದು ವೇಳೆ ದಾಖಲೆಗಳು ಸಮರ್ಪಕವಾಗಿರದಿದ್ದ ಪಕ್ಷದಲ್ಲಿ, Reject ಮಾಡಿ ವಿದ್ಯಾರ್ಥಿಗೆ ಪುನ: ಸಮರ್ಪಕವಾದ ದಾಖಲೆಗಳನ್ನು Upload ಮಾಡಲು ಅವಕಾಶ ನೀಡುವುದು. (ವಿದ್ಯಾರ್ಥಿಗೆ ನೋಂದಾಯಿಸಿದ ಮೊಬೈಲ್ ನಂಬರ್ ಗೆ ಸಂದೇಶ ರವಾನೆಯಾಗುವುದು).**
- VIII. **ವಿದ್ಯಾರ್ಥಿಯು ಸಮರ್ಪಕವಾದ ದಾಖಲೆಗಳನ್ನು Upload ಮಾಡಿದ ನಂತರ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು "ಅರ್ಹತಾ ಪ್ರಮಾಣ ಪತ್ರವನ್ನು "ಡೌನ್ ಲೋಡ್ ಮಾಡಿಕೊಂಡು ನಿಯಮಾನುಸಾರ ದಾಖಲಾತಿ ಮಾಡಿಕೊಳ್ಳುವುದು.**

3. ವಿದೇಶಗಳಲ್ಲಿ ಕರ್ನಾಟಕ ರಾಜ್ಯದ ಎಸ್.ಎಸ್.ಎಲ್.ಸಿ.ಗೆ ತತ್ಸಮಾನ (COBSE ಪಟ್ಟಿಯಲ್ಲಿರುವ ಸಂಸ್ಥೆ/ಮಂಡಳಿಗಳಲ್ಲಿ) ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ (CBSE ಹೊರತುಪಡಿಸಿ) ಪದವಿ ಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿಯಿಂದ ನೀಡಲ್ಪಟ್ಟ ತಾತ್ಕಾಲಿಕ ಅರ್ಹತಾ ಪತ್ರವನ್ನು ಅಭ್ಯರ್ಥಿಗಳಿಂದ ಪಡೆದು ದಾಖಲಾತಿ ನೀಡಬೇಕು. ಇಲಾಖೆಯಿಂದ '**ತಾತ್ಕಾಲಿಕ ಅರ್ಹತಾಪತ್ರವನ್ನು**' ಪಡೆಯದಿರುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ದಾಖಲಾತಿ ನೀಡಬಾರದು. ದಾಖಲಾತಿ ನೀಡಿದಲ್ಲಿ ಅಂತಹ ವಿದ್ಯಾರ್ಥಿಗಳ ದಾಖಲಾತಿಯನ್ನು ರದ್ದುಪಡಿಸಲಾಗುವುದು ಮತ್ತು ಮುಂದೆ ಆಗುವ ಪರಿಣಾಮಗಳಿಗೆ ಪ್ರಾಂಶುಪಾಲರೇ ಪೂರ್ಣ ಜವಾಬ್ದಾರರಾಗುತ್ತಾರೆ. ಈ ರೀತಿಯ ದಾಖಲಾತಿಗಳನ್ನು ಮುನ್ಸೂಚನೆ ಇಲ್ಲದೇ ರದ್ದು ಪಡಿಸಲಾಗುವುದು.
4. 2025-26ನೇ ಸಾಲಿನಿಂದ ಶೈಕ್ಷಣಿಕ ಸಾಲಿಗೆ ಇತರೆ ರಾಜ್ಯಗಳಿಂದ/ಸಿ.ಬಿ.ಎಸ್.ಇ/ಐ.ಸಿ.ಎಸ್.ಇ ಬೋರ್ಡ್ ಗಳಿಂದ ರಾಜ್ಯಪಠ್ಯ ಕ್ರಮದಲ್ಲಿ ದ್ವಿತೀಯ ಪಿಯುಸಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳು ಕೇಂದ್ರ ಕಛೇರಿಯಿಂದ ಕಡ್ಡಾಯವಾಗಿ ತಾತ್ಕಾಲಿಕ ಅರ್ಹತಾ ಪ್ರಮಾಣ ಪತ್ರವನ್ನು ಪಡೆದ ನಂತರ ದಾಖಲಾಗುವುದು.
5. ಇಲಾಖೆಯಿಂದ ಅನುಮತಿ ಪಡೆದಭಾಷೆ ಮತ್ತು ಸಂಯೋಜನೆಗಳಿಗೆ ಮಾತ್ರ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬೇಕು. ಇದನ್ನು ಮೀರಿ ನಿಯಮ ಬದ್ಧವಲ್ಲದ ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡು ಅಭ್ಯಾಸ ಮಾಡಲು ಅನುವು ಮಾಡಿಕೊಟ್ಟಲ್ಲಿ ಅಂತಹ ದಾಖಲಾತಿಗಳನ್ನು ಏಕಪಕ್ಷೀಯವಾಗಿ ರದ್ದುಪಡಿಸಲಾಗುವುದು.
6. SSLC /ತತ್ಸಮಾನ ತರಗತಿಯಲ್ಲಿ ಭಾಷಾ ವಿನಾಯಿತಿ ಪಡೆದಿರುವ ಕಲಿಕಾ ನ್ಯೂನತೆ, ಬುದ್ಧಿಮಾಂದ್ಯ ಹಾಗೂ ಶ್ರವಣದೋಷ ಇರುವ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣದ ಹಂತದಲ್ಲಿ ಭಾಷಾ ವಿನಾಯಿತಿಯನ್ನು ಪಡೆಯಲು ನಿಗದಿತ ದಿನಾಂಕದೊಳಗೆ ಕಡ್ಡಾಯವಾಗಿ ನಿಯಮಾನುಸಾರ ಅರ್ಜಿಯನ್ನು ಸರ್ಕಾರದ ಆದೇಶದಂತೆ ಸಲ್ಲಿಸಬೇಕು. ಪರೀಕ್ಷೆಗಳು ಪ್ರಾರಂಭವಾಗುವ ಪೂರ್ವದಲ್ಲಿ ಈ ಸೌಲಭ್ಯವನ್ನು ಒದಗಿಸುವಂತೆ ಕೋರಿ ಬೇಡಿಕೆ ಸಲ್ಲಿಸಲು ಅವಕಾಶವಿರುವುದಿಲ್ಲ. ತಡವಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದಲ್ಲಿ ಸಂಬಂಧಿಸಿದ ಪ್ರಾಚಾರ್ಯರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

7. 2025-26ನೇ ಸಾಲಿನಿಂದ (ಕಾಲಕಾಲಕ್ಕೆ ನೀಡುವ ಆದೇಶಕ್ಕೆ ಒಳಪಟ್ಟಿರುತ್ತದೆ) ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಯ ಪ್ರತಿ ವಿಭಾಗಕ್ಕೆ ನಿಗದಿತ ಗರಿಷ್ಠ ಪ್ರವೇಶಗಳ ಸಂಖ್ಯೆ 80(ಎಂಭತ್ತು) ಮಾತ್ರ ಇದನ್ನು ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಲ್ಲಿ ಅಂತಹ ವಿದ್ಯಾರ್ಥಿಗಳ ದಾಖಲಾತಿಯನ್ನು ಅನುಮೋದಿಸಲಾಗುವುದಿಲ್ಲ. ಹಾಗೂ ಮುಂದಿನ ಆಗು ಹೋಗುಗಳಿಗೆ ಪ್ರಾಚಾರ್ಯರು/ಆಡಳಿತ ಮಂಡಳಿಯವರನ್ನೇ ನೇರಹೊಣೆಗಾರರನ್ನಾಗಿ ಮಾಡಲಾಗುವುದು.

8. i. ಪ್ರತೀ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ನೋಂದಣಿ ಸಂಖ್ಯೆ, ವರ್ಷ ಮತ್ತು ತಿಂಗಳ ಮಾಹಿತಿಯನ್ನು ಕರಾರುವಕ್ಕಾಗಿ SATS (Students Achievement Tracking System) ಪೋರ್ಟಲ್‌ನಲ್ಲಿ ನಮೂದಿಸುವುದು. ನೋಂದಣಿ ಸಂಖ್ಯೆಯನ್ನಾಗಲಿ ಅಥವಾ ವರ್ಷ ಮತ್ತು ತಿಂಗಳ ಮಾಹಿತಿಯನ್ನಾಗಲಿ ತಪ್ಪಾಗಿ ಇಲ್ಲವೇ ಅಪೂರ್ಣವಾಗಿ ನಮೂದಿಸಕೂಡದು.

   ii. ರಾಜ್ಯದ ಎಲ್ಲಾ ವಿದ್ಯಾರ್ಥಿಗಳು ನೀಡಿರುವ ಎಸ್ಎಸ್ಎಲ್ಸಿ ವಿವರಗಳನ್ನು ಗಣಕೀಕರಿಸಿ ತಾಳೆ ಮಾಡಲಾಗುವುದು.ಯಾವುದೇ ವಿದ್ಯಾರ್ಥಿಯ ವಿವರವು ಒಂದಕ್ಕಿಂತ ಹೆಚ್ಚಿನ ಕಾಲೇಜುಗಳಲ್ಲಿ ಇರುವುದು ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳು ದ್ವಿಪ್ರತಿವರ್ಗಾವಣೆ ಪತ್ರದ ದಾಖಲೆಗಳ ಅಧಾರದ ಮೇಲೆ ದಾಖಲಾತಿ ಮಾಡಿಕೊಂಡಿರುವುದು ಸ್ಪಷ್ಟವಾಗುತ್ತದೆ. ಇಂತಹ ವಿದ್ಯಾರ್ಥಿಗಳ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ ದಾಖಲಾತಿ ಮಾಡಿಕೊಂಡಿರುವ ಕಾಲೇಜಿನ ಪ್ರಾಚಾರ್ಯರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

9. **ಪ್ರಥಮ ಪಿಯುಸಿಗೆ ದಾಖಲಾಗುವ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಪಡೆಯಬೇಕಾದದಾಖಲೆಗಳು:**

- ಇಲಾಖೆಯು ನಿಗದಿಪಡಿಸಿದ ಅರ್ಜಿಯನ್ನು ಭರ್ತಿಮಾಡಿ ಸಲ್ಲಿಸುವುದು.
- ಶಾಲೆಯ ಮುಖ್ಯಸ್ಥರು ದೃಢೀಕರಿಸಿದ ಎಸ್ಎಸ್ಎಲ್ಸಿ/ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ.
- ಮೂಲ ವರ್ಗಾವಣೆ ಪತ್ರ.
- ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 06 ಭಾವಚಿತ್ರಗಳು. (White Backgroundಇರಬೇಕು)
- ಶುಲ್ಕವಿನಾಯಿತಿ ಪಡೆಯಲು ಅರ್ಹರಿರುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣಪತ್ರ ಹಾಗೂ ಆದಾಯ ಪ್ರಮಾಣಪತ್ರ.
- ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಸೌಲಭ್ಯ ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಇಪಿ40ಟಿಪಿಯು2022 ದಿನಾಂಕ:24-06-2022ರ ಆದೇಶದಂತೆ ಅಗತ್ಯ ದಾಖಲೆಗಳು.
- ಕರ್ನಾಟಕ ರಾಜ್ಯದ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಇತರೆ ವಿದ್ಯಾರ್ಥಿಗಳು ಮೂಲ ವಲಸೆ ಪ್ರಮಾಣಪತ್ರ (Original MigrationCertificate) ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
- ಬ್ಯಾಂಕ್ ಪಾಸ್ ಬುಕ್ ನಕಲು ಪ್ರತಿ.

**ಸೂಚನೆ:**

ಆಯಾ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಾಲೆಯಿಂದ ಮೂಲವರ್ಗಾವಣೆ ಪತ್ರ ಪಡೆದು ಪ್ರಥಮ ಪಿಯುಸಿ ತರಗತಿಗೆ ದಾಖಲಾಗುವ ಮೊದಲೇ ಅಚಾತುರ್ಯದಿಂದ ಮೂಲವರ್ಗಾವಣೆ ಪತ್ರವನ್ನು ಕಳೆದುಕೊಂಡಿದ್ದರೆ ಹತ್ತಿರದ ಪೊಲೀಸ್ ಠಾಣೆಗೆ ದೂರುದಾಖಲಿಸಿ, ನಂತರ ಕಾಲೇಜುಗಳಲ್ಲಿ ನಿಯಮಾನುಸಾರ ಅರ್ಜಿಸಲ್ಲಿಸಿ ದ್ವಿಪ್ರತಿ ವರ್ಗಾವಣೆ ಪತ್ರ ಪಡೆದಿರುವ ವಿದ್ಯಾರ್ಥಿಗೆ ಪ್ರಥಮ ಪಿಯುಸಿ ತರಗತಿಗೆ ಸಂಬಂಧಿಸಿದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನೈಜತೆಯನ್ನು ಖಾತರಿಪಡಿಸಿಕೊಂಡು ನಿರ್ದೇಶನಾಲಯದ ಪೂರ್ವಾನುಮತಿ ಪಡೆದ ನಂತರ ವಿದ್ಯಾರ್ಥಿಯನ್ನು ದಾಖಲಾತಿ ಮಾಡಿಕೊಳ್ಳಬಹುದು.

10. IGCSE and other International Boards: ಪಠ್ಯ ಕ್ರಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ದಾಖಲಾತಿಯನ್ನು ನಿರ್ದೇಶನಾಲಯದಿಂದ ಅರ್ಹತಾ ಪತ್ರಪಡೆದ ನಂತರವೇ ದಾಖಲಾತಿ ಮಾಡಿಕೊಳ್ಳಬೇಕು. ಫಲಿತಾಂಶ ಪ್ರಕಟವಾದ ನಂತರ **IGCSE Board** ರವರು ನೀಡುವ ಅಧಿಕೃತ ಅಂಕಪಟ್ಟಿಯನ್ನು ಪಡೆದ ನಂತರವೇ ದಾಖಲಾತಿ ಮಾಡಿಕೊಳ್ಳಬೇಕು. ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಸೂಚನೆಯ ಅನುಸಾರ ದಾಖಲಾತಿ ಮಾಡಿಕೊಳ್ಳುವುದು. ಕಾಲೇಜಿನ ಪ್ರಾಚಾರ್ಯರು ಯಾವುದೇ ಕಾರಣಕ್ಕೂ ಪರೀಕ್ಷಾ ಫಲಿತಾಂಶ ಪ್ರಕಟವಾಗುವುದಕ್ಕಿಂತ ಮೊದಲು ಶಾಲೆಯವರು ನೀಡುವ ತಾತ್ಕಾಲಿಕ ಅಂಕಪಟ್ಟಿಯ ಆಧಾರದ ಮೇಲೆ ದಾಖಲಾತಿ ಮಾಡಿಕೊಳ್ಳಬಾರದು. ಈ ರೀತಿ ದಾಖಲಾತಿ ಮಾಡಿಕೊಂಡಲ್ಲಿ ಪ್ರಾಚಾರ್ಯರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ. ಈ ರೀತಿಯ ದಾಖಲಾತಿಗಳನ್ನು ಏಕಪಕ್ಷೀಯವಾಗಿ ರದ್ದುಪಡಿಸಲಾಗುವುದು.

11. IGCSE and other International Boards: ಪಠ್ಯ ಕ್ರಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ತರಗತಿಗೆ ದಾಖಲಾತಿಯನ್ನು ಪಡೆಯಲು ದಾಖಲಾತಿಯ ಕೊನೆಯ **ದಿನಾಂಕದ ಮೊದಲು 10ನೇ** ತರಗತಿ ಪರೀಕ್ಷೆಯನ್ನು ಬರೆದು ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು.

**ರಾಜ್ಯದ ಪ್ರಥಮ ಪಿಯುಸಿ ತರಗತಿಗೆ ದಾಖಲಾಗಲು ಈ ಕೆಳಕಂಡ ಸೆಕೆಂಡರಿ ಎಜುಕೇಷನ್ ಬೋರ್ಡ್ ಗಳಿಂದ 10ನೇ ತರಗತಿಯಲ್ಲಿ ತೇರ್ಗಡೆಹೊಂದಿದ ಅಭ್ಯರ್ಥಿಗಳುಮಾತ್ರಅರ್ಹರಿರುತ್ತಾರೆ:**

**Following are the Education Board of the council asmembers of COBSE, Delhi (www.cobse.in).**

| SL.NO | NAME OF THE BOARD AND ADDRESS |
|---|---|
| 1 | Board of Intermediate Education(Andhra Pradesh)<br>2nd,3rd,&4th floor,RoomNo.114/C3, Eshwar Elite, Besides Sonovision, Tadepalli, Guntur-522501 |
| 2 | Board of Secondary Education(Andhra Pradesh)<br>D. No.20-124,Beside SPNRCH High School,Opp.Andhra Hospitals, Gollapudi,Vijayawada -521225 |
| 3 | A.P.Open School Society<br>Govt.of Andhra Pradesh Opp. Old Bus Stand, Pariksha Bhavan, Govt. Boy's High School (Campus),GUNTUR-522001(Andhra Pradesh) |
| 4 | Assam Higher Secondary Education Council,<br>Bamunimaidam,Guwahati-781021 |
| 5 | Board of Secondary Education,Assam,<br>Bamunimaidam,Guwahati-781021. |
| 6-A | Assam Sanskrit Board<br>[Member ship till January 2019],Kahilipara, Guwahati-781019. |
| 6-B | Kumar Bhaskar Varma Sanskrit & Ancient Studies University,<br>Namati,Nalbari-781337. |
| 7 | State Madrassa Education Board,Assam,Govt. of Assam, Office of the Director of Madrassa Education & Secretary,<br>State Madrassa Education Board,Assam Kahilipara, Guwahati-781019, |
| 8 | AMU Board of Secondary & Sr. Secondary Education,<br>Aligarh Aligarh-202002,(U.P). |
| 9 | Bihar School Examination Board,<br>BudhMarg, Patna-800001 |
| 10 | Bihar Board of Open Schooling & Examination Chanakya National Law Universit<br>Campus, Nyaya Nagar, Mithapur, Patna-800001. |
| 11 | Bihar State Madrasa Education Board 5,<br>Vidyapati Marg, Patna-800001 |
| 12 | Bihar Sanskrit Shiksha Board Back Harding Road,<br>17 Chitkhora Pul ke-bagal-mein, Patna-800001. |
| 13 | Banasthali Vidyapith<br>P.O.Banasthali Vidyapith- 304022 (Rajasthan). |
| 14 | Bhartiya Shiksha Board Patanali Yogapeeth Phase-1,<br>Admin Block,Near Bahadarabad, Haridwar-249405 (Uttarakhand). |

| | |
|---|---|
| **15** | Central Board of Secondary Education 2 Community Centre,<br>Shiksha Kendra, Preet Vihar,Vikas Marg, Delhi–110092 |
| **16** | Chhatisgarh Board of Secondary Education<br>Pension Bada,Raipu-r492001. |
| **17** | Chhatisgarh State Open School Beside UCO Bank,<br>Pension Bada,Raipur-492001(C.G) |
| **18** | Chhattisgarh Sanskrit Vidyamandalam New Rajendra Nagar,<br>Near Water Tank, Chhatisgarh, Raipur–492006. |
| **19** | Chhatisgarh Madrasa Board Old P H.Q. Premise,<br>Near Raj Bhawan(C.G.),Raipur-492001. |
| **20** | Council for the Indian School Certificate Examinations<br>Plot No.35 &36, M.B Road, Sector VI,PushpVihar,Saket,NewDelhi-16. |
| **21** | Delhi Board of School Education<br>I.P.Extension, Patparganj, Delhi-110092. |
| **22** | Dayalbagh Educational Institute (Deemed University)<br>Dayalbagh, AGRA-282115(U.P.) |
| **23** | Goa Board of Secondary and Higher Secondary Education<br>Al to Betim, Berdez, Goa-403521. |
| **24** | Gujarat Secondary & Higher Secondary Education Board<br>Sector10/B, Near Old Sachivalaya, Gandhinagar-382010 |
| **25** | Board of School Education<br>Haryana Hansi Road, Bhiwani-127021. |
| **26** | H.P.Board of School Education Gayana Lok Parisar,<br>Civil Lines, Dharamsala, Kangra(H.P)-176213 |
| **27** | J&K Board of School Education Rehari Colony,<br>Jammu-180005(Novto Apr) Bemina, Bye Pass, Srinagar-190010 (May to Oct) |
| **28** | Jharkh and Academic Council Gyandeep Campus,<br>Bargawan, Namkum, Ranchi–834010. |
| **29** | Govt. of Karnataka Dept. of Pre-university Education,<br>18 Cross, Sampige Road, Malleswaram, Bangalore-560012. |
| **30** | Karnataka Secondary Education, Examination Board<br>6th Cross, Malleswaram, Bangalore-560003. |

| | |
|---|---|
| **30(A)** | Karnataka School Examination and Assessment Board<br>6th Cross ,Malleswaram, Bangalore-560003 |
| **31** | Kerala Board of Public Examination Pareeksha Bhawan,<br>Poojapura,Thiruvananthapuram-695012 |
| **32** | Board of Higher Secondary Examinations, Kerala Housing Board Buildings,<br>Santhi Nagar,Thiruvananthapuram–695001. |
| **33.** | Board of Vocational Higher Secondary Education Kerala<br>Ground floor, Jagathy, Thiruvananthapuram-6950014. |
| **34.** | Board of Secondary Education,<br>Madhya Pradesh Shivaji Nagar,Bhopal-462011 |
| **35** | M.P.State Open School Education Board School Education Department,<br>Govt.of M.P. Shivaji Nagar, Bhopal– 462011. |
| **36** | Maharishi Patanjali Sanskrit Sansthan<br>(Dept.of School Education,Govt.ofM.P.) R-24, Zone -1, M P. Nagar, Bhopal, Madhya Pradesh-462003 |
| **37** | Maharashtra State Board of Secondary and Higher Secondary Education<br>S.R.No.-832-A,Final Plot No-178,179,Near Balchitrawani, Behind Agharkar Research Institute, Bhamburda, Shivajinagar, Pune-411004. |
| **38** | Board of Secondary Education,<br>Manipur Babupara, Imphal-795001 |
| **39** | Council of Higher Secondary Education,<br>Manipur Babupara, Imphal(West)-795001(Manipur). |
| **40** | Meghalaya Board of School Education<br>West Garo Hills, Tura, Meghalaya-794001. |
| **41** | Mizoram Board of School Education<br>Chaltlang,P.O.Ramhlan, Aizawl-796012. |
| **42** | Nagaland Board of School Education<br>Post Box613,Bayavu Hill ,Kohima-797001. |
| **43** | National Institute of Open Schooling<br>A-24-25, Institutional Area, Sector- 62,NOIDA-201309(UP),Distt.-Gautam Budh Nagar(UP) |
| **44** | Council of Higher Secondary Education,<br>Odisha C-2 Prajnapitha, Samantapur, Bhubaneswar–751013 |
| **45** | Board of Secondary Education,<br>Odisha Bajrakabati Road, Cuttack-753001. |

| | |
|---|---|
| **46** | Odisha State Board of Madarasa Education<br>Urdu Bhawan Qr.No:3R-3/1,Unit IX (Flat), Bhubneswar-751022, ODISHA |
| **47** | Punjab School Education Board Vidya Bhawan,<br>Phase-8,SAS Nagar Mohali-160062. |
| **48** | Board of Secondary Education,<br>Rajasthan JaipurRoad,Ajmer-305001(Rajasthan) |
| **49** | Rajasthan State Open School<br>Dr.S.Radhakrishanan Shiksha Sankul Parisar,JLNMarg,Jaipur -302004(Rajasthan) |
| **50** | Board of Open Schooling & Skill Education Sikkim<br>NH-10,Near RBIBank, M.P.Golai, Tadong, Gangtok,Sikkim-737102. |
| **51** | Central Sanskrit University<br>(formerly Rashtriya Sanskrit Sansthan) 56-57,Institutional Area, Janakpuri, New Delhi-110058 |
| **52** | State Board of School Examinations (Sec.) &Board of Higher Secondary Examinations,<br>(Tamil Nadu) Directorate of Govt. Examinations, College Road,Chennai-600006. |
| **53** | Telangana Board of Intermediate Education Vidya Bhawan,<br>Nampally,Hyderabad- 500001 |
| **54** | Board of Secondary Education,<br>Telangana Chapel Road, Nampally, Hyderabad– 500001 |
| **55** | Telangana Open School Society, Government of Telangana SCERT Campus, Opp.<br>LB Stadium `E'Gate, III Floor, Basheerbagh, Hyderabad-500001 |
| **56** | Rajiv Gandhi University of Knowledge Technologies (RGUKT)<br>Basar, Dist.Nirmal-504107(Telangana) |
| **57** | Tripura Board of Secondary Education<br>Pandit Nehru Complex (Gurkha Basti),P.O.Kunjaban, Agartala-799006, Tripura West |
| **58** | U.P.Board of High School & Intermediate Education<br>9 Sarojini Naidu Marg, Allahabad-211001. |
| **59** | U.P Board of Sec. Sanskrit Education Sanskrit Bhawan,<br>2 Shahmeena Road, Lucknow- 226003. |
| **60** | Board of School Education<br>Uttarakhand Ram Nagar, Nainital-244715. |
| **61** | Uttarakhand Sanskrit Shiksha Parishad Gangotri Enclave,<br>Badripur Road, Indrapur, PO Badripur, Dehradun-248001 |

| | | |
|---|---|---|
| **62** | Uttarakhand Madrasa Education Board<br><br>Minority Welfare Building, B-Block, Shaheed Bhagat Singh Colony,Adhoiwala, Dehradun-248001,(Uttarakhand) | |
| **63** | Gurukula Kangri Vishwavidyalaya (Deemedto be University)<br><br>POGurukula Kangri, Haridwar-249404 | |
| **64** | West Bengal Board of Secondary Education<br><br>NiveditaBhawan, BlockDJ-8,Sect.II, Salt Lake City,Vidhan Nagar, Kolkatta-700091. | |
| **65** | Wes tBengal Council of Higher Secondary Education<br><br>Vidya Sagar Bhavan, 9/2,D.J.Block, Sector- II,Salt Lake, Kolkata700091. | |
| **66** | West Bengal Board of Madrasah Education<br><br>DD-45,Sec-1,Maulana Abdul Kalam Azad Bhawan, Salt Lake City, Kolkata–700064. | |
| **67** | The West Bengal Council of Rabindra Open Schooling<br><br>Bikash Bhavan (2ndFloor,EastBlock), Bidhannagar, Kolkata-700091. | |
| **68** | West Bengal State Council of Technical & Vocational Edu. & Skill Development<br><br>Karigori Bhavan, 5th floor, Plot B/7, Action Area-III,Newtown,Rajarhat,Kolkata-700160. | |
| **69** | National Testing Agency (NTA) [Anautonomousbody of Ministry of Education,<br><br>Govt of India] 1ST Floor,NSIC-MDBP Building, OkhlaIndustrial Estate New Delhi-110020; PBX No. 011-69095250 | |
| **70** | Jamia Urdu Aligarh<br><br>Medical Road,Civil Lines-202001. | |
| **71** | SangaiInternational University Manipur<br><br>VM Building, Rengkai Road ,Rengkai, Churachandpur, Manipur-795128 | |
| **72.** | UP Madrasa Education Board,<br><br>Lucknow 704 JawaharBhavan, Lucknow-226001. | |
| **GRAMEEN MUKT VIDHYALAY SHIKSHA SANSTHAN**<br>[Name reflected on COBSE website for the specific period from 01.12.2017 to 05.02.2019 on the direction of the Hon'ble High Court of H.P dated 08.05.2024 passed in W.P.(C) NO.6858/2022 and the Notification dated18.10.2021issued by the Himachal Pradesh Board of School Education, Dharamshala] | | M-151,Keshav Chowk, Panchsheel Garden, Naveen Shahdara, Delhi-32 |
| **73** | National Examinations Board,<br><br>Nepal Sanothimi Bhaktapur ,Nepal. | |
| **74** | Mauritius Examinations Syndicate Reduit Mauritius | |
| **75** | Bhutan Council for School Examinations & Assessment Ministry for Education,<br><br>Thimpu, Bhutan. | |

| | |
|---|---|
| **76** | The AgaKhan University Examination Board<br>Block`C',IED-PDC,1-5/B-VII,FB Area, Karimabad, PO Box-13688, Karachi-75950 (Pakistan) |
| **77** | Inter Board Committee of Chairmen(IBCC)<br>IBCCSecretariat,StreetNo.38,G- 10/4,Islamabad (Pakistan) |
| **78** | Cambridge Assessment International Examinations<br>1 Hills Road, Cambridge CBI,2EU,UK |
| **79** | Pearson EDEXCEL Ltd. Edexcel Limited, 190 High Holborn London WC1V7BH. |
| **80** | International Baccalaureate IB Global Centre,<br>Singapore,600 North Bridge Road, #21-01Parkview Square, SINGAPORE– 188778 |
| **81** | Northwest Accreditation Commission (NWAC), USA Arizona Headquarters,<br>Tempe, AZ85284 United State of America Regional Office:35 A, Ground floor, North Avenue Road, Punjabi Bagh West,NewDelhi– 110026. |

**II.ಪ್ರಥಮ ಪಿಯುಸಿ ತರಗತಿಗೆ ದಾಖಲಾದ ವಿದ್ಯಾರ್ಥಿಗಳ ಭಾಷೆ/ವಿಷಯಗಳ ಬದಲಾವಣೆ:**

ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಯು ವಿಷಯ/ಭಾಷೆಗಳ ಬದಲಾವಣೆಗೆ ಪ್ರತೀ ಸಾಲಿನ ಆಗಸ್ಟ ತಿಂಗಳ 10ನೇ ತಾರೀಖಿನೊಳಗೆ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಬದಲಾವಣೆ ಬಯಸುವ ವಿಷಯಗಳಲ್ಲಿ ಕನಿಷ್ಠ ಶೇಕಡ 75ರಷ್ಟು ಹಾಜರಾತಿ ದೊರಕುವ ಬಗ್ಗೆ ಖಚಿತ ಪಡಿಸಿಕೊಂಡ ನಂತರ ಮಾತ್ರ ವಿಷಯ ಬದಲಾವಣೆಯನ್ನು ಪ್ರಾಚಾರ್ಯರ ಹಂತದಲ್ಲೇ ಮಾಡಿಕೊಳ್ಳತಕ್ಕದ್ದು.

**III ಪ್ರಥಮ ಪಿಯುಸಿ ದಾಖಲಾತಿಯ ವಿವರ:**

ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳು ಪ್ರಥಮ ಪಿಯುಸಿ ದಾಖಲಾತಿಯ ಬಗ್ಗೆ ಕಡ್ಡಾಯವಾಗಿ ಅನುಸರಿಸಬೇಕಾದಕ್ರಮಗಳು.

- ಪದವಿ ಪೂರ್ವ ಶಿಕ್ಷಣ ಇಲಾಖೆ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಮಾತ್ರ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳು ಉಪಯೋಗಿಸತಕ್ಕದ್ದು.
- ಸದರಿ ನಮೂನೆಯನ್ನು ಇಲಾಖೆಯ ಅಂತರ್ಜಾಲದಲ್ಲಿ www.pue.karnataka.gov.in. ಯಿಂದ ಡೌನ್‌ಲೋಡ್ ಮಾಡಿ ಎ-4ಅಳತೆಯ ಶೀಟಿನಲ್ಲಿ ಮುದ್ರಿಸಿ ಕಾಲೇಜಿನ ಮೊಹರು ಹಾಕಿ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.
- ಅರ್ಜಿ ನಮೂನೆಯನ್ನು ವಿತರಿಸುವಾಗ ಸರ್ಕಾರವು ನಿಗದಿಪಡಿಸಿರುವ ಶುಲ್ಕವನ್ನು ವಿದ್ಯಾರ್ಥಿಗಳಿಂದ ಸ್ವೀಕರಿಸಿ ಪ್ರತ್ಯೇಕ ರಸೀದಿಯನ್ನು ಕಡ್ಡಾಯವಾಗಿ ನೀಡುವುದು, ಆ ರಸೀದಿಯ ಸಂಖ್ಯೆಯನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಅರ್ಜಿಯಲ್ಲಿ ನಮೂದಿಸುವುದು. ವಿದ್ಯಾರ್ಥಿಗಳು ದಾಖಲಾಗುವ ಸಮಯದಲ್ಲಿ ಮತ್ತೊಮ್ಮೆ ಅರ್ಜಿಶುಲ್ಕವನ್ನು ಪಡೆಯತಕ್ಕದ್ದಲ್ಲ.
- ದಾಖಲಾತಿ ಸಮಯದಲ್ಲಿ ಇಲಾಖಾ Website ದಾಖಲಾತಿ ನಮೂನೆ ಹಾಗೂ ಇಲಾಖಾ Website ನ ಮಾಹಿತಿಯನ್ನು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ಒಂದು ವೇಳೆ ಇಲಾಖಾ Website ನಿಂದ ವಿದ್ಯಾರ್ಥಿಗಳು / ಪೋಷಕರು ಅರ್ಜಿ ನಮೂನೆಯನ್ನು Download ಮಾಡಿ ಎ-4 ಅಳತೆಯ ಶೀಟ್‌ನಲ್ಲಿ ಮುದ್ರಿಸಿಕೊಂಡು ಅರ್ಜಿಸಲ್ಲಿಸಿದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಿ ನಿಗದಿತ ಅರ್ಜಿಶುಲ್ಕವನ್ನು ಮಾತ್ರ ಪಡೆದುಕೊಳ್ಳುವುದು.
- ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ)ಯಿಂದ ಅನುಮತಿ ನೀಡಿರುವ ಪ್ರತಿ ಸಂಯೋಜನೆಯ ವಿಭಾಗಗಳ ಸಂಖ್ಯೆ ಮತ್ತು ಭಾಷಾ ವಿಷಯಗಳ ಬಗ್ಗೆ ಸೂಚನಾ ಫಲಕದಲ್ಲಿ(Notice Board) ಪ್ರಕಟಿಸಬೇಕು.
- ಪ್ರಾಚಾರ್ಯರು ತಮ್ಮ ಕಾಲೇಜಿಗೆ ಸಂಬಂಧಿಸಿದಂತೆ ಪ್ರಥಮ ಪಿಯುಸಿ ದಾಖಲಾತಿಗೆ ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆಯನ್ನು ಸಂಯೋಜನೆವಾರು ರೋಸ್ಟರ್ ಪದ್ಧತಿ ಪ್ರಕಾರ ಮುಂದೆ ನೀಡಿರುವ ಮಾದರಿ ಪಟ್ಟಿಯಲ್ಲಿನ ಮಾಹಿತಿಯಂತೆ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.
- ಪದವಿ ಪೂರ್ವ ಶಿಕ್ಷಣ ನಿಯಮಗಳು 2024 ರ ನಿಯಮ 14(1) ರನ್ವಯ ಪ್ರತಿಯೊಂದು ವಿಭಾಗದಲ್ಲಿ (section) ಗರಿಷ್ಠ80 (ಎಂಭತ್ತು) ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವುದು. 80(ಎಂಭತ್ತು)ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.

IV. ಪ್ರಾಚಾರ್ಯರು/ಆಡಳಿತ ಮಂಡಳಿಯವರು ಇಲಾಖೆ/ಸರ್ಕಾರ ನಿಗದಿಪಡಿಸಿರುವ ಶುಲ್ಕಗಳ ಪಟ್ಟಿಯನ್ನು ಹಾಗೂ ತಮ್ಮ ಕಾಲೇಜಿಗೆ ಇತ್ತೀಚೆಗೆ ಮಂಜೂರಾತಿ ಆಗಿರುವ ಸಂಯೋಜನೆಗಳನ್ನು ಕಾಲೇಜಿನ ಸೂಚನಾ ಫಲಕದಲ್ಲಿ(**Notice Board**)ಕಡ್ಡಾಯವಾಗಿ ಪ್ರಕಟಿಸಬೇಕು.

V. ದ್ವಿತೀಯ ಪಿಯುಸಿ ದಾಖಲಾತಿಗೆ ಅರ್ಹತೆಗಳು.

- ಅದೇ ಕಾಲೇಜಿನಲ್ಲಿ ಪ್ರಥಮಪಿಯುಸಿ ವ್ಯಾಸಂಗ ಮಾಡಿ ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು.
- ಪ್ರಥಮ ಪಿಯುಸಿ ತರಗತಿಯನ್ನು ಅದೇ ಕಾಲೇಜಿನಲ್ಲಿ ಹಿಂದಿನ ವರ್ಷಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು.
- ಹಿಂದಿನ ವರ್ಷಗಳಲ್ಲಿ ದ್ವಿತೀಯ ಪದವಿ ಪೂರ್ವ ತರಗತಿಗೆ ದಾಖಲಾಗಿ ಹಾಜರಾತಿ ಕೊರತೆಯಿಂದ ಪರೀಕ್ಷೆಗೆ ಹಾಜರಾಗಲು ಅನುಮತಿ ನಿರಾಕರಿಸಲ್ಪಟ್ಟ ವಿದ್ಯಾರ್ಥಿಗಳು.
- ಪ್ರಥಮ ಪಿಯುಸಿಯನ್ನು ರಾಜ್ಯದಲ್ಲಿರುವ ಬೇರೆಬೇರೆ ಪದವಿ ಪೂರ್ವ ಕಾಲೇಜುಗಳಲ್ಲಿ ಹಿಂದಿನ ವರ್ಷಗಳಲ್ಲಿ ಅಭ್ಯಾಸ ಮಾಡಿ ಉತ್ತೀರ್ಣರಾಗಿದ್ದು, ದ್ವಿತೀಯ ಪಿಯುಸಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳು.
- 10ನೇ ತರಗತಿ/ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರಥಮ ಪಿಯುಸಿಗೆ ದಾಖಲಾತಿ ಹೊಂದಿ ಉತ್ತೀರ್ಣರಾದ ನಂತರ ಅನಿವಾರ್ಯ ಕಾರಣದಿಂದ ವ್ಯಾಸಂಗವನ್ನು ಮುಂದುವರೆಸಲು ಸಾಧ್ಯವಾಗದ ರಾಜ್ಯದ/ಹೊರ ರಾಜ್ಯದ ವಿದ್ಯಾರ್ಥಿಗಳು ಕೇಂದ್ರ ಕಛೇರಿಯಿಂದ ಅನುಮತಿ ಪಡೆದು ದಾಖಲಾಗುವುದು.
- ಹೊರ ರಾಜ್ಯಗಳಲ್ಲಿ / ಹೊರ ದೇಶಗಳಲ್ಲಿ ಪ್ರಥಮ ಪಿಯುಸಿಗೆ ತತ್ಸಮಾನವಾದ (COBSE ಪಟ್ಟಿಯಲ್ಲಿರುವ) ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳು ನಿರ್ದೇಶನಾಲಯದಿಂದ ತಾತ್ಕಾಲಿಕ ಅರ್ಹತಾಪತ್ರ (Provisional Eligibility Certificate)ವನ್ನು ದಾಖಲಾತಿಗೆ ಮೊದಲು ಕಡ್ಡಾಯವಾಗಿ ಪಡೆದು, ಕಾಲೇಜಿನಲ್ಲಿ ದಾಖಲಾತಿ ಪಡೆಯಬೇಕು.
- CBSE/ICSE/OTHER STATE Boards ಸಂಸ್ಥೆಗಳಲ್ಲಿ 11ನೇ ತರಗತಿಯ ಪಠ್ಯಕ್ರಮದಲ್ಲಿ ಉತ್ತೀರ್ಣರಾದವಿದ್ಯಾರ್ಥಿಗಳು 12ನೇ ತರಗತಿ /ದ್ವಿತೀಯ ಪಿಯುಸಿಗೆ ದಾಖಲಾಗಲು ಅರ್ಹರಾಗಿರುತ್ತಾರೆ. ಅಂತಹ ವಿದ್ಯಾರ್ಥಿಗಳು ನಿರ್ದೇಶನಾಲಯದಿಂದ ತಾತ್ಕಾಲಿಕ ಅರ್ಹತಾ ಪತ್ರವನ್ನು ದಾಖಲಾತಿಗೆ ಮೊದಲು ಕಡ್ಡಾಯವಾಗಿ ಪಡೆದು, ಕಾಲೇಜಿನಲ್ಲಿ ದಾಖಲಾತಿ ಪಡೆಯಬೇಕು.

**ವಿಶೇಷಸೂಚನೆ:**

CBSE/ICSE/OTHER STATE Boards ಗಳಲ್ಲಿ 11ನೇ ತರಗತಿ ವಿದ್ಯಾರ್ಥಿಗಳು 5 ವಿಷಯಗಳನ್ನು ಮಾತ್ರ ವ್ಯಾಸಂಗ ಮಾಡಿರುವವರು, ದ್ವಿತೀಯ ಪಿಯುಸಿಯಲ್ಲಿ 6 ವಿಷಯಗಳನ್ನು ವ್ಯಾಸಂಗ ಮಾಡುವುದು ಕಡ್ಡಾಯವಾಗಿರುತ್ತದೆ. ಒಂದು ಹೆಚ್ಚುವರಿ ಪ್ರಾಯೋಗಿಕವಲ್ಲದ ವಿಷಯವನ್ನು ದ್ವಿತೀಯ ಪಿಯುಸಿಯೊಂದಿಗೆ ಪ್ರಥಮ ಪಿಯುಸಿಯಲ್ಲೂ ಉತ್ತೀರ್ಣರಾಗಬೇಕು. ಸದರಿ ವಿದ್ಯಾರ್ಥಿಗಳ ದ್ವಿತೀಯ ಪಿಯುಸಿ ಫಲಿತಾಂಶವನ್ನು ಪ್ರಥಮ ಪಿಯುಸಿ ಪರೀಕ್ಷೆಯ ಉತ್ತೀರ್ಣ ಫಲಿತಾಂಶ ಪ್ರಕಟವಾದ ನಂತರವೇ ಪ್ರಕಟಿಸಲಾಗುವುದು ಎಂಬ ಷರತ್ತನ್ನು ವಿಧಿಸಿ ದಾಖಲಾತಿಗೆ ಅರ್ಹತಾ ಪತ್ರವನ್ನು ನೀಡಲಾಗುವುದು.

VI IGCSE/NWAS/IBand other international boards ಸಂಸ್ಥೆಗಳಲ್ಲಿ, 11ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು 12ನೇ ತರಗತಿ (ದ್ವಿತೀಯಪಿಯುಸಿಗೆ) ದಾಖಲಾಗಲು ಅರ್ಹರಾಗಿರುವುದಿಲ್ಲ.

**ವಿಶೇಷಸೂಚನೆ:** ಕೇಂದ್ರ ಕಛೇರಿಯಿಂದ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ತಿಳಿಸಿರುವ ವಿದ್ಯಾರ್ಥಿಗಳು ದಾಖಲಾತಿಗೆ ಮೊದಲೇ ಕೇಂದ್ರ ಕಛೇರಿಯಿಂದ Eligibility ಪತ್ರವನ್ನು ಪಡೆದು ದಾಖಲಾತಿ ಮಾಡಿಕೊಳ್ಳಬೇಕು. ಒಂದು ವೇಳೆ Eligibility ಪತ್ರವನ್ನು ಪಡೆಯದೆ ದಾಖಲಾತಿ ಮಾಡಿಕೊಂಡರೆ ಮುಂದಿನ ಆಗು ಹೋಗುಗಳಿಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.

# ಅಧ್ಯಾಯ-೦3
## ಪ್ರವೇಶ(ಸೀಟು)ಗಳಹಂಚಿಕೆ

**ಪ್ರವೇಶ/ಸೀಟುಗಳನ್ನು ರೋಸ್ಟರ್ ಪದ್ಧತಿಯಂತೆ ಹಂಚುವ ವಿಧಾನ:**

1. ಎಲ್ಲಾ ವರ್ಗದ ಕಾಲೇಜುಗಳಲ್ಲಿ ಅಂಕಗಳ ಆಧಾರದ ಮೇಲೆ, ಮೆರಿಟ್‌ನಲ್ಲಿ ಯಾವುದೇ ಗುಂಪಿನ ಮೀಸಲಾತಿ ವಿದ್ಯಾರ್ಥಿಗಳು, ಸಾಮಾನ್ಯ ವರ್ಗಕ್ಕೆ ನಿಗದಿಯಾಗಿರುವ **ಕಟ್ ಆಫ್ ಮಾರ್ಕ್ಸ್** (**cut off marks**) ಒಳಗೆ ಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಸಾಮಾನ್ಯ ವರ್ಗ ಎಂದು ಪರಿಗಣಿಸಿ ಅವರನ್ನು ಸಾಮಾನ್ಯ ವರ್ಗದ ಪಟ್ಟಿಗೆ ಸೇರಿಸಬೇಕು.
2. ನಂತರ ಆಯಾ ಮೀಸಲಾತಿ ಗುಂಪಿನವರಿಗೆ ನಿಯಮಾನುಸಾರ ಮೀಸಲಾತಿ ನಿಯಮಗಳನ್ನು ಅನುಸರಿಸಬೇಕು.
3. ವಿವಿಧ ವರ್ಗಗಳಲ್ಲಿ ಸಂಬಂಧಿಸಿದ ವಿದ್ಯಾರ್ಥಿಗಳು ಅರ್ಜಿಯನ್ನು ಹಾಕದಿದ್ದಲ್ಲಿ, ಅಂತಹ ಪ್ರವೇಶಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸಿ ರೋಸ್ಟರ್ ಪದ್ಧತಿಯಂತೆ ಹಂಚಬಹುದು.
4. ಯಾವುದೇ ಕಾರಣಕ್ಕೂ ಆಯಾ ವರ್ಗದಡಿಯಲ್ಲಿ ಬಂದಿರುವ ಅರ್ಜಿಗಳನ್ನು ಸಂಪೂರ್ಣವಾಗಿ ಪರಿಗಣಿಸದೇ, ಅದಕ್ಕೆ ಸಂಬಂಧಿಸಿದ ಪ್ರವೇಶಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸಬಾರದು.
5. ಇಂತಹ ವರ್ಗಾವಣೆಗಳನ್ನು ಷರಾದಲ್ಲಿ ನಮೂದಿಸಬೇಕು.
6. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ದಾಖಲಾತಿಯನ್ನು ಕಡ್ಡಾಯವಾಗಿ ನಿರ್ವಹಿಸುವುದು ಮತ್ತು ದಾಖಲಾತಿ ವಿವರಗಳನ್ನು ಎಸ್.ಎ.ಟಿ.ಎಸ್ ನಲ್ಲಿ ಇಂಧೀಕರಿಸುವುದು. ಸದರಿ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾದಲ್ಲಿ ಸದರಿ ಕಾಲೇಜಿನ ಸಂಬಂಧಪಟ್ಟ ಕಾಲೇಜಿನ ಆಡಳಿತ ಮಂಡಳಿ/ಪ್ರಾಂಶುಪಾಲರನ್ನೇ ನೇರಹೊಣೆಗಾರರನ್ನಾಗಿ ಮಾಡಲಾಗುವುದು.

ಅ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಸರಿಸಬೇಕಾದಕ್ರಮ:

1. ಲಭ್ಯವಿರುವ ಎಲ್ಲಾ ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆ ಮಾಡಬೇಕು.
2. ಸಹ ಶಿಕ್ಷಣ ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲಾ ಪ್ರವೇಶಗಳಲ್ಲಿ 50% ರಷ್ಟು ಪ್ರವೇಶಗಳನ್ನು ಲಂಬವಾಗಿ (Vertically) 1995ರ ನಿಯಮ14 (6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗೂ ಅವುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.

ಆ. ಸಾಮಾನ್ಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಸರಿಸಬೇಕಾದ ಕ್ರಮ:

1995ರ ನಿಯಮಗಳ ಉಪನಿಯಮ 12(ಬಿ) ರನ್ವಯ ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ 20% ರಷ್ಟು ಪ್ರವೇಶಗಳನ್ನು ಈ ಕಾಲೇಜುಗಳ ಆಡಳಿತ ಮಂಡಳಿಯವರು ಅವರ ವಿವೇಚನೆಯಂತೆ ಹಂಚಲು ಅಧಿಕಾರವಿರುತ್ತದೆ.

1. ಸಂಯೋಜನೆವಾರು ಉಳಿದ 80% ರಷ್ಟು ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆ ಮಾಡಬೇಕು.
2. ಸಹ ಶಿಕ್ಷಣ ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲಾ ಸರ್ಕಾರದ ಪ್ರವೇಶಗಳಲ್ಲಿ 50% ರಷ್ಟು ಪ್ರವೇಶಗಳನ್ನು ಲಂಬವಾಗಿ (Vertically) 1995ರ ನಿಯಮ14(6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗೂ ಅವುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.
3. ಈ ಕಾಲೇಜುಗಳಲ್ಲಿ ಒಂದು ವರ್ಗದಲ್ಲಿ ಒಂದು ಅಥವಾ ಎರಡು ವಿಷಯಗಳು ಅನುದಾನ ರಹಿತವಾಗಿದ್ದಲ್ಲಿ, ಅಂತಹ ವರ್ಗಕ್ಕೆ ಕಂಡಿಕೆಅ(1) ಮತ್ತು (2) ರಂತೆ ಪ್ರವೇಶಗಳನ್ನು ಹಂಚಿಕೆ ಮಾಡಬೇಕು.
4. ಈ ಕಾಲೇಜುಗಳಲ್ಲಿ ಒಂದು ವರ್ಗದಲ್ಲಿ ಎಲ್ಲಾ ವಿಷಯಗಳು ಅನುದಾನ ರಹಿತವಾಗಿದ್ದಲ್ಲಿ, ಅಂತಹ ವರ್ಗಕ್ಕೆ ಕಂಡಿಕೆ ಉ(1) ಮತ್ತು (2) ರಂತೆ ಪ್ರವೇಶಗಳನ್ನು ಹಂಚಿಕೆಮಾಡಬೇಕು.

ಇ. ಖಾಸಗಿ ಅಲ್ಪಸಂಖ್ಯಾತ (ಭಾಷೆಮತ್ತುಧಾರ್ಮಿಕ/ಮತೀಯ) ಸಂಸ್ಥೆಗಳ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಸರಿಸಬೇಕಾದ ಕ್ರಮ:

- ಸರ್ಕಾರದ ಆದೇಶ ಸಂಖ್ಯೆ:-ಇಡಿ 27 ಮಾಹಿತಿ 2012 (ಭಾಗ-1) ದಿನಾಂಕ:- 18-06-2014 ರನ್ವಯ,ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ ಕಡ್ಡಾಯವಾಗಿ ಕನಿಷ್ಠ ಶೇಕಡ 25ರಷ್ಟುಆಯಾ ಭಾಷಾ/ ಆಯಾಮತೀಯ ಅಲ್ಪಸಂಖ್ಯಾತರ ಸಮುದಾಯದ ವರ್ಗದವರಿಗೆ ಪ್ರವೇಶಗಳನ್ನು ಈ ಕಾಲೇಜುಗಳ

ಆಡಳಿತ ಮಂಡಳಿಯವರು ತಮ್ಮ ಜನಾಂಗದ(Linguistic and Religious Minority) ವಿದ್ಯಾರ್ಥಿಗಳಿಗೆ ಹಂಚಲು ಅಧಿಕಾರವಿರುತ್ತದೆ.

- ಸಂಯೋಜನೆವಾರು ಉಳಿದ ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆ ಮಾಡಬೇಕು.
- ಸಹ ಶಿಕ್ಷಣ ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲಾ ಸರ್ಕಾರದ ಪ್ರವೇಶಗಳಲ್ಲಿ 50% ರಷ್ಟು ಪ್ರವೇಶಗಳನ್ನು ಲಂಬವಾಗಿ (Vertically) 1995ರ ನಿಯಮ 14(6) ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗೂ ಅವುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.

ಈ. ಖಾಸಗಿ ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ ಸಂಸ್ಥೆಗಳ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಸರಿಸಬೇಕಾದ ಕ್ರಮ:

1. ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ 50% ರಷ್ಟು ಪ್ರವೇಶಗಳನ್ನು ಆಡಳಿತ ಮಂಡಳಿಯವರು ತಮ್ಮ ಜನಾಂಗದ (Caste) ವಿದ್ಯಾರ್ಥಿಗಳಿಗೆ ಹಂಚಲು ಅಧಿಕಾರವಿರುತ್ತದೆ.
2. ಸಂಯೋಜನೆವಾರು ಉಳಿದ 50% ರಷ್ಟು ಪ್ರವೇಶಗಳನ್ನು ಮೆರಿಟ್ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆಮಾಡಬೇಕು.
3. ಸಹ ಶಿಕ್ಷಣ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರದ ಎಲ್ಲಾ ಪ್ರವೇಶಗಳಲ್ಲಿ 50% ರಷ್ಟು ಪ್ರವೇಶಗಳನ್ನು ಲಂಬವಾಗಿ (Vertically) 1995ರ ನಿಯಮ 14(6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗೂ ಅವುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.

ಉ.ಎಲ್ಲಾ ವರ್ಗಗಳ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಸರಿಸಬೇಕಾದ ಕ್ರಮ:

ಈ ಕಾಲೇಜುಗಳಲ್ಲಿ ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳಲ್ಲಿ 50% ರಷ್ಟು ಪ್ರವೇಶಗಳನ್ನು ಆಡಳಿತ ಮಂಡಳಿಯವರು ತಮ್ಮ ವಿವೇಚನೆಯಂತೆ ಹಂಚಲು ಅಧಿಕಾರವಿರುತ್ತದೆ.

1. ಉಳಿದ 50% ರಷ್ಟು ಪ್ರವೇಶಗಳನ್ನು ಸಂಯೋಜನೆವಾರು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆ ಮಾಡಬೇಕು.
2. ಸಹ ಶಿಕ್ಷಣ ಕಾಲೇಜುಗಳಲ್ಲಿ ಲಭ್ಯವಿರುವ ಎಲ್ಲಾ ಸರ್ಕಾರದ ಪ್ರವೇಶಗಳಲ್ಲಿ 50% ರಷ್ಟು ಪ್ರವೇಶಗಳನ್ನು ಲಂಬವಾಗಿ (Vertically) 1995ರ ನಿಯಮ14(6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು ಹಾಗೂ ಅವುಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ವಿದ್ಯಾರ್ಥಿನಿಯರಿಗೆ ಹಂಚಿಕೆ ಮಾಡಬೇಕು.

ವಿಶೇಷಸೂಚನೆ:

- **ಪ್ರಥಮ/ದ್ವಿತೀಯ ಪಿಯುಸಿಯ ದಾಖಲಾತಿ ಅರ್ಹತೆಗಳು, ದಾಖಲಾತಿ APROVE, ಅಭ್ಯಾಸದ ವಿಷಯಗಳು ಮತ್ತು ಬೋಧನ ಅವಧಿಯ ಬಗ್ಗೆ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ ನೋಂದಣಿ, ಆಡಳಿತ ಮತ್ತು ಸಹಯಾನುದಾನ, ಇತರೆ.....) ನಿಯಮಾಗಳು 2024 ಸರ್ಕಾರಿ ಆದೇಶ ಸಂಖ್ಯೆ :- ಇಪಿ 09 ಟಿಪಿಯು 2024, ದಿನಾಂಕ:-12-09-2024 ಹೊರಡಿಸಿದ ರಾಜ್ಯ ಪತ್ರ ದಿನಾಂಕ:-24-09-2024 ನ್ನು ಅನುಸರಿಸಲು ಸೂಚಿಸಿದೆ.**
- ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಸಂಖ್ಯೆ:-2347/2022, 2146/2022 ಮತ್ತು ಇತರೆ ಸಂಬಂಧಿಸಿದ ಪ್ರಕರಣಗಳಲ್ಲಿ ದಿನಾಂಕ:15.03.2022 ರಂದು ನೀಡಿರುವ ತೀರ್ಪಿನಲ್ಲಿ ಸರ್ಕಾರದ ಆದೇಶವನ್ನು (ಆದೇಶಸಂಖ್ಯೆ: ಇಪಿ 14 ಎಸ್‌ಹೆಚ್‌ಹೆಚ್ 2022 ಬೆಂಗಳೂರು, ದಿನಾಂಕ:05.02.2022) ಸಿಂಧುಗೊಳಿಸಿರುವ ಕಾರಣ ಪದವಿ ಪೂರ್ವ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ಕಾಲೇಜುಗಳಲ್ಲಿ ಆಯಾ ಕಾಲೇಜು ಅಭಿವೃದ್ಧಿ ಸಮಿತಿಯು ನಿರ್ಧರಿಸಿರುವಂತಹ ಸಮವಸ್ತ್ರಗಳನ್ನು ಧರಿಸತಕ್ಕದ್ದು. ಆಡಳಿತ ಮಂಡಳಿಗಳು /ಸಿ.ಡಿ.ಸಿಸಮವಸ್ತ್ರವನ್ನು ನಿಗದಿಪಡಿಸದೇ ಇದ್ದಲ್ಲಿ ಸಮಾನತೆ ಮತ್ತು ಐಕ್ಯತೆಯನ್ನು ಕಾಪಾಡಿಕೊಂಡು ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಭಂಗಬಾರದೇ ಇರುವ ಉಡುಪುಗಳನ್ನು ಧರಿಸುವುದು.

2016-17ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ **NSQF** ಕೋರ್ಸ್ ಗಳ **Electronics and Hardware, Apparels Made Ups and Home Furnishing, Automobile, IT, Retail, Beauty and Wellness** ವಿಷಯಗಳಲ್ಲಿ ಆಯ್ದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿದೆ. NSQF ಕೋರ್ಸ್ ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ವಿದ್ಯಾರ್ಥಿಗಳ ಮಾಹಿತಿಯನ್ನು SATSನಲ್ಲಿ ನೀಡುವುದು ಕಡ್ಡಾಯವಾಗಿರುತ್ತದೆ ಹಾಗೂ ಉಪಪ್ರಾಂಶುಪಾಲರು ಮತ್ತು NSQF ತರಬೇತುದಾರರ ಸಹಯೋಗದೊಂದಿಗೆ NSQF ತರಗತಿಗಳನ್ನು ಸುಸೂತ್ರವಾಗಿ ನಡೆಸುವುದು NSD/SSK/RMSA ಮತ್ತು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ರವರಿಂದ ನೀಡುವ ಸುತ್ತೋಲೆಗಳನ್ನು ಸಮಯಕ್ಕೆ ಸರಿಯಾಗಿ ಪಾಲಿಸುವುದು ಪ್ರಾಂಶುಪಾಲರ ಜವಾಬ್ದಾರಿಯಾಗಿರುತ್ತದೆ.

**FORM-1**

(ಮಾದರಿ ಪ್ರವೇಶ ಹಂಚಿಕೆ/For illustration purpose only)

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರವೇಶಗಳ ಹಂಚಿಕೆ

(ಉದಾ: ಒಂದು ವರ್ಗದಲ್ಲಿಎರಡು ಸಂಯೋಜನೆಗಳು ಇದ್ದಾಗ 40+40=80 ರಂತೆ ಹಂಚಿಕೆ ಮಾಡಿದೆ)

**SEAT MATRIX TO BE FOLLOWED IN GOVERNMENT PRE-UNIVERSITY COLLEGES for Any ONE COMBINATION Like PCMB/ HEBA/ HESP etc**

**(ರೋಸ್ಟರ್ ನಿಯಮವು ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಮೀಸಲಾತಿ ನಿಯಮದನ್ವಯ/ಆದೇಶ ಮಾರ್ಪಾಡಿಗೆ ಒಳಪಟ್ಟಿರುತ್ತದೆ).**

| SlNo | Total in Take | Girls(G) Boys(B) | In Take | GM 44% | SC 17% | ST 7 % | C-I 4% | 2A 15% | 2B 4% | 3A 4% | 3B 5% |
|---|---|---|---|---|---|---|---|---|---|---|---|
| 1 | 40 | G | 20 | 9 | 3 | 1 | 1 | 3 | 1 | 1 | 1 |
| | | B | 20 | 9 | 3 | 1 | 1 | 3 | 1 | 1 | 1 |
| | | **TOTAL** | **40** | **18** | **6** | **2** | **2** | **6** | **2** | **2** | **2** |
| 2 | 80 | G | 40 | 17 | 7 | 3 | 2 | 5 | 2 | 2 | 2 |
| | | B | 40 | 17 | 7 | 3 | 2 | 5 | 2 | 2 | 2 |
| | | **TOTAL** | **80** | **34** | **14** | **6** | **4** | **10** | **4** | **4** | **4** |
| 3 | 120 | G | 60 | 27 | 10 | 4 | 2 | 10 | 2 | 2 | 3 |
| | | B | 60 | 27 | 10 | 4 | 2 | 10 | 2 | 2 | 3 |
| | | **TOTAL** | **120** | **54** | **20** | **8** | **4** | **20** | **4** | **4** | **6** |
| 4 | 160 | G | 80 | 35 | 14 | 6 | 3 | 12 | 3 | 3 | 4 |
| | | B | 80 | 35 | 14 | 6 | 3 | 12 | 3 | 3 | 4 |
| | | **TOTAL** | **160** | **70** | **28** | **12** | **6** | **24** | **6** | **6** | **8** |
| 5 | 200 | G | 100 | 44 | 17 | 7 | 4 | 15 | 4 | 4 | 5 |
| | | B | 100 | 44 | 17 | 7 | 4 | 15 | 4 | 4 | 5 |
| | | **TOTAL** | **200** | **88** | **34** | **14** | **8** | **30** | **8** | **8** | **10** |
| 6 | 240 | G | 120 | 53 | 20 | 8 | 5 | 18 | 5 | 5 | 6 |
| | | B | 120 | 53 | 20 | 8 | 5 | 18 | 5 | 5 | 6 |
| | | **TOTAL** | **240** | **106** | **40** | **16** | **10** | **36** | **10** | **10** | **12** |
| 7 | 280 | G | 140 | 61 | 23 | 10 | 6 | 21 | 6 | 6 | 7 |
| | | B | 140 | 61 | 23 | 10 | 6 | 21 | 6 | 6 | 7 |
| | | **TOTAL** | **280** | **122** | **46** | **20** | **12** | **42** | **12** | **12** | **14** |
| 8 | 320 | G | 160 | 71 | 28 | 11 | 6 | 24 | 6 | 6 | 8 |
| | | B | 160 | 71 | 28 | 11 | 6 | 24 | 6 | 6 | 8 |
| | | **TOTAL** | **320** | **142** | **56** | **22** | **12** | **48** | **12** | **12** | **16** |

**ಕೆಳಕಂಡಗುಂಪುಗಳಲ್ಲಿಮೀಸಲಾತಿಯನ್ನುಸಮತಳವಾಗಿ(Horizontally) ಈ ಕೆಳಕಂಡಂತೆಕಲ್ಪಿಸುವುದು.**

| ವಿಕಲಚೇತನರಿಗೆ / ಬುದ್ಧಿಮಾಂದ್ಯ | ಮಾಜಿ ಸೈನಿಕರ ಮಕ್ಕಳಿಗೆ | ರಾಜ್ಯ/ ರಾಷ್ಟ್ರಮಟ್ಟದ ಕ್ರೀಡಾವಿಜೇತರಿಗೆ | ಪುನರ್ವಸತಿ ಸಂತ್ರಸ್ತರಿಗೆ | ಗಣರಾಜ್ಯೋತ್ಸವಕ್ಯಾಂಪ್ ನಲ್ಲಿ ಭಾಗವಹಿಸಿ ಎನ್‌ಸಿಸಿ `ಎ' ಸರ್ಟಿಫಿಕೇಟ್ಪಡೆದವರಿಗೆ | ಸಿಬಿಎಸ್‌ಸಿ/ ಐಸಿಎಸ್ ಸಿವಿದ್ಯಾರ್ಥಿಗಳಿಗೆ |
|---|---|---|---|---|---|
| 5% | 2% | 5% | 5% | 5% | 5% |

## FORM-2

(ಮಾದರಿ ಪ್ರವೇಶ ಹಂಚಿಕೆ/ For illustration purpose only)

ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ

**SEAT MATRIX TO BE FOLLOWED IN AIDED PRE-UNIVERSITY COLLEGES.**

**ಸೂಚನೆ :- ಅನುದಾನಿತ ವಿಭಾಗಗಳಿಗೆ ಮಾತ್ರ (Management quota 20% + Govt. quota 80%)**

**(ರೋಸ್ಟರ್ ನಿಯಮವು ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಮೀಸಲಾತಿ ನಿಯಮದನ್ವಯ/ಆದೇಶ ಮಾರ್ಪಾಡಿಗೆ ಒಳಪಟ್ಟಿರುತ್ತದೆ).**

| SlNo | Total in Take | Management Quota | Girls (G) Boys (B) | Govt. Quota | GM 44 % | SC 17 % | ST 7 % | C-I 4% | 2A 15 % | 2B 4% | 3A 4% | 3B 5 % |
|---|---|---|---|---|---|---|---|---|---|---|---|---|
| **1** | 40 | 8 | G | 16 | 6 | 3 | 1 | 1 | 2 | 1 | 1 | 1 |
| | | | B | 16 | 6 | 3 | 1 | 1 | 2 | 1 | 1 | 1 |
| | | | | **32** | 12 | 6 | 2 | 2 | 4 | 2 | 2 | 2 |
| **2** | 80 | 16 | G | 32 | 15 | 5 | 2 | 1 | 5 | 1 | 1 | 2 |
| | | | B | 32 | 15 | 5 | 2 | 1 | 5 | 1 | 1 | 2 |
| | | | | **64** | 30 | 10 | 4 | 2 | 10 | 2 | 2 | 4 |
| **3** | 120 | 24 | G | 48 | 22 | 8 | 3 | 2 | 7 | 2 | 2 | 2 |
| | | | B | 48 | 22 | 8 | 3 | 2 | 7 | 2 | 2 | 2 |
| | | | | **96** | 44 | 16 | 6 | 4 | 14 | 4 | 4 | 4 |
| **4** | 160 | 32 | G | 64 | 27 | 11 | 4 | 3 | 10 | 3 | 3 | 3 |
| | | | B | 64 | 27 | 11 | 4 | 3 | 10 | 3 | 3 | 3 |
| | | | | **128** | 54 | 22 | 8 | 6 | 20 | 6 | 6 | 6 |
| **5** | 200 | 40 | G | 80 | 35 | 14 | 6 | 3 | 12 | 3 | 3 | 4 |
| | | | B | 80 | 35 | 14 | 6 | 3 | 12 | 3 | 3 | 4 |
| | | | | **160** | 70 | 28 | 12 | 6 | 24 | 6 | 6 | 8 |
| **6** | 240 | 48 | G | 96 | 42 | 16 | 7 | 4 | 14 | 4 | 4 | 5 |
| | | | B | 96 | 42 | 16 | 7 | 4 | 14 | 4 | 4 | 5 |
| | | | | **192** | 84 | 32 | 14 | 8 | 28 | 8 | 8 | 10 |
| **7** | 280 | 56 | G | 112 | 50 | 19 | 8 | 4 | 17 | 4 | 4 | 6 |
| | | | B | 112 | 50 | 19 | 8 | 4 | 17 | 4 | 4 | 6 |
| | | | | **224** | 100 | 38 | 16 | 8 | 34 | 8 | 8 | 12 |
| **8** | 320 | 64 | G | 128 | 57 | 22 | 9 | 5 | 19 | 5 | 5 | 6 |
| | | | B | 128 | 57 | 22 | 9 | 5 | 19 | 5 | 5 | 6 |
| | | | | **256** | 114 | 44 | 18 | 10 | 38 | 10 | 10 | 12 |

| ವಿಕಲಚೇತನರಿಗೆ/ ಬುದ್ಧಿಮಾಂದ್ಯ | ಮಾಜಿಸೈನಿ ಕರಮಕ್ಕಳಿಗೆ | ರಾಜ್ಯ/ ರಾಷ್ಟ್ರಮಟ್ಟದ ಕ್ರೀಡಾವಿಜೇತರಿಗೆ | ಪುನರ್ವಸತಿ ಸಂತ್ರಸ್ತರಿಗೆ | ಗಣರಾಜ್ಯೋತ್ಸವಕ್ಯಾಂಪ್ ನಲ್ಲಿಭಾಗವಹಿಸಿಎನ್‌ಸಿಸಿ `ಎ' ಸರ್ಟಿಫಿಕೇಟ್ಪಡೆದವರಿಗೆ | ಸಿಬಿಎಸ್‌ಸಿ/ ಐಸಿಎಸ್ ಸಿವಿದ್ಯಾರ್ಥಿಗಳಿಗೆ |
|---|---|---|---|---|---|
| 5% | 2% | 5% | 5% | 5% | 5% |

## FORM-3

(ಮಾದರಿ ಪ್ರವೇಶ ಹಂಚಿಕೆ / For illustration purpose only)

ಎಲ್ಲಾ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ

## SEAT MATRIX TO BE FOLLOWED IN UNAIDED PRE-UNIVERSITY COLLEGES.

**ಸೂಚನೆ :- ಅನುದಾನಿತ ಕಾಲೇಜುಗಳಲ್ಲಿನ ಅನುದಾನ ರಹಿತವಿ ಭಾಗಗಳಿಗೂ ಅನ್ವಯಿಸುತ್ತದೆ.**

**(ರೋಸ್ಟರ್ ನಿಯಮವು ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಮೀಸಲಾತಿ ನಿಯಮದನ್ವಯ/ಆದೇಶ ಮಾರ್ಪಾಡಿಗೆ ಒಳಪಟ್ಟಿರುತ್ತದೆ).**

| Sl No | Total in Take | Management Quota | Girls(G) Boys(B) | Govt. Quota | GM 44% | SC 17% | ST 7 % | C-I 4% | 2A 15% | 2B 4% | 3A 4% | 3B 5% |
|---|---|---|---|---|---|---|---|---|---|---|---|---|
| **1** | 40 | 20 | G | 10 | 4 | 2 | 1 | 0 | 2 | 0 | 0 | 1 |
| | | | B | 10 | 4 | 2 | 1 | 0 | 2 | 0 | 0 | 1 |
| | | | | **20** | 8 | 4 | 2 | 0 | 4 | 0 | 0 | 2 |
| **2** | 80 | 40 | G | 20 | 9 | 3 | 1 | 1 | 3 | 1 | 1 | 1 |
| | | | B | 20 | 9 | 3 | 1 | 1 | 3 | 1 | 1 | 1 |
| | | | | **40** | 18 | 6 | 2 | 2 | 6 | 2 | 2 | 2 |
| **3** | 120 | 60 | G | 30 | 13 | 5 | 2 | 1 | 5 | 1 | 1 | 2 |
| | | | B | 30 | 13 | 5 | 2 | 1 | 5 | 1 | 1 | 2 |
| | | | | **60** | 26 | 10 | 4 | 2 | 10 | 2 | 2 | 4 |
| **4** | 160 | 80 | G | 40 | 17 | 6 | 3 | 2 | 6 | 2 | 2 | 2 |
| | | | B | 40 | 17 | 6 | 3 | 2 | 6 | 2 | 2 | 2 |
| | | | | **80** | 34 | 12 | 6 | 4 | 12 | 4 | 4 | 4 |
| **5** | 200 | 100 | G | 50 | 21 | 8 | 4 | 2 | 8 | 2 | 2 | 3 |
| | | | B | 50 | 21 | 8 | 4 | 2 | 8 | 2 | 2 | 3 |
| | | | | **100** | 42 | 16 | 8 | 4 | 16 | 4 | 4 | 6 |
| **6** | 240 | 120 | G | 60 | 27 | 10 | 4 | 3 | 9 | 2 | 2 | 3 |
| | | | B | 60 | 27 | 10 | 4 | 3 | 9 | 2 | 2 | 3 |
| | | | | **120** | 54 | 20 | 8 | 6 | 18 | 4 | 4 | 6 |
| **7** | 280 | 140 | G | 70 | 31 | 11 | 5 | 3 | 10 | 3 | 3 | 4 |
| | | | B | 70 | 31 | 11 | 5 | 3 | 10 | 3 | 3 | 4 |
| | | | | **140** | 62 | 22 | 10 | 6 | 20 | 6 | 6 | 8 |
| **8** | 320 | 160 | G | 80 | 35 | 14 | 6 | 3 | 12 | 3 | 3 | 4 |
| | | | B | 80 | 35 | 14 | 6 | 3 | 12 | 3 | 3 | 4 |
| | | | | **160** | 70 | 28 | 12 | 6 | 24 | 6 | 6 | 8 |

.

| ವಿಕಲಚೇತನರಿಗೆ / ಬುದ್ಧಿಮಾಂದ್ಯ | ಮಾಜಿ ಸೈನಿಕರ ಮಕ್ಕಳಿಗೆ | ರಾಜ್ಯ/ ರಾಷ್ಟ್ರಮಟ್ಟದ ಕ್ರೀಡಾ ವಿಜೇತರಿಗೆ | ಪುನರ್ವಸತಿ ಸಂತ್ರಸ್ತರಿಗೆ | ಗಣರಾಜ್ಯೋತ್ಸವ ಕ್ಯಾಂಪ್‌ನಲ್ಲಿ ಭಾಗವಹಿಸಿ ಎನ್‌ಸಿಸಿ `ಎ' ಸರ್ಟಿಫಿಕೇಟ್ಪಡೆದವರಿಗೆ | ಸಿಬಿಎಸ್‌ಸಿ/ ಐಸಿಎಸ್ ಸಿವಿದ್ಯಾರ್ಥಿಗಳಿಗೆ |
|---|---|---|---|---|---|
| 5% | 2% | 5% | 5% | 5% | 5% |

ವಿಶೇಷಸೂಚನೆ:

೧. ಖಾಸಗಿ ಅನುದಾನಿತ ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ/ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಯ ಕಾಲೇಜುಗಳಲ್ಲಿ ಈ ಪ್ರವೇಶಗಳನ್ನು ಅವರ ಜಾತಿ ಅಥವಾ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ದಾಖಲಾತಿಗಳನ್ನು ನೀಡಬೇಕು.

೨. ಎಲ್ಲಾ ವರ್ಗಗಳ ಅನುದಾನ ರಹಿತ ಕಾಲೇಜುಗಳಲ್ಲಿ ಈ ಪ್ರವೇಶಗಳನ್ನು ಸಂಸ್ಥೆಯ ವಿವೇಚನೆಯಂತೆ ಹಂಚಬಹುದು.

ಸರ್ಕಾರದ ಆದೇಶ ಸಂಖ್ಯೆ:-ಇಡಿ 27 ಮಾಹಿತಿ 2012 (ಭಾಗ-1) ದಿನಾಂಕ:-18-06-2014 ರಲ್ಲಿನ ಕ್ರಮ ಸಂಖ್ಯೆ 08 ರ ಉಪಕ್ರಮ ಸಂಖ್ಯೆ 04 ರಲ್ಲಿನ ಅಲ್ಪಸಂಖ್ಯಾತ ಸಂಸ್ಥೆ ಶಾಲೆಗಳೆಂದು ಘೋಷಿಸಲು ಆ ಶಾಲೆಗಳು ಆಯಾ ಶೈಕ್ಷಣಿಕ ವರ್ಷದಲ್ಲಿ ಕಡ್ಡಾಯವಾಗಿ ಕನಿಷ್ಠ ಶೇಕಡ 25 ರಷ್ಟು ಆಯಾ ಭಾಷಾ/ಆಯಾ ಮತೀಯ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳನ್ನು ಹೊಂದಿರಬೇಕೆಂಬ ಷರತ್ತನ್ನು ವಿಧಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:- MWDLMR/2/2024 (PART-5)ದಿನಾಂಕ:-16-03-2024 ಮತ್ತು 18-03-2024 ರಂತೆ ಸದರಿ ಷರತ್ತನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳಿಗೆ ಮಾತ್ರ ಅನ್ವಯವಾಗುವಂತೆ ರದ್ದುಪಡಿಸಿ ಆದೇಶಿಸಲಾಗಿರುತ್ತದೆ.

## ಅಧ್ಯಾಯ-04
## ಶುಲ್ಕಗಳವಿವರ

ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ರೆಗ್ಯುಲರ್/ಪುನರಾವರ್ತಿತ/ಖಾಸಗಿ ಅಭ್ಯರ್ಥಿಗಳಿಂದ ಸಂಗ್ರಹಿಸಿದ ಯಾವುದೇ ಶುಲ್ಕಕ್ಕೆ ಕಡ್ಡಾಯವಾಗಿ ರಸೀದಿಯನ್ನು ನೀಡತಕ್ಕದ್ದು ಹಾಗೂ ಅವುಗಳ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು.

1. ಸರ್ಕಾರಿ ಕಾಲೇಜುಗಳಲ್ಲಿ ಇಲಾಖೆಯಿಂದ ಸರಬರಾಜು ಮಾಡುವ ಅಥವಾ ನೇರವಾಗಿ ಸರ್ಕಾರಿ ಪುಸ್ತಕ ಮಳಿಗೆಯಿಂದ ಖರೀದಿಸಿದ ರಸೀದಿ ಪುಸ್ತಕಗಳನ್ನು ದಾಸ್ತಾನು ವಹಿಗೆ ತೆಗೆದುಕೊಂಡ ನಂತರವೇ ಉಪಯೋಗಿಸುವುದು. ವಿಶೇಷ ಸಂದರ್ಭಗಳಲ್ಲಿ ರಸೀದಿಗಳು ಲಭ್ಯವಿಲ್ಲದಿದ್ದಾಗ ಮಾತ್ರ ಜಿಲ್ಲಾ ಉಪನಿರ್ದೇಶಕರಿಂದ ಅನುಮೋದಿಸಿದ ಖಾಸಗಿ ರಸೀದಿ ಪುಸ್ತಕಗಳನ್ನು ದಾಸ್ತಾನು ವಹಿಗೆ ತೆಗೆದುಕೊಂಡ ನಂತರವೇ ಉಪಯೋಗಿಸತಕ್ಕದ್ದು.
2. ಖಾಸಗಿ ಅನುದಾನಿತ/ಅನುದಾನರಹಿತ ಕಾಲೇಜುಗಳಲ್ಲಿ ಉಪಯೋಗಿಸುವ ರಸೀದಿಪುಸ್ತಕಗಳನ್ನು ದಾಸ್ತಾನು ವಹಿಗೆ ತೆಗೆದುಕೊಂಡು, ಪ್ರತಿ ವರ್ಷವು ಆಯಾ ವರ್ಷದಲ್ಲಿ ಬಳಸಲಾಗುವ ರಸೀದಿ ಪುಸ್ತಕಗಳನ್ನು ಜಿಲ್ಲಾಉಪನಿರ್ದೇಶಕರ ಅನುಮೋದನೆ ಪಡೆದ ನಂತರವೇ ಉಪಯೋಗಿಸುವುದು ಅಥವಾ ಗಣಕೀಕೃತರ ರಸೀದಿ ನೀಡುತ್ತಿದ್ದಲ್ಲಿ ಪ್ರತಿ ಮಾಹೆಯ 05ನೇ ದಿನಾಂಕದೊಳಗೆ ಹಿಂದಿನ ಮಾಹೆಯ ರಸೀದಿ ವಿವರಗಳನ್ನು ಜಿಲ್ಲಾ ಉಪನಿರ್ದೇಶಕರಿಂದ ದೃಢಪಡಿಸಿಕೊಳ್ಳತಕ್ಕದ್ದು.
3. ಸರ್ಕಾರಿ /ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ದಾಖಲಾಗುವ ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಬೋಧನಾ ಶುಲ್ಕಗಳನ್ನು ನಿಗದಿತ ದಿನಾಂಕದೊಳಗೆ ಕೆಳಗೆ ವಿವರಿಸಿದಂತೆ ಕ್ರಮವಹಿಸುವುದು.
4. ಸರ್ಕಾರಿ ಆದೇಶ ಸಂಖ್ಯೆ ಇಪಿ 218 ಎಸ್‌ಹೆಚ್‌ಹೆಚ್ 2021 ಬೆಂಗಳೂರು, ದಿನಾಂಕ:-04.01.2022.ರಂತೆ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಕಿರಿಯರೆಡ್ ಕ್ರಾಸ್ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸದರಿ ಘಟಕಗಳ ಚಟುವಟಿಕೆಗಾಗಿ ಪ್ರತಿ ವಿದ್ಯಾರ್ಥಿಯಿಂದ ರೂ.25/- ಶುಲ್ಕವನ್ನು ಪಡೆಯಲು ಸರ್ಕಾರವು ಆದೇಶಿಸಿದೆ.

2025-26ನೇ ಶೈಕ್ಷಣಿಕ ವರ್ಷದಲ್ಲಿ ವಿವಿಧ ಶುಲ್ಕಗಳ ಸಂದಾಯದ ಅಥವಾ ವೆಚ್ಚದ/ಬಳಕೆಯ ಮಾಹಿತಿ.

ಅ) ಸರ್ಕಾರಿ ಶುಲ್ಕಗಳು.

| ಕ್ರ. ಸಂ | ಶುಲ್ಕಗಳು | ಸಂದಾಯ/ಬಳಕೆವಿವರ | ಪಾವತಿಸಬೇಕಾದ ಲೆಕ್ಕಶೀರ್ಷಿಕೆ (ಖಜಾನೆಗೆ ಪಾವತಿಸಲು ಕೊನೆಯ ದಿನಾಂಕ) |
|---|---|---|---|
| 01 | ಬೋಧನಾ ಶುಲ್ಕ | ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳು ಮಾತ್ರ ಸರ್ಕಾರಿ ಖಾತೆಗೆ ಜಮಾ ಮಾಡಬೇಕು | ಬೋಧನಾ ಶುಲ್ಕವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನವರು ಲೆಕ್ಕ ಶೀರ್ಷಿಕೆ:**0202-01-102-1-06** ಗೆ K2 ಮುಖಾಂತರ ಜಮಾ ಮಾಡತಕ್ಕದ್ದು ಮತ್ತು SATS ನಲ್ಲಿ Upload ಮಾಡುವುದು.<br><br>ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜಿನವರು ಶೇ.50 ರಷ್ಟು ಬೋಧನಾ ಶುಲ್ಕ ವನ್ನು Karnataka-1 ಮೂಲಕ Online ನಲ್ಲಿ ಜಮಾ ಮಾಡುವುದು. ಉಳಿದ ಶೇ.50 ರಷ್ಟು ಬೋಧನಾ ಶುಲ್ಕ ವನ್ನು ಕಾಲೇಜಿನ ಖಾತೆಗೆ ಜಮಾ ಮಾಡುವುದು. UTR Number ನ್ನು SATS ನಲ್ಲಿ ನಮೂದಿಸುವುದು.<br><br>ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳು ಶೇ.100 ರಷ್ಟು ಬೋಧನಾ ಶುಲ್ಕ ವನ್ನು ಕಾಲೇಜಿನ ಖಾತೆಗೆ ಜಮಾ ಮಾಡುವುದು. UTR Number ನ್ನು SATS ನಲ್ಲಿ ನಮೂದಿಸುವುದು. |
| 02 | ನೋಂದಣಿ ಶುಲ್ಕ | ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪದವಿ ಪೂರ್ವ ಕಾಲೇಜಿನವರು ಸರ್ಕಾರಿ ಖಾತೆಗೆ ಜಮಾ ಮಾಡಬೇಕು. | ಸರ್ಕಾರಿ ಪದವಿ ಪೂರ್ವ ಕಾಲೇಜಿನವರು ನೋಂದಣಿ ಶುಲ್ಕವನ್ನು ಸಂದಾಯ ಮಾಡಲು ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಆಯಾ ಕಾರ್ಯನಿರತ ದಿನದೊಳಗೆ ಲೆಕ್ಕ ಶೀರ್ಷಿಕೆ (0202-01-102-1-06)ಗೆ K2 ಮುಖಾಂತರ ಜಮಾ ಮಾಡತಕ್ಕದ್ದು. ಮತ್ತು SATS ನಲ್ಲಿ Upload ಮಾಡುವುದು. |

| | | | |
|---|---|---|---|
| | | | ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜಿನವರು ನೋಂದಣಿ ಶುಲ್ಕವನ್ನು ಸಂದಾಯ ಮಾಡಲು ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಆಯಾ ಕಾರ್ಯನಿರತ ದಿನದೊಳಗೆ Karnataka-1 ಮೂಲಕ Online ನಲ್ಲಿ ಜಮಾ ಮಾಡುವುದು. |
| 03 | ದಾಖಲಾತಿ ಶುಲ್ಕ | ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪದವಿ ಪೂರ್ವ ಕಾಲೇಜಿನವರು ಸರ್ಕಾರಿ ಖಾತೆಗೆ ಜಮಾ ಮಾಡಬೇಕು. | ಸರ್ಕಾರಿ ಪದವಿ ಪೂರ್ವ ಕಾಲೇಜಿನವರು ದಾಖಲಾತಿ ಶುಲ್ಕವನ್ನು ಸಂದಾಯ ಮಾಡಲು ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಆಯಾ ಕಾರ್ಯನಿರತ ದಿನದೊಳಗೆ ಲೆಕ್ಕ ಶೀರ್ಷಿಕೆ(0202-01-102-1-06)ಗೆ K2 ಮುಖಾಂತರ ಜಮಾ ಮಾಡತಕ್ಕದ್ದು. ಮತ್ತು SATS ನಲ್ಲಿ Upload ಮಾಡುವುದು.<br><br>ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜಿನವರು ದಾಖಲಾತಿ ಶುಲ್ಕವನ್ನು ಸಂದಾಯ ಮಾಡಲು ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಆಯಾ ಕಾರ್ಯನಿರತ ದಿನದೊಳಗೆ Karnataka-1 ಮೂಲಕ Online ನಲ್ಲಿ ಜಮಾ ಮಾಡುವುದು. |
| 04 | ವಿಳಂಬ ದಾಖಲಾತಿ ಶುಲ್ಕ ಮತ್ತು ವಿಶೇಷ ವಿಳಂಬ ದಾಖಲಾತಿ ಶುಲ್ಕ | ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪದವಿ ಪೂರ್ವ ಕಾಲೇಜಿನವರು ಸರ್ಕಾರಿ ಖಾತೆಗೆ ಜಮಾ ಮಾಡಬೇಕು. | ಸರ್ಕಾರಿ ಪದವಿ ಪೂರ್ವ ಕಾಲೇಜಿನವರು ಸದರಿ ಶುಲ್ಕಗಳನ್ನು ಸಂದಾಯ ಮಾಡಲು ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಆಯಾ ಕಾರ್ಯನಿರತ ದಿನದೊಳಗೆ ಲೆಕ್ಕ ಶೀರ್ಷಿಕೆ(0202-01-102-1-06)ಗೆ K2 ಮುಖಾಂತರ ಜಮಾ ಮಾಡತಕ್ಕದ್ದು. ಮತ್ತು SATS ನಲ್ಲಿ Upload ಮಾಡುವುದು.<br><br>ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜಿನವರು ಸದರಿ ಶುಲ್ಕಗಳನ್ನು ಸಂದಾಯ ಮಾಡಲು ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಆಯಾ ಕಾರ್ಯನಿರತ ದಿನದೊಳಗೆ Karnataka-1 ಮೂಲಕ Online ನಲ್ಲಿ ಜಮಾ ಮಾಡುವುದು. |
| 05 | ಭಾಗ-1 ರ ಭಾಷೆ/ಭಾಗ-2ರ ವಿಷಯಗಳ ಸ್ವಂತ ಕಲಿಕೆ (ಪ್ರಾಯೋಗಿಕ ವಿಷಯವನ್ನು ಹೊರತುಪಡಿಸಿ) | ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜಿನವರು ಸರ್ಕಾರಿ ಖಾತೆಗೆ ಜಮಾ ಮಾಡಬೇಕು. | ಸರ್ಕಾರಿ ಶುಲ್ಕಗಳನ್ನು ಸಂದಾಯ ಮಾಡಲು ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಆಯಾ ಕಾರ್ಯನಿರತ ದಿನದೊಳಗೆ ಲೆಕ್ಕ ಶೀರ್ಷಿಕೆ(0202-01-102-1-06) ಗೆ ಜಮಾ ಮಾಡತಕ್ಕದ್ದು. ಮತ್ತು SATS ನಲ್ಲಿ Upload ಮಾಡುವುದು. |
| 06 | ಕಾಲೇಜು/ಸಂಯೋಜನೆ ಬದಲಾವಣೆ ಶುಲ್ಕ | ಸಂಬಂಧಿಸಿದ ವಿದ್ಯಾರ್ಥಿಗಳು ತಮ್ಮ ಹೆಸರಿನಲ್ಲಿ ಸರ್ಕಾರಿ ಖಾತೆಗೆ ಜಮಾ ಮಾಡಬೇಕು. | ಲೆಕ್ಕಶೀರ್ಷಿಕೆ -0202-01-102-1-06 ಗೆ ಜಮಾ ಮಾಡತಕ್ಕದ್ದು.(K2 ಚಲನ್) ಮತ್ತು SATS ನಲ್ಲಿ Upload ಮಾಡುವುದು. |
| 07 | ದ್ವಿತೀಯ ಪಿಯುಸಿ ಪರೀಕ್ಷಾ ಶುಲ್ಕ | KSEAB ಯಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ / ಸುತ್ತೋಲೆಯಂತೆ □□□ಮವಹಿಸುವುದು.<br>**ಸೂಚನೆ: SATS ಮೂಲಕ Karnataka-1 ಮೂಲಕ Online ನಲ್ಲಿ ಜಮಾ ಮಾಡಬಾರದು.** | |

. ಅ) ಸರ್ಕಾರೇತರ ಶುಲ್ಕಗಳು.

ಪ್ರಾಚಾರ್ಯರ ಪದ ನಾಮದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ತೆರೆದಿರುವ ಉಳಿತಾಯ ಖಾತೆಗೆ ಜಮಾ ಮಾಡಬೇಕು. ಪ್ರತಿ ವರ್ಷ ವಸೂಲಾದ ವಿವಿಧ ಶುಲ್ಕಗಳನ್ನು ಅದೇ ವರ್ಷದಲ್ಲಿ ಆದ್ಯತೆಯ ಮೇರೆಗೆ ಉಪಯೋಗಿಸತಕ್ಕದ್ದು.)

| ಕ್ರ.ಸಂ | ಸರ್ಕಾರೇತರಶುಲ್ಕಗಳು | ಷರಾ |
|---|---|---|
| 01 | ಅರ್ಜಿ ಶುಲ್ಕ | ಅರ್ಜಿ ಶುಲ್ಕದ ಹಣವನ್ನು ದಾಖಲಾತಿ ಅರ್ಜಿಗಳನ್ನು, ವಿದ್ಯಾರ್ಥಿಗಳಿಗೆ ನೀಡುವ ಗುರುತಿನ ಚೀಟಿಗಳನ್ನು, ಕಾಲೇಜಿನ ಲೆಟರ್ ಹೆಡ್‌ಗಳನ್ನು, ನಡತೆ ಪ್ರಮಾಣ/ವ್ಯಾಸಂಗ ಪ್ರಮಾಣ ಪತ್ರಗಳನ್ನು ಹಾಗೂ ದಾಖಲಾತಿ ಪ್ರಕ್ರಿಯೆಗೆ ಬೇಕಾಗುವ ಇತರೆ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಲು ಬಳಸಬಹುದು. ವೆಚ್ಚಗಳ ಲೆಕ್ಕ ಪತ್ರಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. |
| 02 | ಕ್ರೀಡಾ ಶುಲ್ಕ | ಸರ್ಕಾರೇತರ ಬ್ಯಾಂಕ್ ಖಾತೆಗೆ ಜಮಾಮಾಡಬೇಕು. ದಾಖಲಾತಿ ಮುಗಿದ ನಂತರ ದೈಹಿಕ ಶಿಕ್ಷಕರ/ಕ್ರೀಡಾ ಕಾರ್ಯದರ್ಶಿಗಳಿಂದ ಬಂದ ಬೇಡಿಕೆಗಳನ್ನು ಕಾಲೇಜಿನ ಅಭಿವೃದ್ಧಿ ಸಮಿತಿಯಿಂದ ಅನುಮೋದನೆ ಪಡೆದು ನಿಯಮಾನುಸಾರ ಈ ಕೆಳಕಂಡಂತೆ ಕ್ರೀಡಾ ಶುಲ್ಕದ ಹಣವನ್ನು ಖರ್ಚು ಮಾಡಬಹುದು:<br>1. ಕ್ರೀಡಾ ಸಾಮಾಗ್ರಿಗಳನ್ನು ಖರೀದಿಸಲು ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕಾಲೇಜಿನ ವಿದ್ಯಾರ್ಥಿಗಳಿಗೆ ಸಮವಸ್ತ್ರ ಖರೀದಿಸಲು 65%ರಷ್ಟು.<br>2. ಪಂದ್ಯ ಮತ್ತು ಟೂರ್ನಿಮೆಂಟ್ ಗಳನ್ನು ನಡೆಸಲು 30%ರಷ್ಟು.<br>3. ಇತರೆ ಖರ್ಚುಗಳಿಗೆ 5% ರಷ್ಟು. |
| 03 | ಗ್ರಂಥಾಲಯ/<br>ವಾಚನಾಲಯ ಶುಲ್ಕ | ದಾಖಲಾತಿ ಮುಗಿದ ನಂತರ ಗ್ರಂಥಪಾಲಕರ/ಗ್ರಂಥಾಲಯ ಕಾರ್ಯದರ್ಶಿಯಿಂದ ಬೇಡಿಕೆ ಬಂದ ನಂತರ ಸ್ಟಾಫ್‌ಕೌನ್ಸಿಲ್‌ನಲ್ಲಿ ನಿರ್ಧರಿಸಿದ ನಂತರ ಕಾಲೇಜಿನ ಅಭಿವೃದ್ಧಿ ಸಮಿತಿಯಿಂದ ಅನುಮೋದನೆ ಪಡೆದು ನಿಯಮಾನುಸಾರ ಈಕೆಳಕಂಡಂತೆ ಗ್ರಂಥಾಲಯ/ವಾಚನಾಲಯ ಶುಲ್ಕದ ಹಣವನ್ನು ಖರ್ಚುಮಾಡಬಹುದು:<br>1.ಗ್ರಂಥಾಲಯಕ್ಕೆ ಪಠ್ಯಪುಸ್ತಕಗಳನ್ನು ಖರೀದಿಸಲು 65% ರಷ್ಟು.<br>2.ದಿನ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಖರೀದಿಸಲು 20% ರಷ್ಟು<br>3.ಪುಸ್ತಕಗಳ ಬೈಂಡಿಂಗ್ ಗೊಳಿಸಲು 10% ರಷ್ಟು<br>4.ಪೀಠೋಪಕರಣಗಳ ದುರಸ್ತಿಗಾಗಿ 5% ರಷ್ಟು |
| 04 | ತರಗತಿ ಪರೀಕ್ಷೆ ಶುಲ್ಕ | ಪರೀಕ್ಷಾ ಸಮಿತಿಯವರ ಬೇಡಿಕೆಯ ಪ್ರಕಾರ ಸ್ಟಾಫ್‌ಕೌನ್ಸಿಲ್‌ನಲ್ಲಿ ಅನುಮೋದನೆ ಪಡೆದು ನಿಯಮಾನುಸಾರ ತರಗತಿ ಪರೀಕ್ಷೆಗೆ ಸಂಬಂಧಿಸಿದ ವಸ್ತುಗಳನ್ನು ಖರೀದಿಸಬಹುದು. ಖರೀದಿಸಿದ ವಸ್ತುಗಳನ್ನು ತರಗತಿ ಪರೀಕ್ಷಾ ದಾಸ್ತಾನು ವಹಿಗೆ ತೆಗೆದುಕೊಂಡು ವೆಚ್ಚಗಳ ಲೆಕ್ಕಪತ್ರಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. |
| 05 | ಪ್ರಥಮ ಪಿಯುಸಿ ಪ್ರಾಯೋಗಿಕ ಪರೀಕ್ಷಾ ಶುಲ್ಕ | ವಿಜ್ಞಾನ ಉಪನ್ಯಾಸಕರಿಂದ ಬೇಡಿಕೆ ಪಡೆದುಕೊಂಡು, ಸ್ಟಾಪ್‌ಕೌನ್ಸಿಲ್ ನಅನುಮೋದನೆ ನಂತರ ವಾರ್ಷಿಕ ಪ್ರಾಯೋಗಿಕ ಪರೀಕ್ಷೆಗೆ ಬೇಕಾಗುವ ವಸ್ತುಗಳನ್ನು ಖರೀದಿಸಲು ನಿಯಮಾನುಸಾರ ಖರ್ಚು ಮಾಡಬಹುದು. ಖರೀದಿಸಿದ ವಸ್ತುಗಳನ್ನು ಸಂಬಂಧಿಸಿದ ಪ್ರಯೋಗಶಾಲೆಯ ದಾಸ್ತಾನು ವಹಿಗಳಿಗೆ ತೆಗೆದುಕೊಂಡು ವೆಚ್ಚಗಳ ಲೆಕ್ಕಪತ್ರಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. |

| | | |
|---|---|---|
| 06 | ಪ್ರಯೋಗಾಲಯ ಶುಲ್ಕ | ದಾಖಲಾತಿ ಮುಗಿದ ನಂತರ ಪ್ರಯೋಗಾಲಯಗಳ ವಿಜ್ಞಾನ ಉಪನ್ಯಾಸಕರಿಂದ ಬೇಡಿಕೆ ಪಡೆದು ಕೊಂಡು, ಸ್ಟಾಫ್‌ಕೌನ್ಸಿಲ್‌ನ ಅನುಮೋದನೆ ಪಡೆದುಕೊಂಡು ಈಕೆಳಕಂಡಂತೆ ಗ್ರಂಥಾಲಯ/ ವಾಚನಾಲಯ ಶುಲ್ಕದ ಹಣವನ್ನು ಆದಷ್ಟು ಸಮನಾಗಿ ಎಲ್ಲಾ ಪ್ರಯೋಗ ಶಾಲೆಗಳಿಗೆ ಹಂಚಿ ಈ ಕೆಳಕಂಡಂತೆ ಪ್ರಯೋಗಾಲಯ ಶುಲ್ಕ ಹಣವನ್ನು ನಿಯಮಾನುಸಾರ ಖರ್ಚು ಮಾಡಬಹುದು. ಖರೀದಿಸಿದ ವಸ್ತುಗಳನ್ನು ಸಂಬಂಧಿಸಿದ ಪ್ರಯೋಗ ಶಾಲೆಯ ದಾಸ್ತಾನು ವಹಿಗಳಿಗೆ ತೆಗೆದುಕೊಂಡು ವೆಚ್ಚಗಳ ಲೆಕ್ಕಪತ್ರಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.<br>1. ಹೊಸ ಉಪಕರಣಗಳನ್ನು ಖರೀದಿಸಲು 50% ರಷ್ಟು<br>2. ನಶಿಸಿ ಹೋಗುವ (Perishable) ವಸ್ತುಗಳನ್ನು ಖರೀದಿಸಲು 40% ರಷ್ಟು<br>3. ಉಪಕರಣಗಳ ದುರಸ್ತಿಗಳಿಗೆ 10% ರಷ್ಟು. |
| 07 | ಶೌಚಾಲಯನಿರ್ವಹಣೆ ಶುಲ್ಕ | ದಾಖಲಾತಿ ಮುಗಿದ ನಂತರ ಸ್ಟಾಫ್ ಕೌನ್ಸಿಲ್‌ನ ಅನುಮೋದನೆ ಪಡೆದುಕೊಂಡು, ಶೌಚಾಲಯದ ನಿರ್ವಹಣೆ ಮಾಡಬೇಕು. ವೆಚ್ಚಗಳ ಲೆಕ್ಕ ಪತ್ರಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. |
| 08 | ವಿದ್ಯುತ್ ಮತ್ತು ನೀರಿನ ಶುಲ್ಕ | ದಾಖಲಾತಿ ಮುಗಿದ ನಂತರ ಸ್ಟಾಫ್ ಕೌನ್ಸಿಲ್‌ನ ಅನುಮೋದನೆ ಪಡೆದುಕೊಂಡು, ವಿದ್ಯಾರ್ಥಿಗಳಿಗೆ ನೀರಿನ ವ್ಯವಸ್ಥೆ ಮಾಡಬೇಕು ಹಾಗೂ ವಿದ್ಯುತ್ ವೆಚ್ಚಗಳ ಲೆಕ್ಕಪತ್ರಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. |
| 09 | ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಶುಲ್ಕ | ದಾಖಲಾತಿ ಮುಗಿದ ನಂತರ ಸ್ಟಾಫ್‌ಕೌನ್ಸಿಲ್‌ನ ಅನುಮೋದನೆ ಪಡೆದುಕೊಂಡು ವಿವಿಧ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಖರೀದಿಸಿದ ವಸ್ತುಗಳನ್ನು ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ದಾಸ್ತಾನು ವಹಿಗೆ ತೆಗೆದುಕೊಂಡು ವೆಚ್ಚಗಳ ಲೆಕ್ಕಪತ್ರಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. |
| 10 | ಶಿಕ್ಷಕರ ದಿನಾಚರಣೆಯ ಬಾವುಟ ಶುಲ್ಕ | ಸಂಬಂಧಿಸಿದ ಖಾತೆಗೆ ಜಮಾ ಮಾಡಿದ ನಂತರ, ಒಟ್ಟು ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳಲ್ಲಿ ಸಂಬಂಧಿಸಿದ ಖಾತೆಗೆ ಜಮಾ ಮಾಡಿ ಚಲನ್ ಅನ್ನು ನಿಗದಿತ ದಿನಾಂಕದೊಳಗೆ ಕಾರ್ಯದರ್ಶಿ, ಖಜಾಂಚಿಗಳ ಕಛೇರಿ ,ಕರ್ನಾಟ ಕರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಕಾವೇರಿ ಭವನ ಎದುರು, ಬೆಂಗಳೂರು-560009. ಇವರಿಗೆ ಕಡ್ಡಾಯವಾಗಿ ಕಳುಹಿಸಬೇಕು. |
| 11 | ಶಿಕ್ಷಕರ ಕಲ್ಯಾಣ ನಿಧಿ ಶುಲ್ಕ | ವಸೂಲಾದ ಶುಲ್ಕವನ್ನು ಸಂಬಂಧಿಸಿದ ಖಾತೆಗೆ ಜಮಾ ಮಾಡಿದ ನಂತರ, ಒಟ್ಟು ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ಖಾತೆಗಳಲ್ಲಿ ಸಂಬಂಧಿಸಿದ ಖಾತೆಗೆ ಜಮಾ ಮಾಡಿ ಚಲನ್ ಅನ್ನು ನಿಗದಿತ ದಿನಾಂಕದೊಳಗೆ ಕಾರ್ಯದರ್ಶಿ, ಖಜಾಂಚಿಗಳ ಕಛೇರಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಶಿಕ್ಷಕರ ಸದನ, ಕಾವೇರಿ ಭವನ ಎದುರು, ಬೆಂಗಳೂರು-560009 ಇವರಿಗೆ ಕಡ್ಡಾಯವಾಗಿ ಕಳುಹಿಸಬೇಕು. |
| 12 | ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿನಿಧಿ | ಈ ಶೈಕ್ಷಣಿಕ ವರ್ಷದಲ್ಲಿ ದಾಖಲಾತಿಗೆ ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಸೂಲಾದ ವಿದ್ಯಾರ್ಥಿಗಳ ಕಲ್ಯಾಣ ನಿಧಿ ಶುಲ್ಕವನ್ನು ಸರ್ಕಾರೇತರ ಬ್ಯಾಂಕ್ ಖಾತೆಗೆ ಜಮಾ ಮಾಡಿದ ನಂತರ, ಒಟ್ಟು ಮೊತ್ತದ 40% ರಷ್ಟು ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳಲ್ಲಿ ಸಂಬಂಧಿಸಿದ ಖಾತೆಗೆ ಜಮಾ ಮಾಡಿ ಚಲನ್ ಅನ್ನು ನಿಗದಿತ ದಿನಾಂಕದೊಳಗೆ ಕಾರ್ಯದರ್ಶಿ, ಖಜಾಂಚಿಗಳ ಕಛೇರಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಕಾವೇರಿ ಭವನ ಎದುರು, ಬೆಂಗಳೂರು-560009. ಇವರಿಗೆ ಕಡ್ಡಾಯವಾಗಿ ಕಳುಹಿಸಬೇಕು. ಪ್ರತಿ ವರ್ಷದ ಸೆಪ್ಟಂಬರ್15 ರೊಳಗಾಗಿ ಉಳಿದ 60%ರಷ್ಟು ಹಣವನ್ನು ಈ ಕೆಳಗಿನಂತೆ ಉಪಯೋಗಿಸಬೇಕು: |

| | | |
|---|---|---|
| | | • ಪ್ರಥಮ ಮತ್ತು ದ್ವಿತೀಯ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಾಜರಾತಿ, ನಡತೆ, ಶೈಕ್ಷಣಿಕ ಪ್ರಗತಿ (ಹಿಂದಿನವರ್ಷಗಳಲ್ಲಿ ಗಳಿಸಿದ ಅಂಕಗಳು) ಮತ್ತು ಆರ್ಥಿಕ ಹಿಂದುಳಿಯುವಿಕೆ ಆಧಾರದ ಮೇಲೆ ಉಪನ್ಯಾಸಕರ ಸಭೆಯಲ್ಲಿ ಚರ್ಚಿಸಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪಟ್ಟಿಯನ್ನು ತಯಾರಿಸಿ, ಸಂಯೋಜನೆವಾರು ಕನಿಷ್ಠ ಒಂದು ಬಹುಮಾನ ಬರುವಂತೆ ಪುಸ್ತಕ ರೂಪದಲ್ಲಿ ವಿತರಿಸಬೇಕು. ಈ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರಿಗೆ ವರದಿಯನ್ನು ತಪ್ಪದೆ ಸಲ್ಲಿಸತಕ್ಕದ್ದು. |
| 13 | ವಿಶೇಷ ಕ್ರೀಡಾ ನಿಧಿ | • ವಸೂಲಾದ ಶುಲ್ಕವನ್ನು ಸಂಬಂಧಿಸಿದ ಖಾತೆಗೆ ಜಮಾ ಮಾಡಿದ ನಂತರ, ಒಟ್ಟು ಮೊತ್ತವನ್ನು RTGS/NEFT ಮುಖಾಂತರ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ಬೆಂಗಳೂರು.ಇವರಹೆಸರಿನಲ್ಲಿರುವ ಯೂನಿಯನ್ ಬ್ಯಾಂಕ್ (ಕ್ರೀಡಾ) ಖಾತೆಗೆ ನಿಗದಿತ ದಿನಾಂಕದೊಳಗೆ ಜಮಾಮಾಡಿ, ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.<br>• ಕ್ರೋಢೀಕೃತ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು, (ಕ್ರೀಡೆ), ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), 18ನೇ ಕ್ರಾಸ್, ಸಂಪಿಗೆರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012, ಇವರ ವಿಳಾಸಕ್ಕೆ ತಮ್ಮ ಜಿಲ್ಲೆಯ ಕಾಲೇಜುವಾರು ಪಟ್ಟಿಯೊಂದಿಗೆ, ಕ್ರೀಡಾ ನಿಧಿಯ ಸಂಗ್ರಹವಾದ ಮೊತ್ತದ ಪೂರ್ಣ ಮಾಹಿತಿಯನ್ನು ನಿಗದಿತ ದಿನಾಂಕದೊಳಗೆ ಮೇಲೆ ಹೇಳಿರುವ ವಿಳಾಸಕ್ಕೆ ಕಳುಹಿಸತಕ್ಕದ್ದು. |
| 14 | ಭಾರತ ಸೇವಾ ದಳ | ನೋಂದಣಿ ಶುಲ್ಕವಾಗಿ ರೂ.100/-ಗಳನ್ನು ಪ್ರತಿ ಕಾಲೇಜಿನಿಂದ ಪ್ರಧಾನ ಕಾರ್ಯದರ್ಶಿಗಳು, ಭಾರತ ಸೇವಾದಳ, ಕುಮಾರ ಕೃಪರಸ್ತೆ, ಬೆಂಗಳೂರು-560001 ಇವರಿಗೆ ಶಾಖಾ ನೋಂದಣಿ ಶುಲ್ಕವಾಗಿ ಚಲನ್ ಮೂಲಕ ಸಂದಾಯ ಮಾಡಿ ಉಳಿದ ಮೊತ್ತವನ್ನು ಪ್ರಾಂಶುಪಾಲರ ಖಾತೆಗೆ ಜಮಾ ಮಾಡಿಕೊಂಡು, ಕಾಲೇಜಿನ ಸೇವಾದಳ ಚಟುವಟಿಕೆಗಳಿಗೆ ಮಾತ್ರ ವಿನಿಯೋಗಿಸಬೇಕು. |
| 15 | ರೆಡ್ ಕ್ರಾಸ್ | ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ರೂ.25/-ಗಳನ್ನು ರೆಡ್‌ಕ್ರಾಸ್ ಶುಲ್ಕವಾಗಿ ಸಂಗ್ರಹಿಸಿ, ಅದರಲ್ಲಿರೂ.10/-ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು-560001 ಇಲ್ಲಿಗೆ ಆನ್ ಲೈನ್ ಮೂಲಕ ಅಥವಾ ಖಾತೆ ಸಂಖ್ಯೆ 110056360421 ಕೆನರ ಬ್ಯಾಂಕ್ KSFC Complex Branch ಇಲ್ಲಿಗೆ ಪಾವತಿಸಲು ಸೂಚಿಸಿದೆ. ಹಾಗೂ ರೂ.15/- ಗಳನ್ನು ಕಿರಿಯ ರೆಡ್‌ಕ್ರಾಸ್ ಚಟುವಟಿಕೆಗಳಿಗಾಗಿ ಪದವಿ ಪೂರ್ವ ಕಾಲೇಜುಗಳಲ್ಲಿಯೇ ಉಳಿಸಿಕೊಳ್ಳುವುದು. ಮತ್ತು ಪ್ರತಿ ಕಾಲೇಜಿನಿಂದ ಸದಸ್ಯತ್ವ ಶುಲ್ಕವಾಗಿ ಪ್ರತೀ ವರ್ಷ ರೂ.100/-ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ, ಆನ್ ಲೈನ್ ಮೂಲಕ ಪಾವತಿಸಿ ನೋಂದಾಯಿಸಿಕೊಳ್ಳುವುದು. ಹೆಚ್ಚಿನ ಮಾಹಿತಿಗೆ www.redcroosskarnaka.org ಸಂಪರ್ಕಿಸುವುದು. |

**ವಿಶೇಷ ಸೂಚನೆ:**

1. ಮೇಲಿನ ಅರೆ ಸರ್ಕಾರಿ ಶುಲ್ಕಗಳನ್ನು ಬ್ಯಾಂಕ್ ನಲ್ಲಿ ಜಮೆ ಮಾಡಿ UTR Number ನ್ನು SATS ನಲ್ಲಿ Upload ಮಾಡುವುದು.
2. ಪ್ರತಿ ಶೈಕ್ಷಣಿಕ ವರ್ಷದಲ್ಲಿ ವಸೂಲಾದ ವಿಶೇಷ ಕ್ರೀಡಾ ನಿಧಿ/ಬಾವುಟಗಳ ಶುಲ್ಕ/ ಶಿಕ್ಷಕರ ಕಲ್ಯಾಣನಿಧಿ ಶುಲ್ಕ/ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಶೇ.40 ರಷ್ಟು ಜೊತೆಗೆ, ಕಾರಣಾಂತರಗಳಿಂದ ಹಿಂದಿನ ವರ್ಷಗಳಲ್ಲಿ ಬಾಕಿ ಉಳಿಸಿ ಸಂಚಿತವಾದ (Accumulated) ಈ ಶುಲ್ಕಗಳನ್ನು ಸೇರಿಸಿ, ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಪಾವತಿಸಬೇಕು.

**FORM-15**

**ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗೆ ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಗಳ ವಿದ್ಯಾರ್ಥಿಗಳ**

**ಪ್ರವೇಶಕ್ಕೆ ನಿಗಧಿಪಡಿಸಿರುವ ಶುಲ್ಕಗಳ ವಿವರ(ರೂ.ಗಳಲ್ಲಿ).**

| ಕ್ರ.ಸಂ | ಶುಲ್ಕಗಳವಿವರ | ಸಾಮಾನ್ಯವರ್ಗ (GM) | | ಪ.ಜಾ/ಪ.ಪಂ/ಪ್ರವರ್ಗ-1 | | 2A,2B,3A,3B | |
|---|---|---|---|---|---|---|---|
| | | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| 1 | ಬೋಧನಾ ಶುಲ್ಕ | 670 | Nil | Nil | Nil | Nil | Nil |
| 2 | ಅರ್ಜಿಶುಲ್ಕ | 25 | 25 | 25 | 25 | 25 | 25 |
| 3 | ನೋಂದಣಿ ಶುಲ್ಕ | 35 | Nil | Nil | Nil | 35 | Nil |
| 4 | ದಾಖಲಾತಿ ಶುಲ್ಕ | 50 | Nil | Nil | Nil | 50 | Nil |
| 5 | ಕ್ರೀಡಾ ಶುಲ್ಕ | 84 | Nil | Nil | Nil | 84 | Nil |
| 6 | ಗ್ರಂಥಾಲಯ ಶುಲ್ಕ | 120 | Nil | Nil | Nil | 120 | Nil |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಶಿಕ್ಷಕರಕಲ್ಯಾಣ ನಿಧಿ | 25 | Nil | Nil | Nil | 25 | Nil |
| 9 | ವಿದ್ಯಾರ್ಥಿಗಳಕ್ಷೇಮಾಭಿವೃದ್ಧಿ ನಿಧಿ | 25 | Nil | Nil | Nil | 25 | Nil |
| 10 | ತರಗತಿ ಪರೀಕ್ಷೆ ಶುಲ್ಕ | 168 | Nil | Nil | Nil | 168 | Nil |
| 11 | ವಿಶೇಷ ಕ್ರೀಡಾ ನಿಧಿ | 34 | Nil | Nil | Nil | 34 | Nil |
| 12 | ಶೌಚಾಲಯ ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ, ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ರೋವರ್ ಮತ್ತು ರೇಂಜರ್ | 50 | 50 | 50 | 50 | 50 | 50 |
| 16 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 17 | ಭಾರತೀಯ ಸೇವಾ ದಳ | 10 | 10 | 10 | 10 | 10 | 10 |
| 18 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| | ಒಟ್ಟುರೂ. | **1466** | **255** | **255** | **255** | **796** | **255** |
| **ವಿಜ್ಞಾನವಿಭಾಗದವಿದ್ಯಾರ್ಥಿಗಳುಹೆಚ್ಚುವರಿಯಾಗಿಪಾವತಿಸಬೇಕಾದಶುಲ್ಕಗಳು.** | | | | | | | |
| 19 | ಪ್ರಯೋಗಾಲಯ ಶುಲ್ಕ | 336 | Nil | Nil | Nil | Nil | Nil |
| 20 | ಪ್ರಾಯೋಗಿಕ ಪರೀಕ್ಷೆ ಶುಲ್ಕ | 150 | Nil | Nil | Nil | 150 | Nil |
| | ಒಟ್ಟುರೂ. | **486** | **Nil** | Nil | Nil | **150** | **Nil** |
| | **ಸಮಗ್ರ ಮೊತ್ತ.** | **1952** | **255** | **255** | **255** | **946** | **255** |

**ಸೂಚನೆ:**

1. ವಾಣಿಜ್ಯ ಸಂಯೋಜನೆಗಳಲ್ಲಿ ಪ್ರಾಯೋಗಿಕ ಪರೀಕ್ಷೆಯ ವಿಷಯಗಳಿದ್ದಲ್ಲಿ ಪ್ರತಿ ವಿಷಯಕ್ಕೆ ಪ್ರಯೋಗಾಲಯ ಶುಲ್ಕ ರೂ.112.00 ಮತ್ತು ಪ್ರಾಯೋಗಿಕ ಪರೀಕ್ಷೆಯ ಶುಲ್ಕ ರೂ.50-00ರಂತೆ ಪಡೆಯತಕ್ಕದ್ದು.
2. ಸರ್ಕಾರಿ ಕಾಲೇಜುಗಳಲ್ಲಿ ಪಡೆಯುವ ಬೋಧನಾ ಶುಲ್ಕವನ್ನು ಸಂಪೂರ್ಣವಾಗಿ (ಶೇಕಡ 100 ರಷ್ಟನ್ನು) ಸರ್ಕಾರಿ ಆದೇಶ ಸಂಖ್ಯೆ ಇಡಿ 17 ಟಿಪಿಯು 2002 ದಿನಾಂಕ:-08-06-2007 ರನ್ವಯ ಸರ್ಕಾರದ ಲೆಕ್ಕಶೀರ್ಷಿಕೆ:"0202-01-102-1-06"ಖಾತೆಗೆ ಜಮಾ ಮಾಡಬೇಕು.

3. ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ/ಪ್ರವರ್ಗ-01 ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಿರುವ ಎಲ್ಲಾ ವಿವಿಧ ಸರ್ಕಾರಿ ಶುಲ್ಕವನ್ನು ಸಂಬಂಧಿಸಿದ ಇಲಾಖೆಗಳಿಂದ ಹಿಂಪಡೆದು ಸರ್ಕಾರಿ ಖಾತೆಗೆ ಸಕಾಲದಲ್ಲಿ ಜಮಾ ಮಾಡಬೇಕು.
4. ಸರ್ಕಾರಿ ಆದೇಶ ಸಂಖ್ಯೆ:- **ಇಪಿ 218 ಎಸ್ ಹೆಚ್ ಹೆಚ್ 2021 ಬೆಂಗಳೂರು, ದಿನಾಂಕ:- 04-01-2022** ರಂತೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಕಿರಿಯರೆಡ್ ಕ್ರಾಸ್ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸದರಿ ಘಟಕಗಳ ಚಟುವಟಿಕೆಗಾಗಿ ಪ್ರತಿ ವಿದ್ಯಾರ್ಥಿಯಿಂದರೂ. 25/- ಶುಲ್ಕವನ್ನು ಪಡೆಯಲು ಸರ್ಕಾರವು ಆದೇಶಿಸಿದೆ. ಅದರಲ್ಲಿರೂ.10/-ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು-560001 ಇಲ್ಲಿಗೆ ಆನ್ ಲೈನ್ ಮೂಲಕ ಅಥವಾ ಖಾತೆ ಸಂಖ್ಯೆ 110056360421 ಕೆನರ ಬ್ಯಾಂಕ್ KSFC Complex Branch ಇಲ್ಲಿಗೆ ಈಕೆಳಗಿನಂತೆ ಪಾವತಿಸಲು ಸೂಚಿಸಿದೆ.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ ಎಎಲ್ಲಾ ಪದವಿ ಪೂರ್ವ ಕಾಲೇಜುಗಳು ರೆಡ್ ಕ್ರಾಸ್ ಶುಲ್ಕವನ್ನು ಪಾವತಿಸುವ ಸಲುವಾಗಿ ಸಂಸ್ಥೆಯ ಅಧಿಕೃತ ವೆಬ್ ಸೈಟ್ ನಲ್ಲಿ ಸಾಫ್ಟ್ ವೇರ್ ಅಭಿವೃದ್ಧಿಪಡಿಸಲಾಗಿದೆ. ಶುಲ್ಕ ಪಾವತಿಸುವ ವಿಧಾನ ಈ ಕೆಳಕಂಡಂತಿದೆ.

1. Software is available to facilitate payment of High Schoo/ PU Colleges Red Cross fee Jumior Red Cross. The above Fees can be paid by PU College using the software.
2. Junior Red Cross Software/Web Application Address:-www.redcrosskarnataka.org Login to the official website of Indian Red Cross, Karnataka State Branch, using the above link/code via Google After corner of to the official website, an option is given at the upper right of the website called " SELECT REGISTRATION " Click on this option.
3. After selevting this option 3 other options will open-1 school Registration. 2 PU College Registration. 3 JRC Examination/Program.
4. After selecting this PU College Registration. Payment Page will open.
5. In that enter College code automaticallu all College details refilled After all the relevant selection, u can pay through pgone pay/Goole pay.

ಒಂದು ವೇಳೆ phone pay/Google pay ಸೌಲಭ್ಯವಿಲ್ಲದೇ ಇದ್ದಲ್ಲಿ ಸದರಿ ಕಾಲೇಜುಗಳು ಈ ಕೆಳಕಂಡ ಖಾತೆಗೆ ರೆಡ್ ಕ್ರಾಸ್ ಶುಲ್ಕವನ್ನು ಪಾವತಿಸಬಹುದು ಪಾವತಿಸಿದ ದಾಖಲೆಯನ್ನು ತಪ್ಪದೇ ಈ ಸಂಸ್ಥೆಗೆ, ಕಾಲೇಜ್ ಕೋಡ್, ಅಧಿಕೃತ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಪತ್ರದಲ್ಲಿ ನಮೂದಿಸಿ ಕಳುಹಿಸುವುದು.

**Account Details**

| | | |
|---|---|---|
| Name of the Account | : | IRCS JRC PU College |
| Account Number | : | 110056360421 |
| Name of the Bank | : | CANARA BANK |
| Branch Name | : | K.S.F.C.COMPLEX BRANCH, BANGALORE-560052 |
| IFSC Code | : | CNRB0002827 |

## FORM-16

**ಖಾಸಗಿಅನುದಾನಿತಪದವಿಪೂರ್ವಕಾಲೇಜುಗಳಲ್ಲಿಪ್ರಥಮಪಿಯುಸಿದಾಖಲಾತಿಗೆಕಲಾ/ವಾಣಿಜ್ಯ/ವಿಜ್ಞಾನಸಂಯೋಜನೆಗಳವಿದ್ಯಾರ್ಥಿಗಳಪ್ರವೇಶಕ್ಕೆನಿಗಧಿಪಡಿಸಿರುವಶುಲ್ಕಗಳವಿವರ.**

| ಕ್ರ.ಸಂ | ಶುಲ್ಕಗಳವಿವರ | ಸಾಮಾನ್ಯವರ್ಗ (GM) | | ಪ.ಜಾ/ಪ.ಪಂ/ಪ್ರವರ್ಗ- | | 2A,2B,3A,3B | |
|---|---|---|---|---|---|---|---|
| | | **ಹುಡುಗರು** | **ಹುಡುಗಿಯರು** | **ಹುಡುಗರು** | **ಹುಡುಗಿಯರು** | **ಹುಡುಗರು** | **ಹುಡುಗಿಯರು** |
| 1 | ಬೋಧನಾ ಶುಲ್ಕ | 1330 | 1330 | Nil | Nil | Nil | Nil |
| 2 | ಅರ್ಜಿ ಶುಲ್ಕ | 25 | 25 | 25 | 25 | 25 | 25 |
| 3 | ನೋಂದಣಿ ಶುಲ್ಕ | 35 | 35 | Nil | Nil | 35 | 35 |
| 4 | ದಾಖಲಾತಿ ಶುಲ್ಕ | 50 | 50 | Nil | Nil | 50 | 50 |
| 5 | ಕ್ರೀಡಾ ಶುಲ್ಕ | 84 | 84 | 84 | 84 | 84 | 84 |
| 6 | ಗ್ರಂಥಾಲಯ ಶುಲ್ಕ | 120 | 120 | 120 | 120 | 120 | 120 |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಶಿಕ್ಷಕರಕಲ್ಯಾಣ ನಿಧಿ | 25 | 25 | 25 | 25 | 25 | 25 |
| 9 | ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ | 25 | 25 | 25 | 25 | 25 | 25 |
| 10 | ತರಗತಿ ಪರೀಕ್ಷೆ ಶುಲ್ಕ | 168 | 168 | 168 | 168 | 168 | 168 |
| 11 | ವಿಶೇಷ ಕ್ರೀಡಾ ನಿಧಿ | 34 | 34 | 34 | 34 | 34 | 34 |
| 12 | ಶೌಚಾಲಯ ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ರೋವರ್ ಮತ್ತು ರೇಂಜರ್ | 50 | 50 | 50 | 50 | 50 | 50 |
| 16 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 17 | ಭಾರತೀಯ ಸೇವಾದಳ | 10 | 10 | 10 | 10 | 10 | 10 |
| 18 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| ಒಟ್ಟುರೂ. | | **2126+SD** | **2126+SD** | **711+SD** | **711+SD** | **796+SD** | **796+SD** |
| **ವಿಜ್ಞಾನವಿಭಾಗದವಿದ್ಯಾರ್ಥಿಗಳುಹೆಚ್ಚುವರಿಯಾಗಿಪಾವತಿಸಬೇಕಾದಶುಲ್ಕಗಳು.** | | | | | | | |
| 19 | ಪ್ರಯೋಗಾಲಯ ಶುಲ್ಕ | 336 | 336 | 336 | 336 | 336 | 336 |
| 20 | ಪ್ರಾಯೋಗಿಕ ಪರೀಕ್ಷೆಶುಲ್ಕ | 150 | 150 | 150 | 150 | 150 | 150 |
| ಒಟ್ಟುರೂ. | | 486 | 486 | 486 | 486 | 486 | 486 |
| **ಸಮಗ್ರಮೊತ್ತ.** | | **2612+SD** | **2612+SD** | **1197+SD** | **1197+SD** | **1282+SD** | **1282+SD** |

**ಸೂಚನೆ:**

1. ವಾಣಿಜ್ಯ ಸಂಯೋಜನೆಗಳಲ್ಲಿ ಪ್ರಾಯೋಗಿಕ ಪರೀಕ್ಷೆಯ ವಿಷಯಗಳಿದ್ದಲ್ಲಿ ಪ್ರತಿ ವಿಷಯಕ್ಕೆ ಪ್ರಯೋಗಾಲಯ ಶುಲ್ಕ ರೂ.112-00 ಮತ್ತು ಪ್ರಾಯೋಗಿಕ ಪರೀಕ್ಷೆಯ ಶುಲ್ಕ ರೂ.50-00 ರಂತೆ ವಸೂಲಿ ಮಾಡಬೇಕು.
2. ಅನುದಾನಿತ ಕಾಲೇಜುಗಳಲ್ಲಿ ಪಡೆಯುವ ಬೋಧನಾ ಶುಲ್ಕದಲ್ಲಿ. 50%ರಷ್ಟು ನ್ನು ಸರ್ಕಾರದ ಲೆಕ್ಕಶೀರ್ಷಿಕೆ 0202-01-102-1-06 ಖಾತೆಗೆ ಜಮಾ ಮಾಡಬೇಕು. ಉಳಿದ 50 ರಷ್ಟನ್ನು ಕಾಲೇಜಿನ ಖಾತೆಗೆ ಜಮಾ ಮಾಡಬೇಕು. (ಸರ್ಕಾರಿ ಆದೇಶ ಸಂಖ್ಯೆ ಇಡಿ 422 ಡಿಜಿಡಬ್ಲ್ಯು 2002, ದಿನಾಂಕ: 08-02-2019).
3. ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ/ಪ್ರವರ್ಗ-01 ಹಾಗೂ ಬಿಸಿಎಂ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಿರುವ ಬೋಧನಾ ಶುಲ್ಕವನ್ನು ಸಂಬಂಧಿಸಿದ ಇಲಾಖೆಗಳಿಂದ ಹಿಂಪಡೆದು ಸರ್ಕಾರಿ ಖಾತೆಗೆ ಮರುಪಾವತಿಸಬೇಕು.
4. Karnataka Educational Instituitions (Classification,Regulation and Prescription of curricula etc..,)Rules 1995 ಅನ್ವಯ ನಿಯಮ 10(3ಸಿ) ರನ್ವಯ Special Development Fees ವಸೂಲು ಮಾಡಬಹುದು.

## FORM-17

**ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗೆ ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಗಳ ವಿದ್ಯಾರ್ಥಿಗಳ ಪ್ರವೇಶಕ್ಕೆ ನಿಗಧಿಪಡಿಸಿರುವ ಶುಲ್ಕಗಳ ವಿವರ.**

| ಕ್ರ.ಸಂ | ಶುಲ್ಕಗಳವಿವರ | ಸಾಮಾನ್ಯವರ್ಗ (GM) | | ಪ.ಜಾ/ಪ.ಪಂ/ಪ್ರವರ್ಗ-1 | | 2A,2B,3A,3B | |
|---|---|---|---|---|---|---|---|
| | | **ಹುಡುಗರು** | **ಹುಡುಗಿಯರು** | **ಹುಡುಗರು** | **ಹುಡುಗಿಯರು** | **ಹುಡುಗರು** | **ಹುಡುಗಿಯರು** |
| 1 | ಬೋಧನಾ ಶುಲ್ಕ | 1330 | 1330 | Nil | Nil | Nil | Nil |
| 2 | ಅರ್ಜಿ ಶುಲ್ಕ | 25 | 25 | 25 | 25 | 25 | 25 |
| 3 | ನೋಂದಣಿ ಶುಲ್ಕ | 35 | 35 | 35 | 35 | 35 | 35 |
| 4 | ದಾಖಲಾತಿ ಶುಲ್ಕ | 50 | 50 | 50 | 50 | 50 | 50 |
| 5 | ಕ್ರೀಡಾ ಶುಲ್ಕ | 84 | 84 | 84 | 84 | 84 | 84 |
| 6 | ಗ್ರಂಥಾಲಯ ಶುಲ್ಕ | 120 | 120 | 120 | 120 | 120 | 120 |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಶಿಕ್ಷಕರಕಲ್ಯಾಣ ನಿಧಿ | 25 | 25 | 25 | 25 | 25 | 25 |
| 9 | ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ | 25 | 25 | 25 | 25 | 25 | 25 |
| 10 | ತರಗತಿ ಪರೀಕ್ಷೆ ಶುಲ್ಕ | 168 | 168 | 168 | 168 | 168 | 168 |
| 11 | ವಿಶೇಷ ಕ್ರೀಡಾ ನಿಧಿ | 34 | 34 | 34 | 34 | 34 | 34 |
| 12 | ಶೌಚಾಲಯ ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ, ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ರೋವರ್ ಮತ್ತು ರೇಂಜರ್ | 50 | 50 | 50 | 50 | 50 | 50 |
| 16 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 17 | ಭಾರತೀಯ ಸೇವಾದಳ | 10 | 10 | 10 | 10 | 10 | 10 |
| 18 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| **ಒಟ್ಟು ರೂ.** | | **796+1330+ CE* +SD** | **796+1330+ CE*+SD** | **796+CE*+ SD** | **796+CE*+ SD** | **796+CE*+ SD** | **796+ CE*+ SD** |
| **ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪಾವತಿಸಬೇಕಾದ ಶುಲ್ಕಗಳು.** | | | | | | | |
| 19 | ಪ್ರಯೋಗಾಲಯ ಶುಲ್ಕ | 336 | 336 | 336 | 336 | 336 | 336 |
| 20 | ಪ್ರಾಯೋಗಿಕ ಪರೀಕ್ಷೆ ಶುಲ್ಕ | 150 | 150 | 150 | 150 | 150 | 150 |
| ಒಟ್ಟು ರೂ. | | 486 | 486 | 486 | 486 | 486 | 486 |
| **ಸಮಗ್ರ ಮೊತ್ತ.** | | **1282+1330+ CE*+SD** | **1282+1330+ CE*+SD** | **1282+ CE*+SD** | **1282+ CE*+SD** | **1282+ CE*+SD** | **1282+ CE*+SD** |

**ಸೂಚನೆ:**

1. ವಾಣಿಜ್ಯ ಸಂಯೋಜನೆಗಳಲ್ಲಿ ಪ್ರಾಯೋಗಿಕ ಪರೀಕ್ಷೆಯ ವಿಷಯಗಳಿದ್ದಲ್ಲಿ ಪ್ರತಿವಿಷಯಕ್ಕೆ ಪ್ರಯೋಗಾಲಯ ಶುಲ್ಕ ರೂ.112-00ಮತ್ತು ಪ್ರಾಯೋಗಿಕ ಪರೀಕ್ಷೆಯ ಶುಲ್ಕ ರೂ.50-00ರಂತೆ ವಸೂಲಿ ಮಾಡಬೇಕು.
2. ಖಾಸಗಿ ಅನುದಾನರಹಿತ ಕಾಲೇಜುಗಳಲ್ಲಿ ಪಡೆಯುವ ಬೋಧನಾ ಶುಲ್ಕ ರೂ.1330/- ಆಗಿದ್ದು, ಶೇಕಡ100%ರಷ್ಟನ್ನು ಕಾಲೇಜಿನ ಖಾತೆಗೆ ಜಮಾಮಾಡಬೇಕು. (ಸರ್ಕಾರಿ ಆದೇಶ ಸಂಖ್ಯೆ: ಇಡಿ422ಡಿಜಿಡಬ್ಲ್ಯೂ 2012, ದಿನಾಂಕ: 08-02-2019).
3. Karnataka Educational Instituitions (Classification, Regulation and Prescription of curricula etc..,) Rules 1995ಅನ್ವಯ ನಿಯಮ10 (3ಸಿ) ರನ್ವಯSpecial Development Fees ವಸೂಲು ಮಾಡಬಹುದು.
4. TF- Tuition Fee.
5. CE- Capital Expendeture

**FORM-18**

**ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ದಾಖಲಾತಿಗೆ ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಗಳಿಗೆ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಶುಲ್ಕಗಳ ವಿವರ.**

| ಕ್ರ.ಸಂ | ಶುಲ್ಕಗಳವಿವರ | ಸಾಮಾನ್ಯವರ್ಗ (GM) | | ಪ.ಜಾ/ಪ.ಪಂ/ಪ್ರವರ್ಗ-1 | | 2A,2B,3A,3B | |
|---|---|---|---|---|---|---|---|
| | | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| 1 | ಬೋಧನಾ ಶುಲ್ಕ | 670 | Nil | Nil | Nil | Nil | Nil |
| 2 | ಅರ್ಜಿ ಶುಲ್ಕ | Nil | Nil | Nil | Nil | Nil | Nil |
| 3 | ನೋಂದಣಿ ಶುಲ್ಕ | Nil | Nil | Nil | Nil | Nil | Nil |
| 4 | ದಾಖಲಾತಿ ಶುಲ್ಕ | Nil | Ni | Nil | Nil | Nil | Nil |
| 5 | ಕ್ರೀಡಾ ಶುಲ್ಕ | 84 | Nil | Nil | Nil | 84 | Nil |
| 6 | ಗ್ರಂಥಾಲಯ ಶುಲ್ಕ | 120 | Nil | Nil | Nil | 120 | Nil |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಶಿ.ಕ.ನಿ | 25 | Nil | Nil | Nil | 25 | Nil |
| 9 | ವಿ.ಕ್ಷೇ.ನಿ | 25 | Nil | Nil | Nil | 25 | Nil |
| 10 | ತರಗತಿ ಪರೀಕ್ಷೆ ಶುಲ್ಕ | 168 | Nil | Nil | Nil | 168 | Nil |
| 11 | ವಿಶೇಷ ಕ್ರೀಡಾ ನಿಧಿ | 34 | Nil | Nil | Nil | 34 | Nil |
| 12 | ಶೌ. ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ ,ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ದ್ವಿತೀಯ ಪಿಯುಸಿ ಪರೀಕ್ಷೆ ಶುಲ್ಕ | 400 | Nil | Nil | Nil | Nil | Nil |
| 16 | ಅಂಕ ಪಟ್ಟಿ ಶುಲ್ಕ | 50 | 50 | 50 | 50 | 50 | 50 |
| 17 | ರೋವರ್ ಮತ್ತು ರೇಂಜರ್ | 50 | 50 | 50 | 50 | 50 | 50 |
| 18 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 19 | ಭಾರತೀಯ ಸೇವಾದಳ | 10 | 10 | 10 | 10 | 10 | 10 |
| 20 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| | ಒಟ್ಟುರೂ. | **1806** | **280** | **280** | **280** | **736** | **280** |
| | **ವಿಜ್ಞಾನವಿ ಭಾಗದ ವಿದ್ಯಾರ್ಥಿಗಳು ಹೆಚ್ಚುವರಯಾಗಿ ಪಾವತಿಸ ಬೇಕಾದ ಶುಲ್ಕಗಳು.** | | | | | | |
| 19 | **ಪ್ರಯೋಗಾಲಯ ಶುಲ್ಕ** | 336 | Nil | Nil | Nil | Nil | Nil |
| 20 | **ಪ್ರಾಯೋಗಿಕ ಪರೀಕ್ಷೆ ಶುಲ್ಕ** | 330 | Nil | Nil | Nil | Nil | Nil |
| | ಒಟ್ಟುರೂ. | 666 | Nil | Nil | Nil | Nil | Nil |
| | ಸಮಗ್ರ ಮೊತ್ತ. | **2472** | **280** | **280** | **280** | **736** | **280** |

**ಸೂಚನೆ:**

1. ವಾಣಿಜ್ಯ ಸಂಯೋಜನೆಗಳಲ್ಲಿ ಪ್ರಾಯೋಗಿಕ ಪರೀಕ್ಷೆಯ ವಿಷಯಗಳಿದ್ದಲ್ಲಿ ಪ್ರತಿ ವಿಷಯಕ್ಕೆ ಪ್ರಯೋಗಾಲಯ **ಶುಲ್ಕ** ರೂ.112/- ಮತ್ತು ಪ್ರಾಯೋಗಿಕ ಪರಿಕ್ಷಾ **ಶುಲ್ಕ** ರೂ.110/- ರಂತೆ ವಸೂಲಿ ಮಾಡಬೇಕು.
2. ಸರ್ಕಾರಿ ಕಾಲೇಜುಗಳಲ್ಲಿ ಪಡೆಯುವ ಬೋಧನಾ **ಶುಲ್ಕ**ವನ್ನು ಸಂಪೂರ್ಣವಾಗಿ (ಶೇಕಡ 100ರಷ್ಟು) ಸರ್ಕಾರಿ ಆದೇಶ ಸಂಖ್ಯೆ: ಇಡಿ 17 ಟಿಪಿಯು 2002 ದಿನಾಂಕ:08.06.2007ರನ್ವಯ ಸರ್ಕಾರದ ಲೆಕ್ಕ ಶೀರ್ಷಿಕೆ:0202-01-102-1-106 ಖಾತೆಗೆ ಜಮಾ ಮಾಡಬೇಕು.
3. ಪರಿಶಿಷ್ಟ ಜಾತಿ / ಪಂಗಡ/ ಪ್ರವರ್ಗ-1 ಹಾಗೂ ಬಿಸಿಎಂ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಿರುವ ಬೋಧನಾ **ಶುಲ್ಕ**ವನ್ನು ಸಂಬಂಧಿಸಿದ ಇಲಾಖೆಗಳಿಂದ ಹಿಂಪಡೆದು ಸರ್ಕಾರಿ ಖಾತೆಗೆ ಮರುಪಾವತಿಸಬೇಕು.
4. ಹೊಸದಾಗಿ ದ್ವಿತೀಯ ಪಿಯುಸಿ ತರಗತಿಗೆ ದಾಖಲಾದ ವಿದ್ಯಾರ್ಥಿಗಳಿಂದ ಅರ್ಜಿ**ಶುಲ್ಕ** ರೂ.25/-, ನೋಂದಣಿ **ಶುಲ್ಕ** ರೂ.35/- ಮತ್ತು ದಾಖಲಾತಿ **ಶುಲ್ಕ** ರೂ.50/-ನ್ನುವಸೂಲಿ ಮಾಡಬೇಕು

**FORM -19**

**ಖಾಸಗಿ ಅನುದಾನಿತ ಪ.ಪೂ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ದಾಖಲಾತಿಗೆ ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಗಳಿಗೆ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಶುಲ್ಕಗಳ ವಿವರ.**

| ಕ್ರ.ಸಂ | ಶುಲ್ಕಗಳವಿವರ | ಸಾಮಾನ್ಯವರ್ಗ (GM) | | ಪ.ಜಾ/ಪ.ಪಂ/ಪ್ರವರ್ಗ-1 | | 2A,2B,3A,3B | |
|---|---|---|---|---|---|---|---|
| | | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| 1 | ಬೋಧನಾ ಶುಲ್ಕ | 1330 | 1330 | Nil | Nil | Nil | Nil |
| 2 | ಅರ್ಜಿ ಶುಲ್ಕ | Nil | Nil | Nil | Nil | Nil | Nil |
| 3 | ನೋಂದಣಿ ಶುಲ್ಕ | Nil | Nil | Nil | Nil | Nil | Nil |
| 4 | ದಾಖಲಾತಿ ಶುಲ್ಕ | Nil | Ni | Nil | Nil | Nil | Nil |
| 5 | ಕ್ರೀಡಾ ಶುಲ್ಕ | 84 | 84 | 84 | 84 | 84 | 84 |
| 6 | ಗ್ರಂಥಾಲಯ ಶುಲ್ಕ | 120 | 120 | 120 | 120 | 120 | 120 |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಶಿ.ಕ.ನಿ | 25 | 25 | 25 | 25 | 25 | 25 |
| 9 | ವಿ.ಕ್ಷೇ.ನಿ | 25 | 25 | 25 | 25 | 25 | 25 |
| 10 | ತರಗತಿ ಪರೀಕ್ಷೆ ಶುಲ್ಕ | 168 | 168 | 168 | 168 | 168 | 168 |
| 11 | ವಿಶೇಷ ಕ್ರೀಡಾ ನಿಧಿ | 34 | 34 | 34 | 34 | 34 | 34 |
| 12 | ಶೌ.ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ, ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ದ್ವಿತೀಯ ಪಿಯುಸಿ ಪರೀಕ್ಷೆ ಶುಲ್ಕ | 400 | 400 | Nil | Nil | Nil | Nil |
| 16 | ಅಂಕಪಟ್ಟಿ ಶುಲ್ಕ | 50 | 50 | 50 | 50 | 50 | 50 |
| 17 | ರೋವರ್ ಮತ್ತು ರೇಂಜರ್ | 50 | 50 | 50 | 50 | 50 | 50 |
| 18 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 19 | ಭಾರತೀಯ ಸೇವಾದಳ | 10 | 10 | 10 | 10 | 10 | 10 |
| 20 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| **ಒಟ್ಟು** | | **2466+SD** | **2466+SD** | **736+SD** | **736+SD** | **736+SD** | **736+SD** |
| **ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪಾವತಿಸಬೇಕಾದ ಶುಲ್ಕಗಳು.** | | | | | | | |
| 19 | **ಪ್ರಯೋಗಾಲಯ ಶುಲ್ಕ** | 336 | 336 | 336 | 336 | 336 | 336 |
| 20 | **ಪ್ರಾಯೋಗಿಕಪರೀಕ್ಷೆ ಶುಲ್ಕ** | 330 | 330 | Nil | Nil | Nil | Nil |
| | | 666 | 666 | 336 | 336 | 336 | 336 |
| **ಒಟ್ಟು** | | **3132+SD** | **3132+SD** | **1072+SD** | **1072+SD** | **1072+SD** | **1072+SD** |

**ಸೂಚನೆ:**

1. ವಾಣಿಜ್ಯ ಸಂಯೋಜನೆಗಳಲ್ಲಿ ಪ್ರಾಯೋಗಿಕ ಪರೀಕ್ಷೆಯ ವಿಷಯಗಳಿದ್ದಲ್ಲಿ ಪ್ರತಿವಿಷಯಕ್ಕೆ ಪ್ರಯೋಗಾಲಯ ಶುಲ್ಕ ರೂ.112-೦೦ ಮತ್ತು ಪ್ರಾಯೋಗಿಕ ಪರೀಕ್ಷೆಯ ಶುಲ್ಕ ರೂ.110-೦೦ ರಂತೆ ವಸೂಲಿ ಮಾಡಬೇಕು.
2. ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಪಡೆಯುವ ಬೋಧನಾ ಶುಲ್ಕದಲ್ಲಿ ಶೇಕಡ 50% ರಷ್ಟನ್ನು ಸರ್ಕಾರದ ಲೆಕ್ಕಶೀರ್ಷಿಕೆ **0202-01-102-1-06** ಖಾತೆಗೆ ಜಮಾ ಮಾಡಬೇಕು. ಉಳಿದ .50% ರಷ್ಟನ್ನು ಕಾಲೇಜಿನ ಖಾತೆಗೆ ಜಮಾ ಮಾಡಬೇಕು. (ಸರ್ಕಾರಿ ಅದೇಶ ಸಂಖ್ಯೆ ಇಡಿ 422 ಡಿಜಿಡಬ್ಲ್ಯೂ 2002, ದಿನಾಂಕ:08.02.2019).
3. ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ/ಪ್ರವರ್ಗ-01 ಹಾಗೂ ಬಿಸಿಎಂ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಿರುವ ಬೋಧನಾ ಶುಲ್ಕವನ್ನು ಸಂಬಂಧಿಸಿದ ಇಲಾಖೆಗಳಿಂದ ಹಿಂಪಡೆದು ಸರ್ಕಾರಿ ಖಾತೆಗೆ ಮರುಪಾವತಿಸಬೇಕು.
4. ಹೊಸದಾಗಿ ದ್ವಿತೀಯ ಪಿಯುಸಿ ತರಗತಿಗೆ ದಾಖಲಾದ ವಿದ್ಯಾರ್ಥಿಗಳಿಂದ ಅರ್ಜಿಶುಲ್ಕ ರೂ.25-00, ನೋಂದಣಿ ಶುಲ್ಕ ರೂ.35-00 ಮತ್ತು ದಾಖಲಾತಿ ಶುಲ್ಕ ರೂ.50-00 ನ್ನು ವಸೂಲಿ ಮಾಡಬೇಕು.
5. ದ್ವಿತೀಯ ಪಿಯುಸಿ ದಾಖಲಾಗುವ ಪ್ರತಿ ವಿದ್ಯಾರ್ಥಿಯಿಂದ ಗರಿಷ್ಠ (SD) ರೂ.300-೦೦ (ಮೂರು ನೂರು ಮಾತ್ರ) ಗಳನ್ನು ವಿಶೇಷ ಅಭಿವೃದ್ಧಿ ಶುಲ್ಕವನ್ನಾಗಿ ಪಡೆಯಬಹುದು.[Karnataka Educational Instituitions (Classification Regulation and Prescription of curricula etc..,)Rules 1995 ಅನ್ವಯ]

FORM -20

**ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ದಾಖಲಾತಿಗೆ ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಗಳಿಗೆ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಶುಲ್ಕಗಳ ವಿವರ.**

| ಕ್ರ.ಸಂ | ಶುಲ್ಕಗಳವಿವರ | ಸಾಮಾನ್ಯವರ್ಗ (GM) | | ಪ.ಜಾ/ಪ.ಪಂ/ಪ್ರವರ್ಗ-1 | | 2A,2B,3A,3B | |
|---|---|---|---|---|---|---|---|
| | | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| 1 | ಬೋಧನಾ ಶುಲ್ಕ | 1330 | 1330 | Nil | Nil | Nil | Nil |
| 2 | ಅರ್ಜಿ ಶುಲ್ಕ | Nil | Nil | Nil | Nil | Nil | Nil |
| 3 | ನೋಂದಣಿ ಶುಲ್ಕ | Nil | Nil | Nil | Nil | Nil | Nil |
| 4 | ದಾಖಲಾತಿ ಶುಲ್ಕ | Nil | Nil | Nil | Nil | Nil | Nil |
| 5 | ಕ್ರೀಡಾ ಶುಲ್ಕ | 84 | 84 | 84 | 84 | 84 | 84 |
| 6 | ಗ್ರಂಥಾಲಯ ಶುಲ್ಕ | 120 | 120 | 120 | 120 | 120 | 120 |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಶಿ.ಕ.ನಿ | 25 | 25 | 25 | 25 | 25 | 25 |
| 9 | ವಿ.ಕ್ಷೇ.ನಿ | 25 | 25 | 25 | 25 | 25 | 25 |
| 10 | ತರಗತಿ ಪರೀಕ್ಷೆ ಶುಲ್ಕ | 168 | 168 | 168 | 168 | 168 | 168 |
| 11 | ವಿಶೇಷ ಕ್ರೀಡಾ ನಿಧಿ | 34 | 34 | 34 | 34 | 34 | 34 |
| 12 | ಶೌ.ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ, ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ದ್ವಿತೀಯ ಪಿಯುಸಿ ಪರೀಕ್ಷೆ ಶುಲ್ಕ | 400 | 400 | Nil | Nil | Nil | Nil |
| 16 | ಅಂಕಪಟ್ಟಿ ಶುಲ್ಕ | 50 | 50 | 50 | 50 | 50 | 50 |
| 17 | ರೋವರ್ ಮತ್ತುರೇಂಜರ್ | 50 | 50 | 50 | 50 | 50 | 50 |
| 18 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 19 | ಭಾರತೀಯ ಸೇವಾದಳ | 10 | 10 | 10 | 10 | 10 | 10 |
| 20 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| **ಒಟ್ಟು** | | **2466+SD** | **2466+SD** | **736+SD** | **736+SD** | **736+SD** | **736+SD** |
| **ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪಾವತಿಸಬೇಕಾದ ಶುಲ್ಕಗಳು.** | | | | | | | |
| 19 | **ಪ್ರಯೋಗಾಲಯ ಶುಲ್ಕ** | 336 | 336 | 336 | 336 | 336 | 336 |
| 20 | **ಪ್ರಾಯೋಗಿಕ ಪರೀಕ್ಷೆ ಶುಲ್ಕ** | 330 | 330 | Nil | Nil | Nil | Nil |
| **ಒಟ್ಟು** | | **3132+SD** | **3132+ SD** | **1072+SD** | **1072+SD** | **1072+ SD** | **1072+SD** |

**ಸೂಚನೆ:**

1. ವಾಣಿಜ್ಯ ಸಂಯೋಜನೆಗಳಲ್ಲಿ ಪ್ರಾಯೋಗಿಕ ಪರೀಕ್ಷೆಯ ವಿಷಯಗಳಿದ್ದಲ್ಲಿ ಪ್ರತಿವಿಷಯಕ್ಕೆ ಪ್ರಯೋಗಾಲಯ ಶುಲ್ಕ ರೂ.112-೦೦ ಮತ್ತು ಪ್ರಾಯೋಗಿಕ ಪರೀಕ್ಷೆಯ ಶುಲ್ಕ ರೂ.110-೦೦ ರಂತೆ ವಸೂಲಿ ಮಾಡಬೇಕು.
2. ಖಾಸಗಿ ಅನುದಾನರಹಿತ ಕಾಲೇಜುಗಳಲ್ಲಿ ಪಡೆಯುವ ಬೋಧನಾ ಶುಲ್ಕದ.100% ರಷ್ಟನ್ನು ಕಾಲೇಜಿನ ಖಾತೆಗೆ ಜಮಾ ಮಾಡಬೇಕು. (ಸರ್ಕಾರಿ ಅದೇಶ ಸಂಖ್ಯೆ: ಇಡಿ 422 ಡಿಜಿಡಬ್ಲ್ಯೂ 2012, ದಿನಾಂಕ: 08-02-2019)
3. Capital Expenditure ಶುಲ್ಕವನ್ನು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಯಾವುದೇ ಕಾರಣಕ್ಕೂ ವಸೂಲಿ ಮಾಡಬಾರದು
4. Karnataka EducationalInstituitions(Classification,Regulation and Prescription of curriculam etc..,)Rules s 1995 ಅನ್ವಯ. ದ್ವಿತೀಯ ಪಿಯುಸಿಗೆ ದಾಖಲಾಗುವ ಪ್ರತಿ ವಿದ್ಯಾರ್ಥಿಯಿಂದ ಗರಿಷ್ಠ (SD) ರೂ. 600-00 ಗಳನ್ನು ವಿಶೇಷ ಅಭಿವೃದ್ಧಿ ಶುಲ್ಕವಾಗಿ ಪಡೆಯಬಹುದು.
5. ಪರೀಕ್ಷೆ ಶುಲ್ಕ ವಿನಾಯಿತಿ ಪಡೆದ ಎಲ್ಲಾ ವಿದ್ಯಾರ್ಥಿಗಳು ಅಂಕಪಟ್ಟಿ ಶುಲ್ಕ ಕಡ್ಡಾಯವಾಗಿ ಪಾವತಿಸತಕ್ಕದು.

**ಎಲ್ಲಾಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿಯ ಎಲ್ಲಾ ವರ್ಗಗಳ ವಿದ್ಯಾರ್ಥಿಗಳು ಪಾವತಿಸಬೇಕಾದ ಇತರೆ ಶುಲ್ಕಗಳು.**

| ಕ್ರ.ಸಂ | ಶುಲ್ಕದ ವಿವರ | ಶುಲ್ಕರೂ.ಗಳಲ್ಲಿ | ಷರಾ |
|---|---|---|---|
| 1 | ಖಾಸಗಿ ಅಭ್ಯಾಸ (Private Study)<br>ಅ) ಭಾರತೀಯ ಭಾಷೆ/ ವಿಷಯ<br>ಆ) ವಿದೇಶಿ ಭಾಷೆ<br>ವಿಶೇಷ ಸೂಚನೆ:- ಪ್ರಯೋಗಿಕ ವಿಷಯಗಳನ್ನು ಹೊರತುಪಡಿಸಿ | 670-00<br>5000-00 | ಸರ್ಕಾರದ ಪತ್ರ ಸಂಖ್ಯೆ: ಇಪಿ 54 ಎಸ್‌ಹೆಚ್‌ಹೆಚ್ 2024, ಬೆಂಗಳೂರು, ದಿನಾಂಕ:18-02-2024 ರಂತೆ ಪ್ರಥಮ / ದ್ವಿತೀಯ ಪಿಯುಸಿಯಲ್ಲಿ ವಾಣಿಜ್ಯ / ಕಲಾ ವಿಭಾಗದ (ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯ) ಯಾವುದೇ ಸಂಯೋಜನೆಯನ್ನು ತೆಗೆದುಕೊಂಡು ಅಧ್ಯಯನ ಮಾಡಿದ ವಿದ್ಯಾರ್ಥಿಯು ಪ್ರಥಮ / ದ್ವಿತೀಯ ಪಿಯುಸಿಯಲ್ಲಿ ಒಂದು ವೇಳೆ ಕಾಲೇಜು ಬದಲಾವಣೆ ಮಾಡಿಕೊಂಡ ಸಂದರ್ಭದಲ್ಲಿ ಮಾತ್ರ ಮತ್ತು ಇತರೆ ರಾಜ್ಯಗಳ ಅಥವಾ ಸಿ.ಬಿ.ಎಸ್.ಇ/ಐ.ಸಿ.ಎಸ್.ಇ ಬೋರ್ಡ್‌ಗಳಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡಿ ರಾಜ್ಯ ಪಠ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡಲು ಬಯಸಿ ಬರುವ ವಿದ್ಯಾರ್ಥಿಗಳಿಗೆ ತಾನು ಅಧ್ಯಯನ ಮಾಡಿದ ಒಂದು ವಿಷಯ ಮತ್ತು ಒಂದು ಭಾಷೆಗೆ ಪ್ರವೇಶ ಬಯಸಿದ ಕಾಲೇಜಿನಲ್ಲಿ ಬೋಧಿಸದಿದ್ದಲ್ಲಿ / ಲಭ್ಯವಿಲ್ಲದಿದ್ದಲ್ಲಿ ಆ ವಿಷಯ / ಭಾಷೆಯನ್ನು (ಇಲಾಖೆ ನೀಡಿರುವ ಸಂಯೋಜನೆಯಲ್ಲಿ ಇರಬೇಕು)<br>ಖಾಸಗಿಯಾಗಿ ಅಧ್ಯಯನ ಮಾಡಲು ಇಲಾಖೆಯಿಂದ ಅನುಮತಿ ಪಡೆದ ಸಂಯೋಜನೆಯಲ್ಲಿ ಮಾತ್ರ ಅವಕಾವಿದೆ. |
| 2 | ವಿಷಯ/ಸಂಯೋಜನೆ ಬದಲಾವಣೆ ಶುಲ್ಕ | 800-00 | ಭಾಗ-1 ರಲ್ಲಿ ಒಂದು ವಿಷಯ/ಭಾಗ-2 ರಲ್ಲಿ ಒಂದು ವಿಷಯ ಅಥವಾ ಎರಡೂ ಭಾಗಗಳು ಸೇರಿ ಗರಿಷ್ಠ ಎರಡು ವಿಷಯಗಳ ಬದಲಾವಣೆಗೆ ಮಾತ್ರ ಅವಕಾಶವಿರುತ್ತದೆ. (ಒಂದೇ ಭಾಗದಲ್ಲಿ ಎರಡು ವಿಷಯಗಳಿಗೆ ಹಾಗೂ ಪ್ರಾಯೋಗಿಕ/ಮೌಖಿಕ ಪರೀಕ್ಷೆ ಹೊಂದಿರುವ ವಿಷಯಗಳಿಗೆ ಬದಲಾವಣೆಗೆ ಅವಕಾಶ ಇರುವುದಿಲ್ಲ) |
| 3 | ಕಾಲೇಜು ಬದಲಾವಣೆ ಶುಲ್ಕ | 1600-00 | ಲೆಕ್ಕ ಶೀರ್ಷಿಕೆ:0202-01-102-1-06 ಖಾತೆಗೆ ಜಮಾ ಮಾಡಬೇಕು |
| 4 | ವಿಳಂಬ ದಾಖಲಾತಿ ದಂಡ ಶುಲ್ಕ | 670-00 | ಇತರೆ ಶುಲ್ಕಗಳ ಜೊತೆಗೆ ಪಡೆಯಬೇಕು |
| 5 | ವಿಶೇಷ ವಿಳಂಬ ದಾಖಲಾತಿ ದಂಡ ಶುಲ್ಕ | 2220-00 | ವಿಳಂಬ ದಾಖಲಾತಿ ದಂಡ ಶುಲ್ಕದ ಜೊತೆಗೆ ವಿಶೇಷ ವಿಳಂಬ ದಾಖಲಾತಿ ದಂಡ ಶುಲ್ಕ ಸೇರಿಸಿ ಪಡೆಯಬೇಕು. |
| ಕಲಾ/ವಾಣಿಜ್ಯ ಸಂಯೋಜನೆಗಳಲ್ಲಿ ಪ್ರಾಯೋಗಿಕ ಪರೀಕ್ಷೆ ಇರುವ ವಿಷಯಗಳಿದ್ದಲ್ಲಿ ಈ ಕೆಳಗಿನ ಶುಲ್ಕಗಳನ್ನು ಆ ವಿದ್ಯಾರ್ಥಿಗಳಿಂದ ಪಡೆಯುವುದು. | | | |
| 6 | ಪ್ರಯೋಗಾಲಯ ಶುಲ್ಕ | 112-00 | ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಪಡೆಯಬೇಕು. |
| 7 | ಪ್ರಥಮ ಪಿಯುಸಿ ಪ್ರಾಯೋಗಿಕ ಪರೀಕ್ಷಾ ಶುಲ್ಕ | 50-00 | ಪ್ರತಿ ಪ್ರಾಯೋಗಿಕ ಪರೀಕ್ಷೆ ವಿಷಯಕ್ಕೆ ಪಡೆಯಬೇಕು. |
| 8 | ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷಾ ಶುಲ್ಕ | 110-00 | ಪ್ರತಿ ಪ್ರಾಯೋಗಿಕ ಪರೀಕ್ಷೆ ವಿಷಯಕ್ಕೆ ಪಡೆಯಬೇಕು. |

ಸರ್ಕಾರಿ ಅಧಿಸೂಚನೆ ಸಂಖ್ಯೆ :- ಇಡಿ 39 ವಿವಿಧ 99 ದಿನಾಂಕ:- 14-03-2000 ರನ್ವಯ ಅನುದಾನರಹಿತ ಕಾಲೇಜಿನವರು ಮಾತ್ರ ವಿತರಿಸುವ ಪ್ರಮಾಣ ಪತ್ರ ವಿತರಣೆಗೆ ನಿಗಧಿಪಡಿಸಿರುವ ಶುಲ್ಕಗಳು.

(ವಿಶೇಷ ಸೂಚನೆ:- ಈ ಶುಲ್ಕಗಳನ್ನು ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಪಡೆಯಬಾರದು)

| ಕ್ರ ಸಂ | ಪ್ರಮಾಣ ಪತ್ರದ ವಿವರ | ಮೂಲ ಪ್ರತಿಗೆ ಶುಲ್ಕ (ರೂ.ಗಳಲ್ಲಿ) | ದ್ವಿತೀಯ ಪ್ರತಿಗೆ ಶುಲ್ಕ (ರೂ.ಗಳಲ್ಲಿ) | ಮೂರು ವರ್ಷಗಳ ಹಿಂದಿನ ದಾಖಲೆಗಳನ್ನು |
|---|---|---|---|---|
| 1 | ವರ್ಗಾವಣೆ ಪ್ರಮಾಣ ಪತ್ರ | 25/- | 25/- | 25/- |
| 2 | ಅಂಕಪಟ್ಟಿ | 25/- | 25/- | 25/- |
| 3 | ವ್ಯಾಸಂಗ ಪ್ರಮಾಣ ಪತ್ರ | 25/- | 25/- | 25/- |
| 4 | ನಡತೆ ಪ್ರಮಾಣ ಪತ್ರ | 25/- | 25/- | 25/- |
| 5 | ದಾಖಲಾತಿ ಪುಸ್ತಕದ ಉದ್ಧೃತ | 25/- | 25/- | 25/- |
| 6 | (Admission Register Extr) ಇತರೆ ಪ್ರಮಾಣ ಪತ್ರಗಳಿಗೆ | 25/- | 25/- | 25/- |

**ವಿವಿಧ ವರ್ಗಗಳ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯ್ತಿ ನೀಡುವ ಬಗ್ಗೆ.**

| **ಕ್ರ.ಸಂ** | **ವಿವರ** | **ಶುಲ್ಕ ವಿನಾಯ್ತಿಯ ಸರ್ಕಾರಿ ಆದೇಶ ಸಂಖ್ಯೆ** |
|---|---|---|
| 1. | ಪರಿಶಿಷ್ಟಜಾತಿ/ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನ್ವಯಿಸುವ ಶುಲ್ಕ ವಿನಾಯಿತಿ ಆದೇಶ | ಸಕಾಇ/ಬಿಸಿಎ/95, ಬೆಂಗಳೂರು ದಿನಾಂಕ:01.09.1995 |
| 2. | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಅನ್ವಯಿಸುವ ಶುಲ್ಕವಿನಾಯಿತಿ ಆದೇಶ | ಇಡಿ 67 ಹೆಚ್‌ಪಿಯು 2018, ಬೆಂಗಳೂರು. ದಿನಾಂಕ:15-12-2018 ಮತ್ತು ಇಪಿ 37 ಯೋಯೋಕ 2022 ಬೆಂಗಳೂರು, ದಿನಾಂಕ:28.06.2022. |
| 3. | ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 'ಡಿ'ದರ್ಜೆ ನೌಕರರ ಮಕ್ಕಳಿಗೆ ಅನ್ವಯಿಸುವ ಶುಲ್ಕ ವಿನಾಯಿತಿ ಆದೇಶ | ಇಡಿ 78/ಸಿಎಸ್‌ಎಸ್ 80/ ದಿನಾಂಕ:04.09.1980. |

ವಿಶೇಷಸೂಚನೆ: ತಹಶೀಲ್ದಾರರಿಂದ ನೀಡಲ್ಪಟ್ಟ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಒದಗಿಸುವ ವಿದ್ಯಾರ್ಥಿಗಳಿಗೆ ಅನ್ವಯಿಸುವ ಶುಲ್ಕ ವಿನಾಯಿತಿ ನೀಡಬೇಕು.

**ಅಂತರಿಕ ಅಂಕಗಳ ಕುರಿತು:**

1. 2023-24ನೇ ಸಾಲಿನಿಂದ ಇಲಾಖೆಯು ಪ್ರಾಯೋಗಿಕ ತರಗತಿಗಳಿಲ್ಲದ ವಿಷಯಗಳಲ್ಲಿ ಆಂತರಿಕ ಅಂಕಗಳನ್ನು ನೀಡುವ ವಿಧಾನ ಅಳವಡಿಸಿದೆ.
2. ಪ್ರಥಮ ಕಿರು ಪರೀಕ್ಷೆ, ಮಧ್ಯಾವಧಿ ಪರೀಕ್ಷೆ, ಎರಡನೇ ಕಿರುಪರೀಕ್ಷೆ ಹಾಗೂ ಪ್ರೋಜೆಕ್ಟ್ /ಅಸೈನ್‌ಮೆಂಟ್ ಗಳಲ್ಲಿ ಪಡೆದ ಅಂಕಗಳನ್ನು ನಿಗದಿತ ಕಾಲಮಿತಿಯಲ್ಲಿ SATS Portal ನಲ್ಲಿನ ಮೂದಿಸುವುದು.
3. ಸದರಿ ಆಂಕಗಳ ಆಧಾರದ ಮೇಲೆ ನಿಯಮಾನುಸಾರ, ಪ್ರತಿ ವಿಷಯಕ್ಕೆ ಆಂತರಿಕ ಅಂಕಗಳು ಸ್ವಯಂಚಾಲಿತವಾಗಿ ಸೃಜನೆಗೊಳ್ಳುತ್ತವೆ.
4. ಹೀಗೆ ಸೃಜನೆಗೊಂಡ ಆಂತರಿಕ ಅಂಕಗಳು, ಪ್ರಥಮ ಪಿಯುಸಿಗೆ ಸಂಬಂಧಿಸಿದಂತೆ, ಫಲಿತಾಂಶ ಪಟ್ಟಿಗೂ, ದ್ವಿತೀಯ ಪಿಯುಸಿಗೆ ಸಂಬಂಧಿಸಿದಂತೆ KSEAB ವರ್ಗಾವಣೆಗೊಳ್ಳುತ್ತವೆ.
5. ಆದುದರಿಂದ ಅಂಕಗಳನ್ನು ನಮೂದಿಸುವಾಗ, ಪ್ರಾಚಾರ್ಯರು ಖುದ್ದಾಗಿ ಮುತುವರ್ಜಿವಹಿಸಿ, ಜಾಗರೂಕತೆಯಿಂದ ನಮೂದಿಸುವುದು. ಒಂದು ವೇಳೆ ತಪ್ಪಾಗಿ ನಮೂದಿಸಿ, ಅಥವಾ ನಮೂದಿಸದೇ ಇದ್ದು, ಪರೀಕ್ಷಾ ಫಲಿತಾಂಶದಲ್ಲಿ ಅಂತರಿಕ ಅಂಕಗಳನ್ನು ಪರಿಗಣಿಸದೇ ಇದ್ದ ಪಕ್ಷದಲ್ಲಿ ಆಯಾ ಕಾಲೇಜಿನ ಪ್ರಾಚಾರ್ಯರೇ ನೇರ ಹೊಣೆಗಾರರಾಗಿರುತ್ತಾರೆ.

6. ನಿಗದಿಪಡಿಸಿದ ಎಲ್ಲಾ ಪರೀಕ್ಷೆಗಳು ಹಾಗೂ ಪ್ರೋಜೆಕ್ಟ್ /ಅಸೈನ್‌ಮೆಂಟ್ ಗಳ ಅಂಕಗಳ ನಮೂದು ಆದ ನಂತರ, ಪ್ರತಿ ವಿಷಯಕ್ಕೆ ಆಂತರಿಕ ಅಂಕಗಳ ವಿವರಗಳು SATS POTAL ನಲ್ಲಿ ಲಭ್ಯವಾಗುತ್ತವೆ. ಸದರಿ ಪಟ್ಟಿಯನ್ನು ಮುದ್ರಿಸಿ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ, ವಿದ್ಯಾರ್ಥಿಗಳಿಗೆ ಗಮನಿಸಲು ಸೂಚಿಸುವುದು.
7. ಒಮ್ಮೆ ನಮೂದಾಗಿ Submit ಆದ ಅಂಕಗಳನ್ನು ಬದಲಾಯಿಸಲು ಯಾವದೇ ಕಾರಣಕ್ಕೂ ಅವಕಾಶವಿರುವುದಿಲ್ಲ

**ವಿಶೇಶಸೂಚನೆ:**

ಅಂಧ ಮತ್ತು ದೃಷ್ಠಿ ಮಾಂದ್ಯ ವಿದ್ಯಾರ್ಥಿಗಳಿಗೆ, 20 ಆಂತರಿಕ ಅಂಕಗಳಿಗೆ, Viva-Voce ನಡೆಸಿ, ಅವರು 20 ಅಂಕಗಳಿಗೆ ಗಳಿಸಿದ ಅಂಕಗಳನ್ನು ನೇರವಾಗಿ SATS Portal ನಲ್ಲಿ ಪ್ರೋಜೆಕ್ಟ್ /ಅಸೈನ್ ಮೆಂಟ್ ಕಾಲಂನಲ್ಲಿ ನಮೂದಿಸುವುದು.

**N C C**:

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ). ಇಲಾಖೆಯಲ್ಲಿ ಕಾರ್ಯನಿಹಿಸುತ್ತಿರುವ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸದಾಗಿ, ಎನ್.ಸಿ.ಸಿ ಘಟಕಗಳನ್ನು ಆರಂಭಿಸಲು ಹೆಚ್ಚು ಪ್ರೋತ್ಸಾಹವನ್ನು ನೀಡಲು ತಿಳಿಸಿದೆ. ಹೊಸದಾಗಿ ಎನ್.ಸಿ.ಸಿ ಘಟಕವನ್ನು ಆರಂಭಿಸಲು ಇಚ್ಚಿಸುವವರು ಪೂರ್ಣ ಪ್ರಸ್ತಾವನೆಯೊಂದಿಗೆ ಕಳುಹಿಸಬೇಕಾದ ವಿಳಾಸ: NCC Directorate (Kar & Goa), KSCMF Building, 4th Floor, No-8, Cunningham Road, Bangaluru-560001.

## ಅಧ್ಯಾಯ-06

### ದಾಖಲಾತಿ, ಸಾಂಸ್ಕೃತಿಕ ಹಾಗೂ ಇತರೆಚಟುವಟಿಕೆಗಳವೇಳಾಪಟ್ಟಿ.

**ಕಾಲೇಜಿನ ದಿನದ ಕಾರ್ಯ ನಿರ್ವಹಣಾ ಅವಧಿ 6 ಗಂಟೆಗೆ ಕಡಿಮೆ ಇಲ್ಲದಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸುವುದು ಆದ್ಯಕರ್ತವ್ಯ ಆಗಿರುತ್ತದೆ. ಈ ವೇಳಾಪಟ್ಟಿಯನ್ನು ಜಿಲ್ಲಾಉಪನಿರ್ದೇಶಕರಿಗೆ ಸಲ್ಲಿಸಬೇಕು.**

**ಪ್ರಥಮ ಪಿಯುಸಿ ದಾಖಲಾತಿ ವೇಳಾಪಟ್ಟಿ ಹಾಗೂ ಶೈಕ್ಷಣಿಕ ಚಟುವಟಿಕೆಗಳ ವೇಳಾಪಟ್ಟಿ:**

**ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ 2025-26ನೇ ಶೈಕ್ಷಣಿಕ ಸಾಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳ ದಾಖಲಾತಿ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಅಂಶಗಳನ್ನುಅನುಸರಿಸಲು ಸೂಚಿಸಲಾಗಿದೆ.**

| | | |
|---|---|---|
| 1. | ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳು ಪ್ರಥಮ ಪಿಯುಸಿ ತರಗತಿಗಳ ದಾಖಲಾತಿಗೆ ಸಂಬಂಧಿಸಿದಂತೆ ಈ ಮಾಹಿತಿಗಳನ್ನುಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸುವ ಕುರಿತು. | ರಾಜ್ಯದ SSLC ಪರೀಕ್ಷಾ ಫಲಿತಾಂಶ ಪ್ರಕಟವಾದ ದಿನದಂದು ಈ ಕೆಳಕಂಡ ವಿವರಗಳನ್ನು ಎಲ್ಲಾ ಕಾಲೇಜಿನವರು ತಮ್ಮ ಕಾಲೇಜಿನ ಸೂಚನಾ ಫಲಕದಲ್ಲಿ ಹಾಗೂ websiteನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು:<br>• ಇಲಾಖೆ ಯಿಂದ ಅನುಮತಿ ಪಡೆದ ಸಂಯೋಜನೆವಾರು ಹಾಗೂ ರೋಸ್ಟರ್‌ವಾರು ಪ್ರವೇಶಗಳ ಮಾಹಿತಿ.<br>• ದಾಖಲಾತಿ ಶುಲ್ಕಗಳ ವಿವರ.<br>• ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಪೂರ್ಣ ವಿವರ.<br><br>ಪ್ರಕಟಿಸಿದ ಪ್ರತಿಯನ್ನು ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಅದೇ ದಿನ ಕಡ್ಡಾಯವಾಗಿ ಸಲ್ಲಿಸುವುದು. |
| 2. | ಪ್ರವೇಶ ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ. | ಎಸ್ಎಸ್ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ 4ನೇ ಕಾರ್ಯನಿರತ ದಿನ. |
| 3. | ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ. | ಪ್ರವೇಶ ಅರ್ಜಿಗಳನ್ನು ವಿತರಿಸಲು ನಿರ್ಧರಿಸಿದ ಕೊನೆಯ ದಿನಾಂಕದಿಂದ 2ನೇ ಕಾರ್ಯನಿರತ ದಿನ. |
| 4. | ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳಪಟ್ಟಿ (ವರ್ಗವಾರು, ಮೆರಿಟ್ ಅನ್ವಯ ಇಳಿಕೆ ಕ್ರಮದಲ್ಲಿ) ಪ್ರಕಟಣೆ. | ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಿದ ಕೊನೆಯ ದಿನಾಂಕದಿಂದ ಕಾರ್ಯನಿರತ 2ನೇ ಕಾರ್ಯನಿರತ ದಿನ |
| 5. | ಆಯ್ಕೆಯಾದ ವಿದ್ಯಾರ್ಥಿಗಳ ಪ್ರಥಮ ಪಟ್ಟಿ ಪ್ರಕಟಣೆ. | ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿಸಲ್ಲಿಸಿರುವ ಎಲ್ಲಾವಿದ್ಯಾರ್ಥಿಗಳಪಟ್ಟಿಪ್ರಕಟಿಸಲುನಿಗದಿಪಡಿಸಿದದಿನಾಂಕದಿಂದ 2ನೇ ಕಾರ್ಯನಿರತದಿನ. |
| 6. | ಪ್ರಥಮ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ. | ಪ್ರಥಮಪಟ್ಟಿಪ್ರಕಟಿಸಿದದಿನಾಂಕದಿಂದಕಾರ್ಯನಿರತ 3ನೇ ದಿನ. |
| 7. | ಆಯ್ಕೆಯಾದ ವಿದ್ಯಾರ್ಥಿಗಳ ದ್ವಿತೀಯ ಪಟ್ಟಿ ಪ್ರಕಟಣೆ. | ಪ್ರಥಮ ಪಟ್ಟಿ ಪ್ರಕಟಪಡಿಸಿದ ದಿನಾಂಕದಿಂದ ಕಾರ್ಯನಿರತ 4ನೇ ದಿನ. |
| 8. | ದ್ವಿತೀಯ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ. | ದ್ವಿತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ. |
| 9. | ಆಯ್ಕೆಯಾದ ವಿದ್ಯಾರ್ಥಿಗಳ ತೃತೀಯ ಪಟ್ಟಿ ಪ್ರಕಟಣೆ. | ವಿದ್ಯಾರ್ಥಿಗಳ ದ್ವಿತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ. |
| 10 | ತೃತೀಯ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ. | ತೃತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 2ನೇ ದಿನ. |

| | | |
|---|---|---|
| 11 | ಶುಲ್ಕ ಕಟ್ಟಿ ದಾಖಲಾದ ವಿದ್ಯಾರ್ಥಿಗಳ ಪಟ್ಟಿ ಪ್ರಕಟಣೆ(ವರ್ಗವಾರು/ಸಂಯೋಜನೆವಾರು) ಸಂಯೋಜನೆವಾರು ಪ್ರವೇಶ ಪಡೆದ ಕೊನೆಯ ವಿದ್ಯಾರ್ಥಿಯ Cut off Point ಪ್ರಕಟಣೆ. | ತೃತೀಯ ಪಟ್ಟಿ ಪ್ರಕಟವಾದ ದಿನಾಂಕದಿಂದ ಕಾರ್ಯನಿರತ 3ನೇ ದಿನ. |
| 12 | ಪ್ರವೇಶಗಳು ಉಳಿದಿದ್ದಲ್ಲಿ – ಉಳಿದ ಪ್ರವೇಶಗಳಿಗೆ ಅಂತಿಮ ಪಟ್ಟಿ ಪ್ರಕಟಣೆ. | ತೃತೀಯ ಪಟ್ಟಿ ಪ್ರಕಟವಾದ ದಿನಾಂಕದಿಂದ ಕಾರ್ಯನಿರತ 3ನೇ ದಿನ |

ಮೇಲ್ಕಂಡಂತೆ ದಾಖಲಾತಿ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಪದವಿಪೂರ್ವ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರು ಕಡ್ಡಾಯವಾಗಿ ಪಾಲಿಸತಕ್ಕದೆಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಇದನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರ ವಿರುದ್ಧ ಶಿಸ್ತು ಕ್ರಮಜರುಗಿಸಲಾಗುವುದು ಹಾಗೂ ಖಾಸಗಿ ಕಾಲೇಜುಗಳ ಶೈಕ್ಷಣಿಕ ಮಾನ್ಯತೆಯನ್ನು ರದ್ದುಪಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

# ಅಧ್ಯಾಯ-07.

## ಕಾಲೇಜು/ಸಂಯೋಜನೆ/ವಿಷಯ ಬದಲಾವಣೆ

### ೧. ಕಾಲೇಜು ಬದಲಾವಣೆ: (Change of College)

**(ಅ) ಪ್ರಥಮ ಪಿಯುಸಿಗೆ ಕಾಲೇಜು ಬದಲಾವಣೆ :**

- ಆಯಾ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿಯುಸಿ ವ್ಯಾಸಂಗಕ್ಕೆ ದಾಖಲಾದ ವಿದ್ಯಾರ್ಥಿಯು ಕಾರಣಾಂತರದಿಂದ ಬೇರೊಂದು ಕಾಲೇಜಿಗೆ ವ್ಯಾಸಂಗವನ್ನು ಮುಂದುವರೆಸಲು ಇಚ್ಛಿಸಿದ್ದಲ್ಲಿ ಅಂತಹ ವಿದ್ಯಾರ್ಥಿಯು ದಾಖಲಾತಿ ಪಡೆದ ಕಾಲೇಜಿನ ಪ್ರಾಚಾರ್ಯರ ಒಪ್ಪಿಗೆ ಪಡೆದು, (ನಿಗದಿತ ನಮೂನೆಯೊಳಗೆ) ಸದರಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅವಧಿಯ ಹಾಜರಾತಿ ದೃಢೀಕರಣ ಪತ್ರವನ್ನು ಪಡೆದು ಪ್ರವೇಶ ಲಭ್ಯವಿರುವ ಬೇರೊಂದು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸಿ ನಿಯಮಾನುಸಾರ ದಾಖಲಾಗಬಹುದು.
- ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಯ ವರ್ಗಾವಣೆ ಪತ್ರದಲ್ಲಿ "I PUC Change of College" ಎಂದು ನಮೂದಿಸುವುದು ಹಾಗೂ ದಾಖಲಾದ ದಿನಾಂಕದಿಂದ ವ್ಯಾಸಂಗ ಮಾಡಿದ ದಿನಾಂಕದವರೆಗೆ ಸ್ಪಷ್ಟವಾಗಿ ನಮೂದಿಸುವುದು. ಕಾಲೇಜು ಬದಲಾವಣೆಯ ನಿಗದಿತ ಅರ್ಜಿ ನಮೂನೆಗೆ/ಇತರೆ ದಾಖಲೆಗಳಿಗೆ ಸಹಿ ಮಾಡಿ ವಿದ್ಯಾರ್ಥಿವಶಕ್ಕೆ ನೀಡುವುದು.
- ಪ್ರಥಮ ಪಿಯುಸಿ ತರಗತಿಗೆ ಇಂತಹ ವಿದ್ಯಾರ್ಥಿಯು ಕಾಲೇಜು ಬದಲಾವಣೆ ಬಯಸಿದ್ದಲ್ಲಿ ಪ್ರಾಚಾರ್ಯರ ಹಂತದಲ್ಲೇ ದಾಖಲಾತಿಯ ಕೊನೆಯ ದಿನಾಂಕದ ಒಳಗಡೆ ಕಾಲೇಜು ಬದಲಾವಣೆ ಮಾಡಿಕೊಳ್ಳಬಹುದು.
- ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗೆ ಹಾಜರಾತಿ ಕೊರತೆಯಿಂದ ಪ್ರಥಮ ಪಿಯುಸಿಯಲ್ಲಿ ವಾರ್ಷಿಕ ಪರೀಕ್ಷೆ ಬರೆಯಲು ಅನರ್ಹರಾದ ವಿದ್ಯಾರ್ಥಿ ಕಾಲೇಜು ಬದಲಾವಣೆ ಹೊಂದಲು ಇಚ್ಛಿಸಿದ್ದಲ್ಲಿ ವಿದ್ಯಾರ್ಥಿಯು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಬದಲಾವಣೆಯೊಂದಿಗೆ ಮರುದಾಖಲಾತಿಯನ್ನು ಅದೇ ಸಂಯೋಜನೆಯಲ್ಲಿ ಎರಡೂ ಕಾಲೇಜುಗಳ ಹಂತದಲ್ಲೇ ಅನುಮತಿ ಪಡೆದು ವ್ಯಾಸಂಗವನ್ನು ಮುಂದುವರೆಸಬಹುದು.

**ಆ) ದ್ವಿತೀಯ ಪಿಯುಸಿಗೆ ಕಾಲೇಜು ಬದಲಾವಣೆ:(SATS ಮೂಲಕ)**

- ವಿದ್ಯಾರ್ಥಿಯು ನಿಯಮಾನುಸಾರ ಕಾಲೇಜು ಬದಲಾವಣೆ ಅರ್ಜಿ ಹಾಗೂ ಶುಲ್ಕಭರಿಸಿ ಅನುಮತಿ ಪಡೆಯುವುದು.
- ಕಾಲೇಜು ಬದಲಾವಣೆ ಮಾಡಿಕೊಂಡ ವಿದ್ಯಾರ್ಥಿಯ ವಿವರವನ್ನು ಪ್ರಾಚಾರ್ಯರು ತಮ್ಮLoginನಲ್ಲಿಕಾಲೇಜು ಬದಲಾವಣೆ Menu ಆಯ್ಕೆ ಮಾಡಿಕೊಂಡು ಸದರಿ ವಿದ್ಯಾರ್ಥಿಯ SATS ನಂಬರ್ ನಮೂದಿಸಿ ಅಗತ್ಯ ಮಾಹಿತಿಭರ್ತಿ ಮಾಡಿ ದಾಖಲು ಮಾಡಿಕೊಳ್ಳುವುದು.
- ದ್ವಿತೀಯ ಪಿಯುಸಿ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯನ್ನು ಹಾಜರಾತಿ ಕೊರತೆಯಿಂದ ತೆಗೆದುಕೊಳ್ಳಲು ಸಾಧ್ಯವಾಗದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಗೆ ಮರುದಾಖಲಾತಿಯನ್ನು ಅದೇ ಕಾಲೇಜಿನಲ್ಲಿ ಪಡೆದಲ್ಲಿ ಇಲಾಖೆಯ ಅನುಮತಿ ತೆಗೆದುಕೊಳ್ಳುವ ಅಗತ್ಯವಿರುವುದಿಲ್ಲ. ಕಾಲೇಜು ಬದಲಾವಣೆ ಆಗಿದ್ದಲ್ಲಿ ಇಲಾಖೆಯಿಂದ ಅನುಮತಿ ಪಡೆದ ನಂತರವೇ ಪ್ರಾಚಾರ್ಯರು ವಿದ್ಯಾರ್ಥಿಯನ್ನು ದ್ವಿತೀಯ ಪಿಯುಸಿಗೆ ದಾಖಲಾತಿ ಮಾಡಿಕೊಳ್ಳುವುದು.
- ಇ-ಆಡಳಿತ ಮೂಲಕ SATS ಗೆ ಸಂಬಂಧಿಸಿದಂತೆ, ದಾಖಲಾತಿ ಪ್ರಕ್ರಿಯೆ ,ದಾಖಲಾತಿ ಪಡೆದ ವಿದ್ಯಾರ್ಥಿಗಳ ನಮೂದು, ಶುಲ್ಕ ನಮೂದು, ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ಸಂಬಂಧಿಸಿದಂತೆ ಪ್ರವೇಶ ಪತ್ರ, ಫಲಿತಾಂಶಪಟ್ಟಿಗಳ ಬಗ್ಗೆ ಕಾಲಕಾಲಕ್ಕೆ ಹೊರಡಿಸಲಾಗುವ ಸುತ್ತೋಲೆಗಳ ಪ್ರಕಾರ ಕ್ರಮವಹಿಸುವುದು.

### 1. ವಿಷಯಬದಲಾವಣೆ: (Change of Subject)

ಪ್ರಥಮ ಪಿಯುಸಿಯಲ್ಲಿ ತೇರ್ಗಡೆಯಾಗಿ ದ್ವಿತೀಯ ಪಿಯುಸಿಯಲ್ಲಿ ದಾಖಲಾಗುವ ಮತ್ತು ಕಾಲೇಜು ಬದಲಾವಣೆ ಮಾಡಿಕೊಂಡ ಸಂದರ್ಭದಲ್ಲಿ ಭಾಗ-01 ರಲ್ಲಿಒಂದು ಭಾಷೆ ಹಾಗೂ ಭಾಗ-02 ರಲ್ಲಿಒಂದು ಪ್ರಾಯೋಗಿಕವಲ್ಲದ ವಿಷಯದ ಬದಲಾವಣೆಗೆ ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರಿಗೆ ಅಧಿಕಾರ ನೀಡಿದೆ. ಆದರೆ ಅಂತಹ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗೆ ಹಾಜರಾಗುವ ಮೊದಲು ಬದಲಾವಣೆ ಮಾಡಿಕೊಂಡ ವಿಷಯಗಳಲ್ಲಿ ಪ್ರಥಮ ಪಿಯುಸಿ ಪರೀಕ್ಷೆಗೆ ಹಾಜರಾಗಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. (ಇದರ ಪೂರ್ಣಜವಾಬ್ದಾರಿಯು ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರದ್ದೇ ಆಗಿರುತ್ತದೆ).

**ವಿಶೇಷಸೂಚನೆ:-**

- ಭಾಗ-2 ರಲ್ಲಿ ಪ್ರಾಯೋಗಿಕವಲ್ಲದ ಒಂದು ವಿಷಯ ಬದಲಾವಣೆಗೆ ಅವಕಾಶವಿದೆ ಆದರೆ ಪ್ರಾಯೋಗಿಕ ಪರೀಕ್ಷೆಗಳಿರುವ ವಿಷಯಗಳಲ್ಲಿ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಎರಡು ವಿಷಯಗಳಿಗಿಂತ (ಒಂದು ಭಾಷೆ ಮತ್ತು ಒಂದು ಐಚ್ಛಿಕ ವಿಷಯ) ಹೆಚ್ಚು ವಿಷಯಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಎರಡಕ್ಕಿಂತ ಹೆಚ್ಚಿನ ವಿಷಯಗಳನ್ನು ಬದಲಾವಣೆ ಮಾಡಲು ಇಷ್ಟಪಡುವ ವಿದ್ಯಾರ್ಥಿಗಳು ಇಚ್ಛಿಸಿದ ಸಂಯೋಜನೆಯಲ್ಲಿ ಪ್ರಥಮ ಪಿ.ಯು.ಸಿ. ತರಗತಿಗೆ ಮರುದಾಖಲಾತಿ ಪಡೆಯಬಹುದಾಗಿದೆ. ಇಂತಹ ಸಂದರ್ಭದಲ್ಲಿ ಪ್ರಥಮ ಪಿಯುಸಿ ಭಾಷಾ ವಿಷಯಗಳಲ್ಲಿಉತ್ತೀರ್ಣರಾಗಿದ್ದರೆ, ಭಾಷಾ ವಿಷಯದಿಂದ ವಿನಾಯಿತಿ ನೀಡಲಾಗುವುದು.

- ಪ್ರಾಂಶುಪಾಲರು ಪ್ರಸ್ತಾವನೆ ಕಳುಹಿಸುವ ಮುನ್ನ ಲಗತ್ತುಗಳನ್ನು, ಕಾಲೇಜಿನ ಸಂಕೇತ ಸಂಖ್ಯೆ, ವಿದ್ಯಾರ್ಥಿ ಸಂಖ್ಯೆ, ವಿದ್ಯಾರ್ಥಿಯ ವಿಳಾಸ, ಅಭ್ಯಾಸ ಮಾಡಿದ ಭಾಷೆ/ವಿಷಯಗಳು/ಅಂಕಪಟ್ಟಿ ಮುಂತಾದವುಗಳನ್ನು ಪರಿಶೀಲಿಸಬೇಕು.
- ಕಾಲೇಜು ಬದಲಾವಣೆಗೆ ನಿಗದಿತ ಶುಲ್ಕವನ್ನು ಖಜಾನೆಗೆ ಪಾವತಿಸಿದ ಬಗ್ಗೆ ಪರಿಶೀಲಿಸುವುದು.

2. **ಸಂಯೋಜನೆಬದಲಾವಣೆ:(Change of Combination)**
   - ಪ್ರಥಮ ಪಿಯುಸಿಯಲ್ಲಿ ಉತ್ತೀರ್ಣ/ಅನುತ್ತೀರ್ಣರಾದ ವಿದ್ಯಾರ್ಥಿಗಳು ಸಂಯೋಜನೆ ಬದಲಾವಣೆ ಬಯಸಿ ಪ್ರಥಮ ಪಿಯುಸಿಗೆ ಮರುದಾಖಲಾತಿ ಬಯಸಿದಲ್ಲಿ ಸದರಿ ಸಂಯೋಜನೆ ಹೊಂದಿರುವ ಕಾಲೇಜಿನ ಪ್ರಾಚಾರ್ಯರಿಂದ ಅನುಮತಿ ಪಡೆದು ನಿಗದಿತ ಶುಲ್ಕವನ್ನು ಪಾವತಿಸಿ ನಿಯಮಾನುಸಾರ ಮರುದಾಖಲಾತಿ ಮಾಡಿಕೊಳ್ಳಬೇಕು.

3. **ಮರುದಾಖಲಾತಿ:( Re-Admission)**
   - ಎರಡು ವರ್ಷಗಳ ಪದವಿ ಪೂರ್ವ ಶಿಕ್ಷಣ ಅಧ್ಯಯನ ಅವಧಿ ಪೂರ್ಣಗೊಳಿಸಿರುವ ಆದರೆ, ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಲು ಸಾಧ್ಯವಾಗದ ಅಥವಾ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಯು ಸಂಪೂರ್ಣವಾಗಿ ಬೇರೆ ವಿಷಯಗಳ ಸಂಯೋಜನೆಯನ್ನು ಅಧ್ಯಯನ ಮಾಡಲು ಬಯಸಿದ್ದಲ್ಲಿ ಕಡ್ಡಾಯವಾಗಿ ನಿರ್ದೇಶನಾಲಯದ ಅನುಮತಿ ಪಡೆದು ಪ್ರಥಮ ಪಿಯುಸಿ ತರಗತಿಗೆ ದಾಖಲಾಗಿ ವ್ಯಾಸಂಗವನ್ನು ಮುಂದುವರೆಸಬಹುದಾಗಿದೆ.
   - ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ದಾಖಲಾತಿ ಪಡೆದು ಹಾಜರಾತಿ ಕೊರತೆಯಿಂದ ಪರೀಕ್ಷೆಗೆ ಹಾಜರಾಗಲು ಅನರ್ಹರಾದ ವಿದ್ಯಾರ್ಥಿಗಳು ಅದೇ ಸಂಯೋಜನೆಯೊಂದಿಗೆ ಪುನ: ಪ್ರಥಮ/ದ್ವಿತೀಯ ಪಿಯುಸಿ ತರಗತಿಗಳಿಗೆ ಮರುದಾಖಲಾತಿ ಪಡೆಯಲು ಅವಕಾಶವಿರುತ್ತದೆ.
   - ಹಾಜರಾತಿ ಕೊರತೆ ಇದ್ದು ಒಂದು ವೇಳೆ ಅದೇ ಕಾಲೇಜಿನಲ್ಲಿ ವಿದ್ಯಾರ್ಥಿಯು ಮರುದಾಖಲಾತಿ ಬಯಸಿದಲ್ಲಿ ಇಲಾಖೆಯ ಅನುಮತಿ ಪಡೆಯುವುದು ಅಗತ್ಯವಿರುವುದಿಲ್ಲ ಹಾಗೂ ಇಂತಹ ವಿದ್ಯಾರ್ಥಿಗಳಿಗೆ ದಾಖಲಾತಿ ಪಡೆಯಲು ಕಾಲೇಜಿನ ಪ್ರಾಚಾರ್ಯರು ಅನುವು ಮಾಡಿಕೊಡುವುದು.
   - ಪ್ರಥಮ ಪಿಯುಸಿ ತರಗತಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಯು ಅದೇ ಸಂಯೋಜನೆಯಲ್ಲಿ ಒಂದು ಐಚ್ಛಿಕ ವಿಷಯದ ಬದಲಾವಣೆಯೊಂದಿಗೆ ಮರುದಾಖಲಾತಿ ಪಡೆಯಬಹುದು.
   - ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ75 ಟಿಪಿಯು 2015 ಬೆಂಗಳೂರು ದಿನಾಂಕ:31-05-2016 ರಲ್ಲಿ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ಆಡಳಿತ, ನೋಂದಣಿ ಮತ್ತು ಸಹಾಯಾನುದಾನ ಮತ್ತು ಇತರೆ) ನಿಯಮಗಳು 2006 ರ ನಿಯಮ 10 ರ ಉಪ ನಿಯಮ 7ರಲ್ಲಿ ತಿಳಿಸಿರುವಂತೆ, CBSE/ICSE ಅಥವಾ 11ನೇ ತರಗತಿಗೆ ತತ್ಸಮಾನ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಕಾಲೇಜು ಬದಲಾವಣೆ ಬಯಸಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಅದೇ ಸಂಯೋಜನೆಗೆ ನಿಯಮಾನುಸಾರ ಮರುದಾಖಲಾತಿ ಪಡೆಯಬಹುದು.
   - ಭಾಗ-1 ರ ಭಾಷೆಗಳಲ್ಲಿ ಒಂದು ಭಾಷೆ ವಿಷಯ ಮತ್ತು ಭಾಗ-2 ರ ಐಚ್ಛಿಕ ವಿಷಯಗಳಲ್ಲಿ ಒಂದನ್ನು ಬದಲಾವಣೆ ಮಾಡಿಕೊಳ್ಳಬಹುದು.
   - ಪ್ರಥಮ ಪಿಯುಸಿಯಲ್ಲಿ ಉತ್ತೀರ್ಣರಾಗಿ ಕಾರಣಾಂತರಗಳಿಂದ ಕಾಲೇಜು ಮುಂದುವರಿಸದೆ ವಿಚ್ಛಿನ್ನತೆ ನಂತರ ದ್ವಿತೀಯ ಪಿಯುಸಿ ತರಗತಿಗೆ ಮರುದಾಖಲಾತಿ ಬಯಸುವ ವಿದ್ಯಾರ್ಥಿಗಳಿಗೆ ಆಯಾ ಜಿಲ್ಲಾಉಪನಿರ್ದೇಶಕರಿಂದ ಅನುಮತಿ ಪಡೆದು ನಿಯಮಾನುಸಾರ ಮರುದಾಖಲಾತಿ ಪಡೆಯುವುದು.

4. **ಹಾಜರಾತಿ ಕೊರತೆಯ ಬಗ್ಗೆ**:
   - ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ ನೋಂದಣಿ, ಆಡಳಿತ ಮತ್ತು ಸಹಯಾನುದಾನ, ಇತರೆ.....) ನಿಯಮಾಗಳು 2024 ರ ಉಪನಿಯಮ 15(1) ರನ್ವಯ ಪ್ರತಿ ವಿಷಯದಲ್ಲಿ ಕನಿಷ್ಠ ಶೇಕಡ 75ರಷ್ಟು ಹಾಜರಾತಿಯನ್ನು (ಪ್ರತಿ ವಿಷಯದಲ್ಲಿ) ಕಡ್ಡಾಯವಾಗಿ ಹೊಂದಿರತಕ್ಕದ್ದು, ಅಂತಹ ವಿದ್ಯಾರ್ಥಿಯು ಮಾತ್ರ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುತ್ತಾರೆ.
   - ಹಾಜರಾತಿ ನಿಯಮದನ್ವಯ ಒಂದು ಶೈಕ್ಷಣಿಕ ಅವಧಿಯಲ್ಲಿ ಅಂದರೆ ದಾಖಲಾತಿಯ ಶೈಕ್ಷಣಿಕ ವರ್ಷದ ಆರಂಭದ ದಿನದಿಂದ ವಾರ್ಷಿಕ (ಪ್ರಥಮ ಹಾಗೂ ದ್ವಿತೀಯ ಪಿಯುಸಿ) ಪರೀಕ್ಷೆಗಳ ಹಿಂದಿನ ದಿನಾಂಕದವರೆಗೆ ವಿದ್ಯಾರ್ಥಿಗಳ ಹಾಜರಾತಿಯನ್ನು ಪರಿಗಣಿಸಬೇಕಾಗಿದೆ. ಈ ಅವಧಿಯಲ್ಲಿನ ಹಾಜರಾತಿಯ ಲೆಕ್ಕಾಚಾರವನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ತಿಳಿಸುವ ಸಲುವಾಗಿ ಈ ಕೆಳಗಿನಂತೆ ಕ್ರಮವಹಿಸುವುದು:

**ವಿಶೇಷಸೂಚನೆ:** ಹಾಜರಾತಿ ಕೊರತೆಯನ್ನು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಕಡ್ಡಾಯವಾಗಿ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ಸ್ವೀಕೃತಿಯನ್ನು ಪಡೆಯುವುದು. ಹಾಗೂ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳ ಪಟ್ಟಿಯನ್ನು ಜಿಲ್ಲಾ ಉಪನಿರ್ದೇಶಕರ ದೃಢೀಕರಣದೊಂದಿಗೆ ಸಹಾಯಕ ನಿರ್ದೇಶಕರು (ಪರೀಕ್ಷಾ ಶಾಖೆ), ಕರ್ನಾಟಕಪರೀಕ್ಷೆಹಾಗೂಮೌಲ್ಯನಿರ್ಣಯ ಮಂಡಳಿ, ಮಲ್ಲೇಶ್ವರಂ,06 ನೇಕ್ರಾಸ್ ಇವರಿಗೆ ಕಡ್ಡಾಯವಾಗಿ ಜನವರಿ ತಿಂಗಳ ಮೊದಲನೇ ವಾರದಲ್ಲಿ ಕಳುಹಿಸಿಕೊಡುವುದು.

**ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಗೆ ಸಲ್ಲಿಸಬೇಕಾದ ಮಾಹಿತಿಗಳ ವಿವರ:**

| ಕ್ರ. ಸಂ | ಸಲ್ಲಿಸಬೇಕಾದ ಮಾಹಿತಿಯ ವಿವರ | ಕಾಲೇಜಿನ ಪ್ರಾಂಶುಪಾಲರು ಜಿಲ್ಲಾ ಉಪನಿರ್ದೇಶಕರಿಗೆ ಮಾಹಿತಿಯನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ | ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಮಾಹಿತಿಯನ್ನು ಕ್ರೋಢೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವ ವಿಳಾಸ |
|---|---|---|---|
| **01** | ಪ್ರಥಮ ಪಿಯುಸಿ ಭಾಷಾ / ಸಂಯೋಜನೆ / ಖಾಸಗಿ ಅಭ್ಯಾಸ /ಕಾಲೇಜು ಬದಲಾವಣೆ/ ಹೊರರಾಜ್ಯ /ರಾಷ್ಟ್ರೀಯ ಅನ್ಯಪರ್ತ್ಯ ಕ್ರಮ ಅರ್ಜಿಗಳಿಗೆ ಶುಲ್ಕವನ್ನು ಪಾವತಿಸಲು. | **ಜುಲೈ 20** | ------------------- |
| **02** | ಖಾಸಗಿ ಅಭ್ಯಾಸ ಅರ್ಜಿಗಳನ್ನು ಇಲಾಖೆಯಿಂದ ನೀಡಿರುವ ನಮೂನೆಯಂತೆ ಮೂಲ ಚಲನ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸಲು .Soft Copyಯನ್ನು academic2.pue@gmail ಕಳುಹಿಸುವುದು. | **ಜುಲೈ 20** | ಜಂಟಿ ನಿರ್ದೇಶಕರು (ಶೈಕ್ಷಣಿಕ),ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12. |
| **03** | ಭಾಷಾ ವಿನಾಯತಿಗಾಗಿ ಅರ್ಜಿಗಳನ್ನು ಸಲ್ಲಿಸಲು. (ಕೇಂದ್ರಕಛೇರಿಗೆ ಕಡ್ಡಾಯವಾಗಿ ಉಪನಿರ್ದೇಶಕರ ಮೂಲಕ | **ಆಗಸ್ಟ್ 19** | ಜಂಟಿ ನಿರ್ದೇಶಕರು (ಶೈಕ್ಷಣಿಕ), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು-12. |
| **04** | ಇಲಾಖೆಗೆ ವಿಶೇಷ ಕ್ರೀಡಾ ನಿಧಿ ಶುಲ್ಕವನ್ನುಪಾವತಿಸಲು | **ಆಗಸ್ಟ್ 16** | ಸಹಾಯಕ ನಿರ್ದೇಶಕರು, (ಕ್ರೀಡೆ), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ),ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12<br>ಪ್ರತಿ ಸಾಲಿನ ಅಕ್ಟೋಬರ್ ತಿಂಗಳಿನ ಒಳಗೆ **NEFT/RTGS** ಮೂಲಕ ಸಲ್ಲಿಸುವುದು. |

- ಭಾಷಾ ವಿನಾಯಿತಿ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಪ್ರಥಮ/ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಯಾವ ಭಾಷಾ ವಿಷಯದಲ್ಲಿ ವಿನಾಯಿತಿ ಪಡೆಯ ಬಯಸುತ್ತಿದ್ದಾರೆ ಎಂಬ ಮಾಹಿತಿಯನ್ನು ನಮೂದಿಸಿ ಪ್ರಾಚಾರ್ಯರ ಶಿಫಾರಸ್ಸಿನೊಂದಿಗೆ ನಿಗದಿತ ದಿನಾಂಕದೊಳಗೆ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು. ಜಿಲ್ಲಾ ಉಪನಿರ್ದೇಶಕರು, ತಮ್ಮ ಹಂತದಲ್ಲಿ ಹಿರಿಯ ಪ್ರಾಂಶುಪಾಲರನ್ನೊಳಗೊಂಡ ತ್ರಿಸದಸ್ಯಸಮಿತಿಯಲ್ಲಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸದಸ್ಯರ ದೃಢೀಕರಣದೊಂದಿಗೆ ನಿಗದಿತ ನಮೂನೆಯನ್ನು ಭರ್ತಿಮಾಡಿ ಕೇಂದ್ರ ಕಛೇರಿಗೆ ಸಲ್ಲಿಸುವುದು. ನಿಗದಿತ ದಿನಾಂಕದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

- ಸರ್ಕಾರದಿಂದ ಕಾಲೇಜಿಗೆ ಬಿಡುಗಡೆ ಮಾಡಲಾಗುವ ಹೆಣ್ಣು ಮಕ್ಕಳ ಸರ್ಕಾರೇತರ ಶುಲ್ಕ ಮರುಪಾವತಿ ಹಣದಲ್ಲಿ ವಿಶೇಷ ಕ್ರೀಡಾ ನಿಧಿ ಶುಲ್ಕದ ಹಣವನ್ನು ಲೆಕ್ಕಹಾಕಿ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ಬೆಂಗಳೂರು , ಇವರಿಗೆ ಕೂಡಲೇ ಸಲ್ಲಿಸುವುದು. ಅಲ್ಲದೇ ಸಮಾಜಕ ಲ್ಯಾಣ ಇಲಾಖೆಯಿಂದ ಕಾಲೇಜಿಗೆ ವಿಶೇಷ ಕ್ರೀಡಾ ನಿಧಿ ಶುಲ್ಕ ಬಂದಿದ್ದಲ್ಲಿ ಅದನ್ನೂ ಸಹ NEFT/RTGS ಮೂಲಕ ಕೂಡಲೇ ಸಲ್ಲಿಸಲು ಕ್ರಮವಹಿಸುವುದು.

- ಮೇಲಿನ ಟೇಬಲ್ಲಿನ ಕಾಲಂ03ರಲ್ಲಿ ಸೂಚಿಸಿರುವ ದಿನಾಂಕಗಳನ್ನು ಚಾಚು ತಪ್ಪದೆ ಪಾಲಿಸಲು ಸೂಚಿಸಿದೆ. ತಪ್ಪಿದಲ್ಲಿ, ಮುಂದೆ ಉದ್ಭವಿಸುವ ಆಡಳಿತಾತ್ಮಕ ಸಮಸ್ಯೆಗಳಿಗೆ ಸಂಬಂಧಪಟ್ಟ ಪ್ರಾಂಶುಪಾಲರು ಹಾಗೂ ಜಿಲ್ಲಾ ಉಪನಿರ್ದೇಶಕರು ಹೊಣೆಗಾರರು.

7. **ಖಾಸಗಿ ಅಧ್ಯಯನ: (Private Study):**

- ಸರ್ಕಾರದ ಪತ್ರ ಸಂಖ್ಯೆ: ಇಪಿ 54 ಎಸ್‌ಹೆಚ್‌ಹೆಚ್ 2024, ಬೆಂಗಳೂರು, ದಿನಾಂಕ:18-02-2024 ರಂತೆ ಪ್ರಥಮ/ದ್ವಿತೀಯ ಪಿಯುಸಿಯಲ್ಲಿ ವಾಣಿಜ್ಯ/ಕಲಾ/ವಿಜ್ಞಾನ ವಿಭಾಗದ (ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯ) ಯಾವುದೇ ಸಂಯೋಜನೆಯನ್ನು ತೆಗೆದುಕೊಂಡು ಅಧ್ಯಯನ ಮಾಡಿದ ವಿದ್ಯಾರ್ಥಿಯು ಪ್ರಥಮ/ದ್ವಿತೀಯ ಪಿಯುಸಿಯಲ್ಲಿ ಒಂದು ವೇಳೆ ಕಾಲೇಜು ಬದಲಾವಣೆ ಮಾಡಿಕೊಂಡ ಸಂದರ್ಭದಲ್ಲಿ ಮಾತ್ರ ಮತ್ತು ಇತರೆ ರಾಜ್ಯಗಳ ಅಥವಾಸಿ.ಬಿ.ಎಸ್.ಇ/ಐ.ಸಿ.ಎಸ್.ಇ ಬೋರ್ಡ್‌ಗಳಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡಿ ರಾಜ್ಯ ಪಠ್ಯಕ್ರಮದಲ್ಲಿ ದ್ವಿತೀಯಪಿಯುಸಿ ವ್ಯಾಸಂಗ ಮಾಡಲು ಬಯಸಿ ಬರುವ ವಿದ್ಯಾರ್ಥಿಗಳಿಗೆ ತಾನು ಅಧ್ಯಯನ ಮಾಡಿದ ಒಂದು ವಿಷಯ ಮತ್ತು ಒಂದು ಭಾಷೆಗೆ ಪ್ರವೇಶ ಬಯಸಿದ ಕಾಲೇಜಿನಲ್ಲಿ ಬೋಧಿಸದಿದ್ದಲ್ಲಿ/ಲಭ್ಯವಿಲ್ಲದಿದ್ದಲ್ಲಿ ಆ ವಿಷಯ / ಭಾಷೆಯನ್ನು ಖಾಸಗಿಯಾಗಿ ಅಧ್ಯಯನ ಮಾಡಲು ಇಲಾಖೆಯಿಂದ ಅನುಮತಿ ಪಡೆದ ಸಂಯೋಜನೆಯಲ್ಲಿ ಮಾತ್ರ ಅವಕಾಶವಿದೆ. ಪ್ರಾಯೋಗಿಕ ವಿಷಯಗಳಿಗೆ ಖಾಸಗಿ ಅಧ್ಯಯನ ಮಾಡಲು ಅವಕಾಶವಿರುವುದಿಲ್ಲ.

- ಸ್ವಯಂ ಅಭ್ಯಾಸಕ್ಕೆ ಅನುಮತಿ ಕೋರಿ ನಿಗದಿತ ನಮೂನೆಯಲ್ಲಿ ಅರ್ಜಿಸಲ್ಲಿಸಿದ ಪ್ರಥಮ ಮತ್ತು ದ್ವಿತೀಯ ಪಿಯುಸಿ ಅಭ್ಯರ್ಥಿಗಳ ಪ್ರಸ್ತಾವನೆಗಳನ್ನು ಪ್ರಾಂಶುಪಾಲರು ಅಗತ್ಯ ದಾಖಲೆಗಳೊಂದಿಗೆ ದೃಢೀಕರಿಸಿ ಉಪನಿರ್ದೇಶಕರಿಗೆ ಸಲ್ಲಿಸುವುದು, ಉಪ ನಿರ್ದೇಶಕರು ತಮ್ಮ ಜಿಲ್ಲೆಯ ಎಲ್ಲಾ ಖಾಸಗಿ ಅಭ್ಯಾಸಕ್ಕೆ ಸಲ್ಲಿತವಾದ ಅರ್ಜಿಗಳನ್ನು ಮೂರು ಜನ ಹಿರಿಯ ಪ್ರಾಂಶುಪಾಲರ ಸಮಿತಿಯಿಂದ ಸಹಿ ಮಾಡಿದ ನಂತರ ಪರಿಶೀಲಿಸಿ ಕ್ರೋಢೀಕರಿಸಿ, ದೃಢೀಕರಿಸಿ ಇಲಾಖೆಯಿಂದ ನೀಡಲ್ಪಟ್ಟ ನಮೂನೆಯಲ್ಲಿ ವಿದ್ಯಾರ್ಥಿಗಳ ಪಟ್ಟಿ ಮತ್ತು ಪ್ರಸ್ತಾವನೆಯೊಂದಿಗೆ(**Private Study**)ಕೇಂದ್ರ ಕಛೇರಿಗೆ ಅನುಮತಿಗಾಗಿ ಸಲ್ಲಿಸುವುದು.

- ಖಾಸಗಿ ಅಭ್ಯಾಸಕ್ಕೆ ಇಲಾಖೆಯಿಂದ ಅನುಮತಿಪಡೆದ ವಿದ್ಯಾರ್ಥಿಗಳ ವಿವರಗಳನ್ನು ಕೇಂದ್ರ ಕಛೇರಿಯಿಂದ ಎಸ್‌ಎಟಿಎಸ್ ಪೋರ್ಟಲ್‌ನಲ್ಲಿ ನೇರವಾಗಿ ಇಂಧೀಕರಿಸಲಾಗುವುದು.

- ಕಾಲೇಜು ಬದಲಾವಣೆಯನ್ನು ಹೊರತುಪಡಿಸಿ ಖಾಸಗಿ ಅಭ್ಯಾಸದೊಂದಿಗೆ ನೇರದಾಖಲಾತಿಯನ್ನು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಒಂದು ವೇಳೆ ದಾಖಲಾತಿ ಮಾಡಿಕೊಂಡಲ್ಲಿ ಅಂತಹ ಕಾಲೇಜಿನ ಆಡಳಿತಮಂಡಳಿ/ ಪ್ರಾಂಶುಪಾಲರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

- ಪ್ರಥಮ/ದ್ವಿತೀಯ ಪಿಯುಸಿಗೆ ಕಾಲೇಜು ಬದಲಾವಣೆ ಸಂದರ್ಭ ಹೊರತುಪಡಿಸಿ ನೇರವಾಗಿ ದಾಖಲಾಗುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಖಾಸಗಿ ಅಭ್ಯಾಸ ಮಾಡಲು ಅವಕಾಶವಿರುವುದಿಲ್ಲ. ಒಂದು ವೇಳೆ ನೇರ ದಾಖಲಾತಿ ಸಂದರ್ಭದಲ್ಲಿ ಖಾಸಗಿ ಅಭ್ಯಾಸ ಮಾಡಲು ಅವಕಾಶ ನೀಡಿದಲ್ಲಿ ಅಂತಹ ಕಾಲೇಜಿನ ಆಡಳಿತ ಮಂಡಳಿ/ ಪ್ರಾಂಶುಪಾಲರನ್ನೇ ನೇರಹೊಣೆಗಾರರನ್ನಾಗಿ ಮಾಡಲಾಗುವುದು ಮತ್ತು ಅಂತಹ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.

# ಅಧ್ಯಾಯ-08

## ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳ ಕುರಿತು.

ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಪಿ 40 ಟಿಪಿಯು 2022 ಬೆಂಗಳೂರು, ದಿನಾಂಕ:24-06-2022 ರಂತೆ ನೀಡಲಾಗುತ್ತಿದೆ.

ಕಾಲೇಜಿನವರು ಭಾಷಾ ವಿನಾಯತಿ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವ ಕೊನೆಯ ದಿನಾಂಕ:
ಪ್ರತೀ ಶೈಕ್ಷಣಿಕ ಸಾಲಿನ ಆಗಸ್ಟ್ ಮೂರನೇ ವಾರ

ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷ ಅಗತ್ಯತೆಯುಳ್ಳ (CWSN)ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ 2022-23ನೇ ಸಾಲಿನಿಂದ ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡುವ CWSN ವಿದ್ಯಾರ್ಥಿಗಳಿಗೆ ಸಿಬಿಎಸ್‌ಇ ಮಾದರಿಯಲ್ಲಿ ಭಾಷಾ ವಿನಾಯಿತಿ ಮತ್ತು ಇತರೆ ಸೌಲಭ್ಯಗಳನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ:

| **ಕ್ರಮ ಸಂಖ್ಯೆ** | **ವಿಷಯ** | **ವಿಶೇಷಸೌಲಭ್ಯಗಳು / ವಿನಾಯಿತಿಗಳು** |
|---|---|---|
| 01 | Issuing Authority of medical certificate<br>ವೈದ್ಯಕೀಯಪ್ರಮಾಣ<br>ಪತ್ರವನ್ನುನೀಡುವ<br>ಪ್ರಾಧಿಕಾರ | ಈ ಕೆಳಕಂಡ ಸಂಸ್ಥೆಗಳು ನೀಡುವ ವೈದ್ಯಕೀಯ ಪ್ರಮಾಣ ಪತ್ರಗಳನ್ನು ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲು ಪರಿಗಣಿಸುವುದು.<br>1. ರಾಜ್ಯ ಸರ್ಕಾರ ಅಥವ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಆಸ್ಪತ್ರೆಗಳ<br>ಮುಖ್ಯ ವೈದ್ಯಾಧಿಕಾರಿಗಳು / ಸಿವಿಲ್ ಸರ್ಜನ್ ವೈದ್ಯಕೀಯ ಅಧೀಕ್ಷಕರು<br>ಇವರಿಂದ ದೃಢೀಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರ.<br>2. ರಾಷ್ಟ್ರ ಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಾದ ರಾಷ್ಟ್ರೀಯ ಅಖಿಲ ಭಾರತ ಅಂಧರ ಸಂಘ, ಸ್ಪಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಇತ್ಯಾದಿ.<br>ರೀಹಾ ಬಿಲೇಷನ್ ಕೌನ್ಸಿಲ್ ಆಫ್ ಇಂಡಿಯಾ / ಕೇಂದ್ರ ಸರ್ಕಾರ / ಆಯಾ ರಾಜ್ಯ<br>ಸರ್ಕಾರದಲ್ಲಿ ನೊಂದಾಯಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು ನೀಡುವ ಪ್ರಮಾಣ ಪತ್ರ |
| 02 | Facility of Acribe compensatory<br>ಬರಹಗಾರರ ಸೌಲಭ್ಯ<br>ಮತ್ತು ಹೆಚ್ಚುವರಿ<br>ಸಮಯ | ವಿಶೇಷ ಚೇತನರ ಹಕ್ಕುಗಳ ಅಧಿನಿಯಮ 2016 ರನ್ವಯವಿ ವಿಧ ಪ್ರಕಾರದ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯ ಅಥವಾ ಹೆಚ್ಚುವರಿ ಸಮಯ ಎರಡನ್ನು ಪಡೆಯುವ ಅವಕಾಶವಿದೆ.<br>• ಮೂರು ಗಂಟೆ ಅವಧಿಯಲ್ಲಿ ಉತ್ತರಿಸಬೇಕಾದ ವಿಷಯಗಳಿಗೆ ಒಂದು ಗಂಟೆ ಹೆಚ್ಚಿನ ಕಾಲಾವಕಾಶ ನೀಡುವುದು.<br>• ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ಅಂಧ ಹಾಗೂ ವಿಕಲ ಚೇತನ ವಿದ್ಯಾರ್ಥಿಗಳಿಗೆ ಸಹಾಯಕ ಬರಹಗಾರರಿಗೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬದಲಿ ಸಹಾಯಕರನ್ನು ನೇಮಿಸಬಹುದಾಗಿದೆ. ಆದರೆ ಇಬ್ಬರಿಗಿಂತ ಹೆಚ್ಚಿನ ಸಹಾಯಕರನ್ನು ನೇಮಿಸಿಕೊಳ್ಳುವಂತಿಲ್ಲ. ಸದರಿ ವಿದ್ಯಾರ್ಥಿಗಳ ಮಾಹಿತಿಯನ್ನು ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಯು ಪ್ರಾಂಶುಪಾಲರಿಗೆ ಮುಂಚಿತವಾಗಿ ನೀಡಿಅನುಮತಿ ಪಡೆಯತಕ್ಕದ್ದು.<br>• ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳುವ ಅಂಧ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುವವರನ್ನೇ ಸಹಾಯಕರನ್ನಾಗಿ ನೇಮಕ ಮಾಡಿಕೊಳ್ಳಬಹುದಾಗಿದೆ. ಇಂತಹ ನೇಮಕಗೊಂಡ ಸಹಾಯಕ ಬರಹಗಾರರಿಗೆ ಪ್ರಾಂಶುಪಾಲರು ಕಾಲೇಜಿನಲ್ಲಿ ಲಭ್ಯವಿರುವ ಸಂಚಿತ ನಿಧಿಯಿಂದ ಪ್ರತಿ ಒಂದು ವಿಷಯಕ್ಕೆ ರೂ.100/-ರಂತೆ ಸಹಾಯಕರಿಗೆ ಸಂಭಾವನೆಯಾಗಿ ನೀಡತಕ್ಕದ್ದು. |

| | | |
|---|---|---|
| | | • ವಿದ್ಯಾರ್ಥಿಯು ತಮ್ಮ ಸ್ವಂತ ಇಚ್ಛೆಯಂತೆ ಸಹಾಯಕರನ್ನು/ ಬರಹಗಾರರನ್ನು ನೇಮಿಸಿಕೊಂಡಲ್ಲಿ ಅಂತಹ ಸಂದರ್ಭದಲ್ಲಿ ಪೋಷಕರು ಸ್ವಂತ ವೆಚ್ಚದಲ್ಲಿ ನಿಯಮಾನುಸಾರ ಸಹಾಯಕರನ್ನು ನೇಮಿಸಿಕೊಳ್ಳಬಹುದಾಗಿದೆ ಹಾಗೂ ಪರೀಕ್ಷೆಗೆ ಮೊದಲೇ ಪ್ರಾಂಶುಪಾಲರಿಗೆ ಅವರ ಸಂಪೂರ್ಣ ಮಾಹಿತಿಯನ್ನು ತಿಳಿಸುವುದು.<br><br>ವಿಕಲಚೇತನ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯವನ್ನು ಪ್ರಾಂಶುಪಾಲರಾಗಲಿ ಅಥವಾ ಪರೀಕ್ಷಾರ್ಥಿಯು ತಾನೇ ನೇಮಿಸಿಕೊಂಡಲ್ಲಿ ಬರಹಗಾರರ ವಿದ್ಯಾರ್ಹತೆಯು ಪರೀಕ್ಷಾರ್ಥಿಯ ವಿದ್ಯಾರ್ಹತೆಗಿಂತ ಒಂದು ಹಂತ ಕಡಿಮೆಯಿರತಕ್ಕದ್ದು |
| **03** | All kinds of Disability<br><br>ಎಲ್ಲಾ ರೀತಿಯ ನ್ಯೂನತೆ. | • ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲ ಮಹಡಿಯಲ್ಲಿ ಸೂಕ್ತ ಆಸನ ವ್ಯವಸ್ಥೆ ಮಾಡುವುದು.<br>• ಉತ್ತರ ಪತ್ರಿಕೆಯ ಮುಖಪುಟದಲ್ಲಿ ಹಸಿರು ಸ್ಟಿಕ್ಕರ್ ಅಂಟಿಸುವುದು<br>• ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಬರಹಗಾರರ ಸೌಲಭ್ಯ ಪಡೆಯದೇ ಕೇವಲ ಓದುಗಾರರ ಸೌಲಭ್ಯವನ್ನು ಇಚ್ಛಿಸಿದ್ದಲ್ಲಿ ಪಡೆಯಬಹುದಾಗಿದೆ |
| **04** | Exemption from language<br><br>ಭಾಷಾವಿನಾಯಿತಿ ನೀಡಬೇಕಾಗಿರುವ ನ್ಯೂನ್ಯತೆಗಳು | ಕುಷ್ಠರೋಗ ವಾಸಿಯಾದ ವ್ಯಕ್ತಿಗಳು, ಸೆರೆಬ್ರಲ್ ಪಾಲ್ಸಿ ಕುಬ್ಜತೆ, ಆಸಿಡ್ ದಾಳಿ ಸಂತ್ರಸ್ತರು, ಮಾತು ಮತ್ತು ಭಾಷಾ ಅಸಾಮರ್ಥ್ಯತೆ, ಕಲಿಕಾನ್ಯೂನ್ಯತೆ(–ಡಿಸ್ಲೆಕ್ಸಿಯಾ,- ಡಿಸ್ಗ್ರಾಫಿಯಾ, - ಡಿಸ್ಕಾಲ್ಕುಲಿಯಾ, - ಡಿಸ್ಪ್ರೇಸಿಯಾ,- ಡೆವಲಪ್-ಮೆಂಟಲ್ ಅಫೇಸಿಯಾ),ಆಟಿಸಂಸ್ಪೆಕ್ಟ್ರಮ್ ಡಿಸಾರ್ಡರ್,ಕ್ರೊನಿಕಲ್ ನ್ಯೂರೋಲಾಜಿಕಲ್ ಕಂಡಿಷನ್- i)ಮಲ್ಟಿಪಲ್‌ಸ್ಕ್ಲೆರೋಸಿಸ್, ii)ಪಾರ್ಕಿನ್ಸನ್ಕಾಯಿಲೆ),<br><br>Blood Disorders - i)ಹಿಮೋಫಿಲಿಯಾ, ii)ಥಲಸ್ಸೆಮಿಯಾ, iii) Sickle Cell<br><br>Disease ,ಬಹುಅಂಗವೈಕಲ್ಯತೆ, ಅಂಗವೈಕಲ್ಯ(Locomotor Disability),<br><br>ಸ್ಪಾಸ್ಟಿಕ್, ಕಿವುಡುತನ, ಮೂಕತನ, ಮಸ್ಕ್ಯೂಲರ್‌ಡಿಸ್ಟ್ರೋಫಿ,<br><br>ಕಲಿಕಾನ್ಯೂನ್ಯತೆ, ಅಂಧವಿದ್ಯಾರ್ಥಿಗಳು / ದೃಷ್ಠಿ ಮಾಂದ್ಯ ವಿದ್ಯಾರ್ಥಿಗಳು /<br><br>ಕ್ಷೀಣ ದೃಷ್ಠಿ ಹಾಗೂ ಬುದ್ಧಿ ಮಾಂದ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ಮಾಧ್ಯಮದ<br><br>ಭಾಷೆಯನ್ನು ಹೊರತುಪಡಿಸಿ ಉಳಿದ ಒಂದು ಭಾಷೆಗೆ ವಿನಾಯಿತಿ ಹಾಗೂ ಒಂದು<br><br>ಗಂಟೆಗಳ ಹೆಚ್ಚುವರಿ ಸಮಯಾವಕಾಶ ನೀಡುವಸೌಲಭ್ಯ |
| **05** | Facilities to diabetic students.<br><br>ಮಧುಮೇಹ ವಿದ್ಯಾರ್ಥಿಗಳ | ಪರೀಕ್ಷೆಯ ನಡುವೆ ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳಿಗೆ ಅವಶ್ಯವಿದ್ದಲ್ಲಿ ಮಧುಮೇಹಕ್ಕೆ ಸಂಬಂಧಿಸಿದ ಪದಾರ್ಥಗಳನ್ನು ತಿನ್ನಲು ನೀಡುವುದು.(ವಿದ್ಯಾರ್ಥಿಗಳು ಪರೀಕ್ಷೆಯ ಮೊದಲೇ ಪದಾರ್ಥಗಳನ್ನು ಮೇಲ್ವಿಚಾರಕರಿಗೆ ಒಪ್ಪಿಸುವುದು. |
| **06** | Waiving of Registration (ಶುಲ್ಕವಿನಾಯಿತಿ) | ವಿಭಿನ್ನ ಸಾಮರ್ಥ್ಯವುಳ್ಳ ಮಕ್ಕಳಿಗೆ ನೋಂದಣಿ ಶುಲ್ಕ, ಮುಖ್ಯ ಪರೀಕ್ಷೆ ಹಾಗೂ ಪೂರಕ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡುವುದು |
| **07** | ಪರೀಕ್ಷೆಯ ಸಮಯ ಸಹಾಯಕ ಸಾಧನಗ ಅನುಮತಿಸುವುದು (ವೈದ್ಯರಸಲಹೆಯೊಂದಿಗ | ಪರೀಕ್ಷೆಯಲ್ಲಿ ಸರಳ ಕಲನಯಂತ್ರ, ಉಪಯೋಗಿಸಲು ಅನುಮತಿ ನೀಡುವುದು. ಭೂತಗನ್ನಡಿಯ/ ಪೋರ್ಟಬಲ್ ವಿಡಿಯೋ ವರ್ಧಕಗಳನ್ನು ಬಳಸಲು ಅನುಮತಿಸುವುದು |
| **08** | ದೃಷ್ಠಿಮಾಂದ್ಯ/ಅಂಧ ವಿದ್ಯಾರ್ಥಿಗಳಿಗೆಪ್ರಾಯೋ ವಿಷಯಕ್ಕೆ ಬದಲಾಗಿ<br><br>ತಾತ್ವಿಕಪತ್ರಿಕೆಯನ್ನು ಒದಗಿಸುವುದು | ದೃಷ್ಠಿದೋಷ, ದೃಷ್ಠಿ ಮಾಂದ್ಯ ಹಾಗೂ ಕ್ಷೀಣದೃಷ್ಠಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಕ್ಕೆ ಬದಲಾಗಿ ಪ್ರಾಯೋಗಿಕ ವಿಷಯದ ಅಂಕಕ್ಕೆ ಸಮನಾದ ತಾತ್ವಿಕ ಪತ್ರಿಕೆಯನ್ನು ಒದಗಿಸುವುದು |

| | | |
|---|---|---|
| 09 | ಹಾಜರಾತಿವಿನಾಯಿತಿ (ಕೋರಿಕೆ ಮೇರೆಗೆ) | ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಕನಿಷ್ಠ ಹಾಜರಾತಿಯಿಂದ ವಿನಾಯಿತಿ (ಶೇ.50 ರವರೆಗೆ) ನೀಡುವುದು. |
| 10 | ವಿಶೇಷ ಸೂಚನೆಗಳು | • ವಿಕಲಚೇತನ ಮಕ್ಕಳಿಗೆ ಬರಹಗಾರರ/ಓದುಗಾರರ/ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಪಡೆಯಲು ಪ್ರಾಂಶುಪಾಲರು ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರ ಮತ್ತು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಮನವಿ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು.<br>• ಬರಹಗಾರರ/ಓದುಗಾರರ/ ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಹೊರತುಪಡಿಸಿ ಉಳಿದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಪ್ರಾಂಶುಪಾಲರು ಅಗತ್ಯ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯುವುದು |

**ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಓದುತ್ತಿರುವ ಹಾಗೂ ಕಲಿಕೆಯಲ್ಲಿ ನ್ಯೂನ್ಯತೆಯಿರುವ ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯ ನೀಡಲು ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವುದು:**

**1.ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ಈ ಕೆಳಕಂಡ ಸಂಸ್ಥೆಗಳು ನೀಡುವ ಪ್ರಮಾಣ ಪತ್ರವನ್ನು ಪರಿಗಣಿಸುವುದು.**

1. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಆಸ್ಪತ್ರೆಗಳ ಮುಖ್ಯ ವೈದ್ಯಾಧಿಕಾರಿಗಳು /ಸಿವಿಲ್ಸರ್ಜನ್/ವೈದ್ಯಕೀಯ ಅಧೀಕ್ಷಕರು ಇವರಿಂದ ದೃಢಿಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರ.
2. ರಾಷ್ಟ್ರ ಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಾದ ರಾಷ್ಟ್ರೀಯ ಅಖಿಲ ಭಾರತ ಅಂಧರ ಸಂಘ, ಸ್ಪಾಸ್ಟಕ್ ಸೊಸೈಟಿ ಆಫ್ ಇಂಡಿಯಾ ಇತ್ಯಾದಿ.
3. ರೀಹಾ ಬಿಲೇಷನ್ ಕೌನ್ಸಿಲ್ ಆಫ್ ಇಂಡಿಯಾ / ಕೇಂದ್ರ ಸರ್ಕಾರ / ಆಯಾ ರಾಜ್ಯ ಸರ್ಕಾರದಲ್ಲಿ ನೊಂದಾಯಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು ನೀಡುವ ಪ್ರಮಾಣ ಪತ್ರ.

**2.ಭಾಷಾ ವಿನಾಯಿತಿಯನ್ನು ಪಡೆಯಲು ಇಚ್ಚಿಸುವ ವಿದ್ಯಾರ್ಥಿಗಳಿಂದ ಪಡೆಯ ಬೇಕಾದ ದಾಖಲೆಗಳು.**

- ಪದವಿ ಪೂರ್ವ ಶಿಕ್ಷಣ ಇಲಾಖೆ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸುವುದು.
- ಸದರಿ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯ ಅಂಕಪಟ್ಟಿಯ ನೆರಳಚ್ಚು ಪ್ರತಿಯನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರು ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು.
- ವೈದ್ಯಕೀಯ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಸಲ್ಲಿಸಬೇಕು.
- UDID ಕಾರ್ಡ್ ನ ಪ್ರತಿ.

ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಭಾಗ-1 ರಲ್ಲಿ ಒಂದು ಭಾಷಾ ವಿಷಯದ ಕಲಿಕೆಯಿಂದ ವಿನಾಯತಿ ನೀಡಲಾಗುವುದರಿಂದ ಭಾಷಾ ವಿಷಯದಲ್ಲಿ ಒಂದು ವಿಷಯಕ್ಕೆ ಮಾತ್ರ ವಿದ್ಯಾರ್ಥಿಗಳು ಪರೀಕ್ಷೆ ತೆಗದುಕೊಳ್ಳಬೇಕು. ಈ ವಿದ್ಯಾರ್ಥಿಗಳಿಂದ ನಿಗದಿತನ ಮೂನೆಯಲ್ಲಿ ಕೋರಿಕೆ ಬಂದಲ್ಲಿ ಪ್ರಾಂಶುಪಾಲರು ವೈದ್ಯಕೀಯ ಮತ್ತು ಇತರೆ ದಾಖಲೆಗಳೊಂದಿಗೆ ಅರ್ಜಿಗಳನ್ನು ಪರಿಶೀಲಿಸಿ, ಕ್ರೋಢೀಕರಿಸಿ, ದೃಢೀಕರಿಸಿ ಜಿಲ್ಲಾ ಉಪನಿರ್ದೇಶಕರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು, ಪೂರಕ ದಾಖಲೆಗಳನ್ನು ಪರಿಶೀಲಿಸಿ, ದಾಖಲೆಗಳು ಸಮರ್ಪಕವಾಗಿದ್ದಲ್ಲಿ ಜಿಲ್ಲಾ ಉಪನಿರ್ದೇಶಕರು ಕೇಂದ್ರ ಕಛೇರಿಗೆ ಸಲ್ಲಿಸಿ ಅನುಮತಿ ಪಡೆಯುವುದು. **ಅಪೂರ್ಣ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ ಜಿಲ್ಲಾ ಉಪನಿರ್ದೇಶಕರ ವಿರುದ್ಧ ಗಂಭೀರ ಕ್ರಮಕೈಗೊಳ್ಳಲಾಗುವುದು.**

1. **ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯ ಪಡೆದುಕೊಳ್ಳಲು ಅನುಮತಿ ನೀಡುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ: ಇಪಿ 40 ಟಿಪಿಯು 2022 ಬೆಂಗಳೂರು, ದಿನಾಂಕ:24.06-2022. ರಂತೆ ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳು ಬರಹಗಾರರ ಸೌಲಭ್ಯವನ್ನು ಪಡೆಯಲು ಈ ಕೆಳಗಿನ ಷರತ್ತುಗಳೊಂದಿಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

- ಸರ್ಕಾರದ ಆದೇಶದಲ್ಲಿ ಸೂಚಿಸಿರುವ ನ್ಯೂನತೆಗಳನ್ನು ಹೊಂದಿರುವ ವಿದ್ಯಾರ್ಥಿಗಳು ಬರಹಗಾರರ ಸಹಾಯಕ್ಕಾಗಿ ಒಂದು ತಿಂಗಳ ಮುಂಚಿತವಾಗಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಪ್ರಾಂಶುಪಾಲರಿಗೆ ನಿಯಮಾನುಸಾರ ಅರ್ಜಿ ಸಲ್ಲಿಸಿ ಅನುಮತಿಯನ್ನು ಪಡೆದುಕೊಂಡಿರ ತಕ್ಕದ್ದು ಮತ್ತು ಈ ಕೋರಿಕೆಯ ಜೊತೆಗೆ ವಿಕಲಚೇತನತೆಯ ಬಗ್ಗೆ (ಜಿಲ್ಲಾ ಸರ್ಜನ್ ಅಥವಾ ಅದಕ್ಕೂ ಹೆಚ್ಚಿನ ಸ್ಥಾನಮಾನವುಳ್ಳ ವೈದ್ಯಾಧಿಕಾರಿಗಳಿಂದ ಪಡೆದ) 'ವೈದ್ಯಕೀಯ ಪ್ರಮಾಣ ಪತ್ರ'ವನ್ನುಲಗತ್ತಿಸತಕ್ಕದ್ದು.
- ಬರಹಗಾರರ ಸಹಾಯವನ್ನು ಪಡೆದುಕೊಳ್ಳಲು ಇಚ್ಛಿಸುವವಿದ್ಯಾರ್ಥಿಗಳು ಪರೀಕ್ಷಾ ವೇಳೆಗಿಂತ ಒಂದು ಗಂಟೆ ಮುಂಚಿತವಾಗಿ ಬರಹಗಾರರ ವಿವರಗಳನ್ನು ಕಾಲೇಜಿನ ಪ್ರಾಂಶುಪಾಲರಿಗೆ ಅಥವಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ತಿಳಿಸಿ ಪೂರ್ವಾನುಮತಿ ಪಡೆಯುವುದು.
- ಬರಹಗಾರರ ವಿದ್ಯಾರ್ಹತೆಯು ಶಾಶ್ವತ ವಿಶೇಷಚೇತನ/ಸಂಪೂರ್ಣ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗಿಂತ ಕಡಿಮೆ ವಿದ್ಯಾರ್ಹತೆ ಇರಬೇಕೆಂಬುದೇನು ಕಡ್ಡಾಯ ಇಲ್ಲ. ಬರಹಗಾರರ ವಿದ್ಯಾರ್ಹತೆಯು ಹೆಚ್ಚಿಗೆ ಇದ್ದರೂ ಸಹ ಈ ಸೌಲಭ್ಯ ಪಡೆಯಬಹುದು. ಆದರೆ ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳು ತೆಗೆದುಕೊಳ್ಳುತ್ತಿರುವ ಪರೀಕ್ಷೆಯಲ್ಲಿನ ವಿಷಯಗಳು ಹಾಗೂ ಬರಹಗಾರರ ವಿಷಯಗಳು ಒಂದೇ ಆಗಿರಬಾರದು.

**ಉದಾಹರಣೆಗೆ: ಒಬ್ಬ ಕಲೆ ಅಥವಾ ವಾಣಿಜ್ಯ ವಿದ್ಯಾರ್ಹತೆಯನ್ನು ಹೊಂದಿರತಕ್ಕ ಬರಹಗಾರನು ವಿಜ್ಞಾನ (ಪಿಸಿಎಂಬಿ) ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿಶೇಷಚೇತನ/ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗೆ ಬರಹಗಾರನಾಗಬಹುದು.**

- ಯಾವುದಾದರೂ ಒಂದು ಅಥವಾ ಹೆಚ್ಚಿನ ನ್ಯೂನ್ಯತೆಯಿಂದ/ ತೊಂದರೆಯಿಂದ ನರಳುತ್ತಿರುವ ಅಭ್ಯರ್ಥಿಗಳಿಗೆ ಹೆಚ್ಚಿನ ಸಮಯಾವಕಾಶ ನೀಡುವುದು ಅಗತ್ಯವಾಗಿರುತ್ತದೆ. ಮೂರು ಗಂಟೆಯ ಅವಧಿಯ ಪ್ರಶ್ನೆಪತ್ರಿಕೆಗೆ ಪ್ರತಿಗಂಟೆಗೆ 20 ನಿಮಿಷಗಳಂತೆ ಒಂದು ಗಂಟೆಯ ಹೆಚ್ಚಿನ ಸಮಯಾವಕಾಶ ನೀಡುವುದು. ಈ ಸೌಲಭ್ಯವನ್ನು ಬರಹಗಾರರ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವ ವಿದ್ಯಾರ್ಥಿಗಳಿಗೂ ಕೂಡ ಒದಗಿಸುವುದು
- ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಭಾಷಾ ಸಮಸ್ಯೆ ಇರುವುದರಿಂದ ಪರೀಕ್ಷೆ ಬರೆಯುವಲ್ಲಿ ವ್ಯಾಕರಣ, ವಾಕ್ಯ ರಚನಾ ದೋಷಗಳು ಆಗುವ ಸಾಧ್ಯತೆ ಇರುವುದನ್ನು ಪರಿಗಣಿಸಿ, ಉತ್ತರ ಪತ್ರಿಕೆಯ ಮೌಲ್ಯಮಾಪಕರು ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ಗುರುತಿಸಿ ತಾಳ್ಮೆಯಿಂದ ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ವಿಶೇಷ ಚೇತನ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳಿಗೆ **ಹಸಿರುಬಣ್ಣದ** ಸ್ಟಿಕರ್‌ಅನ್ನು ಅಂಟಿಸಲು ಕ್ರಮತೆಗೆದುಕೊಳ್ಳುವುದು. (ದ್ವಿತೀಯ ಪಿಯುಸಿ ಮುಖ್ಯ ಅಧೀಕ್ಷಕರು ಹಸಿರು ಸ್ಟಿಕರ್‌ಗಳನ್ನು ಪರೀಕ್ಷಾ ಸಾದಿಲ್ವಾರು ಹಣದಿಂದ ಖರೀದಿಸಿ ಇಂತಹ ಉತ್ತರ ಪತ್ರಿಕೆಗಳಿಗೆ ಕಡ್ಡಾಯವಾಗಿ ಅಂಟಿಸಬೇಕು)

**ಬರಹಗಾರರ ನೇಮಕಾತಿಗೆ ಅನುಮತಿ ನೀಡುವಾಗ ಪ್ರಾಂಶುಪಾಲರು/ ಜಿಲ್ಲಾ ಉಪನಿರ್ದೇಶಕರು ಗಮನಿಸಬೇಕಾದ ಅಂಶಗಳು:**

- ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ "ಸಹಾಯಕ ಬರಹಗಾರರ" (Writer)ಅವಶ್ಯಕತೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ ಒಂದು ತಿಂಗಳು ಮುಂಚಿತವಾಗಿ, ಜಿಲ್ಲಾ ಸರ್ಜನ್ ಅಥವಾ ಅವರಿಗಿಂತ ಮೇಲ್ಪಟ್ಟ ವೈದ್ಯಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಪ್ರಾಂಶುಪಾಲರ ಮುಖಾಂತರ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸಬೇಕು. ಜಿಲ್ಲಾ ಉಪನಿರ್ದೇಶಕರು, ಒಂದು ವಾರದೊಳಗೆ ವಿದ್ಯಾರ್ಥಿಗೆ ಈ ಸೌಲಭ್ಯವನ್ನು ಪಡೆಯಲು ಅನುಮತಿ ನೀಡುವುದು. ವಿಕಲಚೇತನವು ಶಾಶ್ವತ ಸ್ವರೂಪದ್ದಾಗಿರಬೇಕು. **ತಾತ್ಕಾಲಿಕ ವಿಕಲಚೇತನವನ್ನು ಯಾವಕಾರಣಕ್ಕೂ ಪರಿಗಣಿಸಬಾರದು**. ಅನುಮತಿ ನೀಡುವಾಗ ಕೆಳಕಂಡ ಅಂಶಗಳನ್ನು ತಪ್ಪದೇ ಪರಿಪಾಲಿಸಬೇಕು:
- ಸಹಾಯಕ ಬರಹಗಾರರಾಗಿ ನೇಮಕವಾಗುವವರಿಗೆ ವಿದ್ಯಾರ್ಹತೆಗೆ (ಮೇಲಿನ ಕ್ರಮ ಸಂಖ್ಯೆ-4 ರಲ್ಲಿ ವಿವರಿಸಿದಂತೆ) ನಿರ್ಬಂಧವಿರುವುದಿಲ್ಲ. **ಯಾವುದೇ ಕಾರಣಕ್ಕೂ ಶಾಶ್ವತವಿಕಲ ಚೇತನ ಇಲ್ಲದೇ ಇರುವ ವಿದ್ಯಾರ್ಥಿಗಳಿಗೆ ಸಹಾಯಕ ಬರಹಗಾರರನ್ನುನೇಮಿಸಬಾರದು**.

## 2. ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಪಡೆಯಲು ಅನುಮತಿ ನೀಡುವ ಬಗ್ಗೆ

ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವಾಗ ಮೂರು ಗಂಟೆ ಅವಧಿಯ ಪರೀಕ್ಷೆಗೆ ಒಂದು ಗಂಟೆ ಹೆಚ್ಚಿಗೆ ಕಾಲಾವಕಾಶವನ್ನು ಪಡೆಯಲು ಅರ್ಹರಾಗಿರುತ್ತಾರೆ. ಇಂತಹ ವಿದ್ಯಾರ್ಥಿಗಳು ಪ್ರಾಂಶುಪಾಲರ ಮುಖಾಂತರ ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ ಒಂದು ತಿಂಗಳ ಮುಂಚೆ ಈ ಕೆಳಕಂಡ ಸಂಸ್ಥೆಯವರು ನೀಡುವ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಜಿಲ್ಲಾ ಉಪನಿರ್ದೇಶಕರಿಂದ ಅನುಮತಿಯನ್ನು ಪರೀಕ್ಷಾ ಪೂರ್ವದಲ್ಲಿ ಪಡೆದುಕೊಳ್ಳಬೇಕು:

1. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಆಸ್ಪತ್ರೆಗಳ ಮುಖ್ಯ ವೈದ್ಯಾಧಿಕಾರಿಗಳು/ಸಿವಿಲ್ಸರ್ಜನ್/ ವೈದ್ಯಕೀಯ ಅಧೀಕ್ಷಕರು ಇವರಿಂದ ದೃಢಿಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರ.
2. ರಾಷ್ಟ್ರ ಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಾದ ರಾಷ್ಟ್ರೀಯ ಅಖಿಲ ಭಾರತ ಅಂಧರ ಸಂಘ, ಸ್ಪಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಇತ್ಯಾದಿ.
3. ರೀಹಾಬಿಲೇಷನ್ ಕೌನ್ಸಿಲ್ ಆಫ್ ಇಂಡಿಯಾ/ಕೇಂದ್ರಸರ್ಕಾರ/ ಆಯಾ ರಾಜ್ಯ ಸರ್ಕಾರದಲ್ಲಿ ನೊಂದಾಯಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು ನೀಡುವ ಪ್ರಮಾಣ ಪತ್ರ.

**ಜಿಲ್ಲಾ ಉಪನಿರ್ದೇಶಕರು ಪರೀಕ್ಷೆ ಬರೆಯಲು ಒಂದು ಗಂಟೆ ಹೆಚ್ಚು ಕಾಲಾವಕಾಶ ನೀಡುವಾಗ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿ ಅನುಮತಿ ನೀಡುವುದು**:

- ಬೇಡಿಕೆ ಸಲ್ಲಿಸಿದ ವಿಶೇಷ ಚೇತನ ವಿದ್ಯಾರ್ಥಿಯ ಎರಡೂ ಕೈಗಳು ಶಾಶ್ವತ ವಿಕಲಚೇತನತೆ ಹೊಂದಿರಬೇಕು.
- ಒಂದು ಕೈಮಾತ್ರ ಊನ ಹೊಂದಿದ್ದರೆ ಆತನನ್ನು ಪರೀಕ್ಷೆಯ ಮಟ್ಟಿಗೆ ವಿಶೇಷಚೇತನ ಎಂದು ಪರಿಗಣಿಸಬಾರದು.
- ಎರಡೂ ಕೈಗಳು ಊನಗೊಂಡಿದ್ದು ವಿದ್ಯಾರ್ಥಿಯು ಬರೆಯುವ ಕೈಶಾಶ್ವತ ವಿಕೃತ ರೂಪ ಅಥವಾ ಬೆರಳುಗಳಿಲ್ಲದೆ /ಇದ್ದು ಬರೆಯಲು ಅಡಚಣೆ ಅಥವಾ ತೊಂದರೆ ಅನುಭವಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
- ಈ ಮೇಲಿನಂತೆ ಭಾಗಶಃ ವಿಕಲಚೇತನತೆ ಇದ್ದು ವಿದ್ಯಾರ್ಥಿಯು ತಾನೇ ಸ್ವತಃ ಬರೆಯುತ್ತಿದ್ದಲ್ಲಿ ಮಾತ್ರ ಮೇಲೆ ಹೇಳಿದಂತೆ ಹೆಚ್ಚಿನ ಸಮಯಾವಕಾಶ ನೀಡಬಹುದು.
- ಕಲಿಕೆಯಲ್ಲಿ ನ್ಯೂನತೆ (ಡಿಸ್‌ಲೆಕ್ಸಿಯಾ) ಸಮಸ್ಯೆ ಇರುವ ವಿದ್ಯಾರ್ಥಿಯೆಂದು ನೀಡಲಾದ ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸುವುದು.

ವಿಶೇಷ ಸೂಚನೆ:

- ಭಾಷಾ ವಿನಾಯತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಅಗತ್ಯ ದಾಖಲೆಗಳನ್ನು ಕಾಲೇಜು ಹಂತದಲ್ಲಿ ಪ್ರಾಂಶುಪಾಲರು ಪರೀಶೀಲಿಸಿ, ದೃಢೀಕರಿಸಿದ ನಂತರ ಅರ್ಹ ಪ್ರಸ್ತಾವನೆಗಳನ್ನು ಮಾತ್ರ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.
- ಜಿಲ್ಲಾ ಉಪನಿರ್ದೇಶಕರು ಆಯಾ ಜಿಲ್ಲೆಯ ಕ್ರೋಢೀಕೃತ ಭಾಷಾ ವಿನಾಯಿತಿ ಪ್ರಸ್ತಾವನೆಗಳನ್ನು ಪರಿಶೀಲಿಸಲು ಹಿರಿಯ ಪ್ರಾಂಶುಪಾಲರು/ ಉಪನ್ಯಾಸಕರನ್ನೊಳಗೊಂಡ ತ್ರಿ-ಸದಸ್ಯರ ಸಮಿತಿಯನ್ನು ರಚಿಸಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸದಸ್ಯರಿಂದ ದೃಢೀಕರಿಸಿ ಅರ್ಹ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು.
- ಭಾಷಾ ವಿನಾಯಿತಿ ಸಂಬಂಧವಾಗಿ ಯಾವುದೇ ಪೋಷಕರು / ಕಾಲೇಜು ಪ್ರತಿ ನಿಧಿಗಳನ್ನುಕೇಂದ್ರ ಕಛೇರಿಗೆ ಯಾವುದೇ ಕಾರಣಕ್ಕೂ ಕಳುಹಿಸಬಾರದು.
- ವಿದ್ಯಾರ್ಥಿಯು ಪ್ರಥಮ ಪಿಯುಸಿಯಲ್ಲಿ ಭಾಷಾ ವಿನಾಯಿತಿ ಪಡೆದಿದ್ದಲ್ಲಿ ದ್ವಿತೀಯಪಿ ಯುಸಿಗೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸುವ ಅಗತ್ಯ ಇರುವುದಿಲ್ಲ.
- ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡ ಭಾಷಾ ವಿನಾಯಿತಿ ಪ್ರಸ್ತಾವನೆಗಳ ಪಟ್ಟಿಯನ್ನು ಕೇಂದ್ರ ಕಛೇರಿಯ ಇ-ಆಡಳಿತ ಶಾಖೆಯಿಂದ ಎಸ್.ಎ.ಟಿ.ಎಸ್ ಪೋರ್ಟಲ್‌ನಲ್ಲಿ ಇಂಧೀಕರಿಸಲಾಗುವುದು.

ಕಲಿಕಾ ನ್ಯೂನತೆ/ ಬುದ್ಧಿಮಾಂದ್ಯವಿಲ್ಲದೆ ಇರುವ ವಿದ್ಯಾರ್ಥಿಗಳು ಭಾಷಾ ವಿನಾಯಿತಿ ಸೌಲಭ್ಯವನ್ನು ದುರುಪಯೋಗಮಾಡಿ ಕೊಂಡಿರುವ ಬಗ್ಗೆ ಆನೇಕ ದೂರುಗಳು ಇಲಾಖೆಯ ಗಮನಕ್ಕೆ ಬಂದಿರುತ್ತವೆ. ಅಂತಹ ವಿದ್ಯಾರ್ಥಿಗಳ ವೈದ್ಯಕೀಯ ಪ್ರಮಾಣ ಪತ್ರವನ್ನು ಮೆಡಿಕಲ್ ಬೋರ್ಡ್ ಗೆ ಪರಿಶೀಲನೆಗಾಗಿ ಕಳುಹಿಸಲಾಗುವುದು. ಮೆಡಿಕಲ್ ಬೋರ್ಡ್ ನಿಂದ ಭಾಷಾ ವಿನಾಯಿತಿ ಸೌಲಭ್ಯವನ್ನು ದುರುಪಯೋಗ ಪಡಿಸಿಕೊಂಡಿರುವುದು ಸಾಬೀತಾದಲ್ಲಿ ಅಂತಹ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.

# ಅಧ್ಯಾಯ-7
## ಸಾಂಸ್ಕೃತಿಕ, ಶೈಕ್ಷಣಿಕ ಪ್ರವಾಸ ಹಾಗೂ ಇತರೆ ಚಟುವಟಿಕೆಗಳು

### 1. ಸಾಂಸ್ಕೃತಿಕ ಚಟುವಟಿಕೆಗಳು

**ಪದವಿ ಪೂರ್ವ ಹಂತದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲು ಅನುಸರಿಸಬೇಕಾದ ಕಾರ್ಯಸೂಚಿಗಳು:**

ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಜಂಟಿ ಆಶ್ರಯದಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸೃಜನಶೀಲ ಪ್ರತಿಭೆಯನ್ನು ಗುರುತಿಸಲು ಹಾಗೂ ಬೆಳೆಸಲು ಅನುಕೂಲವಾಗುವ ದೃಷ್ಟಿಯಿಂದ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವ ಈ ಸಾಂಸ್ಕೃತಿಕ ಕಲಾ ಸ್ಪರ್ಧೆಗಳನ್ನು ನಗರ ಹಾಗೂ ಗ್ರಾಮಾಂತರದ ಎಲ್ಲಾ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಸಹಾಯಕವಾಗುವ ದೃಷ್ಟಿಯಿಂದ ಕಾಲೇಜು ಜಿಲ್ಲೆ, ವಿಭಾಗ ಮಟ್ಟ ಹಾಗೂ ರಾಜ್ಯಮಟ್ಟ ಹೀಗೆ ನಾಲ್ಕು ಹಂತಗಳಲ್ಲಿ ನಡೆಸಲಾಗುತ್ತದೆ.

**ಸ್ಪರ್ಧೆಗಳ ವಿವರ :**

1. ರಸ ಪ್ರಶ್ನೆ (ಸಾಮಾನ್ಯ ಜ್ಞಾನ)
2. ಪ್ರಬಂಧ ಸ್ಪರ್ಧೆ (ಕನ್ನಡ ಭಾಷೆ)
3. ಪ್ರಬಂಧ ಸ್ಪರ್ಧೆ ( ಇಂಗ್ಲೀಷ್ ಭಾಷೆ)
4. ಚರ್ಚಾ ಸ್ಪರ್ಧೆ (ಕನ್ನಡ ಭಾಷೆ)
5. ಚರ್ಚಾ ಸ್ಪರ್ಧೆ (ಇಂಗ್ಲೀಷ್ ಭಾಷೆ)
6. ಏಕಪಾತ್ರಾಭಿನಯ
7. ಭಾವಗೀತೆ ಗಾಯನ
8. ಜಾನಪದ ಗೀತೆ ಗಾಯನ
9. ಚಿತ್ರಕಲೆ
10. ವಿಜ್ಞಾನ ಮಾದರಿ ತಯಾರಿಕೆ
11. ಜಾನಪದ ನೃತ್ಯ

ಕಾಲೇಜು ಮಟ್ಟದ ಸ್ಪರ್ಧೆಗಳು :-

ಪ್ರಾಂಶುಪಾಲರು ಕಾಲೇಜು ಹಂತದಲ್ಲಿ ಈ ಸ್ಪರ್ಧೆಗಳನ್ನು ಆಗಸ್ಟ ತಿಂಗಳ ಒಳಗೆ ನಡೆಸಲು ಕ್ರಮವಹಿಸುವುದು. ಪ್ರತಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಗೆ ಅರ್ಹರಾಗಿದ್ದು, ಅವರ ಹೆಸರನ್ನು ಪ್ರಮಾಣೀಕರಿಸಿ ಗುರುತಿನ ಪತ್ರದೊಂದಿಗೆ ಜಿಲ್ಲಾ ಮಟ್ಟದ ಸ್ಪರ್ಧೆಗೆ ಕಳುಹಿಸುವುದು. ಕಾಲೇಜು ಹಂತದಲ್ಲಿ ನಡೆಸುವ ಸ್ಪರ್ಧೆಗಳನ್ನು ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ನಡೆಸಿ, ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಕ್ರೀಡಾ ಮತ್ತು ವಾಚನಾಲಯದ ನಿಧಿಯಿಂದ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುವುದು.

**ಜಿಲ್ಲಾ ಮಟ್ಟದ ಸ್ಪರ್ಧೆಗಳು :-**

ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯಾ ಜಿಲ್ಲೆಗಳ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ತಮ್ಮ ಅಧ್ಯಕ್ಷತೆಯಲ್ಲಿ ಪ್ರಾಂಶುಪಾಲರ ಸಂಘ ಮತ್ತು ಉಪನ್ಯಾಸಕರ ಸಂಘಗಳ ಸಹಕಾರದೊಂದಿಗೆ ಸಮಿತಿಯನ್ನು ರಚಿಸಿಕೊಂಡು ಸಪ್ಟೆಂಬರ್ ತಿಂಗಳ ಒಳಗಡೆ ನಡೆಸುವುದು. ಜಿಲ್ಲಾ ಮಟ್ಟದಲ್ಲಿ ನಡೆಯುವ ಪ್ರಬಂಧ, ಚರ್ಚಾ ಸ್ಪರ್ಧೆ ಮುಂತಾದ ಸ್ಪರ್ಧೆಗಳ ವಿಷಯಗಳನ್ನು ಮುಂಚಿತವಾಗಿ ತಿಳಿಸುವುದು.

ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವವರ ಪ್ರಯಾಣ ವೆಚ್ಚವನ್ನು ಕ್ರೀಡಾ ಮತ್ತು ವಾಚನಾಲಯ ನಿಧಿಯಿಂದ ಭರಿಸಲು ಸಂಬಂಧಪಟ್ಟ ಕಾಲೇಜಿನವರಿಗೆ ತಿಳಿಸುವುದು. ಜಿಲ್ಲಾ ಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳು ವಿಭಾಗ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ವಿಭಾಗೀಯ ಮಟ್ಟದ ಸ್ಪರ್ಧೆಗೆ ನೀಡುವುದು.

ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನವನ್ನು ಇಲಾಖೆಯ ಮಾರ್ಗಸೂಚಿಯಂತೆ ವಿತರಿಸಿ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು. ಈ ರೀತಿಯಲ್ಲಿ ಸಹಿ ಪಡೆದ ಮೂಲ ಪ್ರತಿಯನ್ನು ಹಾಗೂ ಸಂಘಟನಾ ವೆಚ್ಚದ ಮೂಲ ಬಿಲ್ಲನ್ನು ಜಿಲ್ಲೆಯಲ್ಲಿಯೇ ಕಾಯ್ದಿರಿಸಿಕೊಳ್ಳುವುದು. ಬಿಲ್ಲುಗಳ ದ್ವಿಪ್ರತಿಯನ್ನು ಪರಿಶೀಲನೆಗೆ ಉಪನಿರ್ದೇಶಕರು (ಶೈಕ್ಷಣಿಕ), ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಈ ವಿಳಾಸಕ್ಕೆ ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ತಪ್ಪದೇ ಬಳಕೆ ಪ್ರಮಾಣ ಪತ್ರದೊಂದಿಗೆ ಕಳುಹಿಸಿಕೊಡುವುದು.

**ವಿಭಾಗ ಮಟ್ಟದ ಸ್ಪರ್ಧೆಗಳು:-**

ವಿಭಾಗೀಯ ಮಟ್ಟದ ಸ್ಪರ್ಧೆಗಳನ್ನು ಬೆಂಗಳೂರು ವಿಭಾಗ, ಮೈಸೂರು ವಿಭಾಗ, ಬೆಳಗಾವಿ ವಿಭಾಗ ಹಾಗೂ ಕಲಬುರ್ಗಿ ವಿಭಾಗ ಹೀಗೆ ನಾಲ್ಕು ವಿಭಾಗಗಳಲ್ಲಿ ನಡೆಸಲಾಗುವುದು. ವಿಭಾಗೀಯ ಮಟ್ಟದ ಸ್ಪರ್ಧೆಗಳನ್ನು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯು ಸೂಚಿಸುವ ಆಯಾ ವಿಭಾಗದ ಜಿಲ್ಲೆಯಲ್ಲಿ ನಡೆಸಲಾಗುವುದು. ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಅಧ್ಯಕ್ಷತೆಯಲ್ಲಿ ಪ್ರಾಂಶುಪಾಲರ ಸಂಘ ಮತ್ತು ಉಪನ್ಯಾಸಕರ ಸಂಘಗಳ ಸಹಕಾರದೊಂದಿಗೆ ಸಮಿತಿಯನ್ನು ರಚಿಸಿಕೊಂಡು ಸ್ಪರ್ಧೆಗಳನ್ನು ನಡೆಸಲು ಕೋರಲಾಗಿದೆ. ವಿಭಾಗೀಯ ಮಟ್ಟದ ಸ್ಪರ್ಧೆಗಳ ದಿನಾಂಕ, ಸಮಯ, ಸ್ಥಳ ಹಾಗೂ ಇನ್ನಿತರೆ ವಿವರಗಳನ್ನು ಸಂಬಂಧಪಟ್ಟ ವಿಭಾಗದ ಕಾರ್ಯಕ್ರಮ ನಡೆಸುವ ಉಪನಿರ್ದೇಶಕರುಗಳು ತಮ್ಮ ವ್ಯಾಪ್ತಿಗೆ ಬರುವ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ತಿಳಿಸುವುದು. ವಿಭಾಗೀಯ ಮಟ್ಟದಲ್ಲಿ ನಡೆಯುವ ಪ್ರಬಂಧ, ಚರ್ಚಾ ಸ್ಪರ್ಧೆ ಮುಂತಾದ ಸ್ಪರ್ಧೆಗಳ ವಿಷಯಗಳನ್ನು ಮುಂಚಿತವಾಗಿ ತಿಳಿಸುವುದು.

ವಿಭಾಗೀಯ ಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ಹಾಗೂ ಭಾಗವಹಿಸುವ ಅಧಿಕೃತ ಮ್ಯಾನೇಜರ್‌ಗಳಿಗೆ ಪ್ರತಿ ಜಿಲ್ಲೆಯಿಂದ ಇಬ್ಬರಿಗೆ (ಓರ್ವ ಮಹಿಳೆ ಮತ್ತು ಒಬ್ಬ ಪುರುಷ) ಪ್ರಯಾಣ ವೆಚ್ಚವನ್ನು ಮಾತ್ರ ವಾಸ್ತವಿಕ ಬಸ್ಸು ದರದಂತೆ ಸಂಬಂಧಪಟ್ಟ ಆಯಾ ಕಾಲೇಜಿನ ಕ್ರೀಡೆ ಮತ್ತು ವಾಚನಾಲಯ ನಿಧಿಯಿಂದ ಭರಿಸಲು ತಿಳಿಸುವುದು.

ವಿಭಾಗೀಯ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲು ಸ್ಪರ್ಧೆ ನಡೆಸಿದ ಉಪನಿರ್ದೇಶಕರುಗಳು ಏರ್ಪಾಡು ಮಾಡಬೇಕು.

ವಿಭಾಗ ಮಟ್ಟದ ಸ್ಪರ್ಧೆಗಳನ್ನು ನವೆಂಬರ್ 15 ರೊಳಗೆ ನಡೆಸುವುದು.

ಪ್ರಾದೇಶಿಕ ವಿಭಾಗಗಳಲ್ಲಿರುವ ಜಿಲ್ಲೆಗಳ ಪಟ್ಟಿ:

| ಕ್ರ.ಸಂ. | ಬೆಂಗಳೂರು ವಿಭಾಗದ ಜಿಲ್ಲೆಗಳು | ಕ್ರ.ಸಂ. | ಮೈಸೂರು ವಿಭಾಗದ ಜಿಲ್ಲೆಗಳು | ಕ್ರ.ಸಂ. | ಬೆಳಗಾವಿ ವಿಭಾಗದ ಜಿಲ್ಲೆಗಳು | ಕ್ರ.ಸಂ. | ಕಲಬುರ್ಗಿ ವಿಭಾಗದ ಜಿಲ್ಲೆಗಳು |
|---|---|---|---|---|---|---|---|
| 1 | ಬೆಂಗಳೂರು ಉತ್ತರ | 1 | ಮೈಸೂರು | 1 | ಬೆಳಗಾವಿ | 1 | ಕಲಬುರ್ಗಿ |
| 2 | ಬೆಂಗಳೂರು ದಕ್ಷಿಣ | 2 | ಕೊಡಗು | 2 | ಹಾವೇರಿ | 2 | ರಾಯಚೂರು |
| 3 | ಬೆಂಗಳೂರು ಗ್ರಾಮಾಂತರ | 3 | ಹಾಸನ | 3 | ಧಾರವಾಡ | 3 | ಬಳ್ಳಾರಿ |
| 4 | ರಾಮನಗರ | 4 | ಮಂಡ್ಯ | 4 | ಗದಗ | 4 | ವಿಜಯನಗರ |
| 5 | ಕೋಲಾರ | 5 | ದಕ್ಷಿಣ ಕನ್ನಡ | 5 | ವಿಜಾಪುರ | 5 | ಬೀದರ್ |
| 6 | ಚಿಕ್ಕಬಳ್ಳಾಪುರ | 6 | ಚಾಮರಾಜನಗರ | 6 | ಬಾಗಲಕೋಟೆ | 6 | ಕೊಪ್ಪಳ |
| 7 | ತುಮಕೂರು | 7 | ಉಡುಪಿ | 7 | ಉತ್ತರ ಕನ್ನಡ | 7 | ಯಾದಗಿರಿ |
| 8 | ಚಿತ್ರದುರ್ಗ | 8 | ಚಿಕ್ಕಮಗಳೂರು | 8 | ಚಿಕ್ಕೋಡಿ | | |
| 9 | ಶಿವಮೊಗ್ಗ | | | | | | |
| 10 | ದಾವಣಗೆರೆ | | | | | | |

ವಿಭಾಗೀಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನವನ್ನು ಇಲಾಖೆ ನೀಡುವ ಮಾರ್ಗಸೂಚಿಯಂತೆ ವಿತರಿಸಿ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು. ಈ ರೀತಿಯಲ್ಲಿ ಸಹಿ ಪಡೆದ ಮೂಲ ಪ್ರತಿಯನ್ನು ಹಾಗೂ ಸಂಘಟನಾ ವೆಚ್ಚದ ಆಯವ್ಯಯ ಪಟ್ಟಿ, ಮೂಲ ರಶೀದಿಗಳನ್ನು ಕಾಯ್ದಿರಿಸಿಕೊಳ್ಳುವುದು. ಬಿಲ್ಲುಗಳ ದ್ವಿಪ್ರತಿಯನ್ನು ಪರಿಶೀಲನೆಗೆ ಉಪನಿರ್ದೇಶಕರು (ಶೈಕ್ಷಣಿಕ), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಈ ವಿಳಾಸಕ್ಕೆ ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ತಪ್ಪದೇ ಬಳಕೆ ಪ್ರಮಾಣ ಪತ್ರದೊಂದಿಗೆ ಕಳುಹಿಸಿಕೊಡುವುದು. ಲಕೋಟೆಯ ಮೇಲೆ ವಿಭಾಗೀಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಆಯವ್ಯಯ ಪಟ್ಟಿ – 20___ ಎಂದು ನಮೂದಿಸಿರಬೇಕು.

**ರಾಜ್ಯ ಮಟ್ಟದ ಸ್ಪರ್ಧೆಗಳು** :-

ರಾಜ್ಯಮಟ್ಟದ ಸ್ಪರ್ಧೆಗಳನ್ನು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ಮಾರ್ಗದರ್ಶನದಲ್ಲಿ ಬೆಂಗಳೂರಿನಲ್ಲಿ ಅಥವಾ ಬೇರೆ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು. ಎಲ್ಲಾ ಸ್ಪರ್ಧೆಗಳು ಮುಗಿದ ನಂತರ ಅದೇ ದಿನದಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಬಹುಮಾನಗಳನ್ನು ವಿತರಿಸಲಾಗುವುದು.

ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಇಲಾಖಾ ವತಿಯಿಂದ ಪ್ರಯಾಣ ಭತ್ಯೆಯನ್ನು ಮಾತ್ರ ವಾಸ್ತವಿಕ ಬಸ್ಸು ದರದಂತೆ ಕೊಡಲಾಗುವುದು. ದಿನ ಭತ್ಯೆಯನ್ನು ಇಲಾಖಾ ವತಿಯಿಂದ ನೀಡಲಾಗುವುದಿಲ್ಲ. ದಿನ ಭತ್ಯೆಯನ್ನು ಸಂಬಂಧಪಟ್ಟ ಕಾಲೇಜಿನವರು ಕ್ರೀಡಾ ಮತ್ತು ವಾಚನಾಲಯ ನಿಧಿಯಿಂದ / ಸಾಂಸ್ಕೃತಿಕ ಚಟುವಟಿಕೆ

ಹಣದಿಂದ ಉಪಯೋಗಿಸಿಕೊಳ್ಳುವುದು. ವಿದ್ಯಾರ್ಥಿಗಳ ಜೊತೆ ರಾಜ್ಯಮಟ್ಟದ ಸ್ಪರ್ಧೆಗೆ ಭಾಗವಹಿಸಲು ಇಬ್ಬರು ಉಪನ್ಯಾಸಕರನ್ನು (ಓರ್ವ ಮಹಿಳಾ ಉಪನ್ಯಾಸಕರು ಸೇರಿ) ನೇಮಿಸಿ ಅಧಿಕೃತ ಪತ್ರದೊಂದಿಗೆ ಕಳುಹಿಸುವುದು.

**ರಾಜ್ಯ ಮಟ್ಟದಲ್ಲಿ ನಡೆಯುವ ಪ್ರಬಂಧ, ಚರ್ಚಾ ಸ್ಪರ್ಧೆ ಮುಂತಾದ ಸ್ಪರ್ಧೆಗಳ ವಿಷಯಗಳನ್ನು ಮುಂಚಿತವಾಗಿ ತಿಳಿಸುವುದು.**

ರಾಜ್ಯಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನವನ್ನು ಇಲಾಖೆಯ ಮಾರ್ಗಸೂಚಿಯಂತೆ ವಿತರಿಸಿ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು. ರಾಜ್ಯ ಮಟ್ಟದ ಆಯವ್ಯಯ ಪಟ್ಟಿಯ ಮೂಲ ರಶೀದಿಯನ್ನು ಜಿಲ್ಲೆಯಲ್ಲಿ ಕಾಯ್ದಿರಿಸಿಕೊಂಡು, ದ್ವಿಪ್ರತಿಯನ್ನು ಬಳಕೆ ಪ್ರಮಾಣ ಪತ್ರದೊಂದಿಗೆ ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ನೋಂದಣಿ ಅಂಚೆ ಮೂಲಕ ಉಪನಿರ್ದೇಶಕರು (ಶೈಕ್ಷಣಿಕ), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560012 ಇವರಿಗೆ ತಪ್ಪದೇ ಕಳುಹಿಸಿಕೊಡುವುದು. ಆ ಲಕೋಟೆಯ ಮೇಲೆ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಆಯವ್ಯಯ ಪಟ್ಟಿ- 20_____. ಎಂದು ನಮೂದಿಸುವುದು.

ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಡಿಸೆಂಬರ್ 15 ರೊಳಗೆ ನಡೆಸುವುದು.

ಸ್ಪರ್ಧೆಯ ನಿಯಮಾವಳಿಗಳು:-

**ರಸಪ್ರಶ್ನೆ :**

1. ರಸಪ್ರಶ್ನೆ ಸ್ಪರ್ಧೆಗೆ ಇಬ್ಬರು ವಿದ್ಯಾರ್ಥಿಗಳ ತಂಡ ಇರಬೇಕು. ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಸೇರಿ ತಂಡ ರಚಿಸುವಂತಿಲ್ಲ.
2. ಕಾಲೇಜು, ಜಿಲ್ಲಾ ಮತ್ತು ವಿಭಾಗ ಮಟ್ಟದಲ್ಲಿ ಸ್ಪರ್ಧಿಗಳ ಸಂಖ್ಯೆ ಹೆಚ್ಚಾಗಿದ್ದಲ್ಲಿ ಪ್ರಥಮ ಸುತ್ತಿನಲ್ಲಿ ಬರವಣಿಗೆಯ ಮುಖಾಂತರ ಸ್ಪರ್ಧೆಯನ್ನು ನಡೆಸಬಹುದು.
3. ಜಿಲ್ಲಾ ಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳ ತಂಡಗಳು ವಿಭಾಗ ಮಟ್ಟಕ್ಕೆ ಅರ್ಹತೆಯನ್ನು ಪಡೆಯುತ್ತವೆ.
4. ವಿಭಾಗ ಮಟ್ಟದಲ್ಲಿ ಪ್ರತಿ ಪ್ರಾದೇಶಿಕ ವಿಭಾಗದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳ ತಂಡಗಳು ರಾಜ್ಯ ಮಟ್ಟಕ್ಕೆ ಅರ್ಹತೆಯನ್ನು ಪಡೆಯುತ್ತವೆ. ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸುತ್ತಿನಲ್ಲಿ 8 ತಂಡಗಳನ್ನು ಆಯ್ಕೆ ಮಾಡಿ ನಂತರ ಏಳು ಅಥವಾ ಎಂಟು ಸುತ್ತಿನ ಮೌಖಿಕ ಸ್ಪರ್ಧೆಯನ್ನು ನಡೆಸುವುದು. ಅದರಲ್ಲಿ ದೃಶ್ಯ, ಶ್ರವಣ ಮುಂತಾದ ವಿಧಾನದ ಸುತ್ತುಗಳಿರುತ್ತವೆ. ಇಲ್ಲಿ ಇತಿಹಾಸ, ವಿಜ್ಞಾನ, ಸಾಹಿತ್ಯ, ಕ್ರೀಡೆ, ಪ್ರಚಲಿತ ವಿದ್ಯಮಾನಗಳು, ಕರ್ನಾಟಕ, ದೇಶ ಮತ್ತು ಪ್ರಪಂಚದ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಜ್ಞಾನದ ಪ್ರಶ್ನೆಗಳು ಇರುತ್ತವೆ.
5. ರಾಜ್ಯ ಮಟ್ಟದ ಕ್ವಿಜ್ ನಡೆಸುವವರು ಜಿಲ್ಲಾ ಮತ್ತು ವಿಭಾಗ ಮಟ್ಟದಲ್ಲಿ ಕ್ವಿಜ್ ಮಾಸ್ಟರ್ ಆಗಿ ಭಾಗವಹಿಸಿರಬಾರದು.

**ಪ್ರಬಂಧ ಸ್ಪರ್ಧೆ :-**

1. ಕಾಲೇಜು, ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಗೆ ಒಂದು ಗಂಟೆ ಅವಧಿ ನೀಡಲಾಗುವುದು.
2. ಸ್ಪರ್ಧಿಗಳಿಗೆ ಬರೆಯುವ ಪೇಪರನ್ನು ಸಂಘಟಕರು ಒದಗಿಸುವುದು.

**ಚರ್ಚಾ ಸ್ಪರ್ಧೆ :-**

1. ಕಾಲೇಜು, ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಚರ್ಚಾ ಸ್ಪರ್ಧೆಗೆ 4 + 1 = 5 ನಿಮಿಷದ ಅವಧಿ ನೀಡಲಾಗುವುದು.
2. ಸ್ಪರ್ಧಿಯು ತನಗೆ ನೀಡಲಾದ ಕಾಲಾವಧಿಯಲ್ಲಿ ವಿಷಯದ ಪರ ಅಥವಾ ವಿರೋಧವಾಗಿ ಮಾತನಾಡುವುದು.

**ಏಕಪಾತ್ರಾಭಿನಯ :-**

1. ಕಾಲೇಜು, ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಏಕಪಾತ್ರಾಭಿನಯ ಸ್ಪರ್ಧೆಗೆ 4 + 1 = 5 ನಿಮಿಷ ಅವಧಿ ನೀಡಲಾಗುವುದು.
2. ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ಒಬ್ಬ ಸ್ಪರ್ಧಿ ಒಂದಕ್ಕಿಂತ ಹೆಚ್ಚು ಪಾತ್ರಗಳಲ್ಲಿ ಅಭಿನಯಿಸಬೇಕು.
3. ಸ್ಪರ್ಧಿಗಳು ವೇಷಭೂಷಣ ಧರಿಸುವುದಕ್ಕೆ ಅವಕಾಶವಿಲ್ಲ.
4. ಇಲ್ಲಿ ಭಾಷಿಕ/ವಾಚಿಕ ಮತ್ತು ಆಂಗಿಕ ಅಭಿನಯವೇ ಪ್ರಧಾನ. ವಿದ್ಯಾರ್ಥಿಗಳು ತಮ್ಮ ಭಾವಾಭಿವ್ಯಕ್ತಿಯ ಮೂಲಕವೇ ವಿಭಿನ್ನ ಪಾತ್ರಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಬೇಕು.

**ಭಾವಗೀತೆ ಹಾಗೂ ಜಾನಪದ ಗೀತೆ :-**

1. ಕಾಲೇಜು, ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಭಾವಗೀತೆ ಹಾಗೂ ಜಾನಪದ ಗೀತೆ ಸ್ಪರ್ಧೆಗೆ 4 + 1 = 5 ನಿಮಿಷ ಅವಧಿ ನೀಡಲಾಗುವುದು.
2. ಸಾಹಿತ್ಯ ಹಾಗೂ ಉತ್ತಮ ಹಾಡುಗಾರಿಕೆಗೆ ಪ್ರಾಮುಖ್ಯತೆ ನೀಡುವುದು.

**ಚಿತ್ರಕಲಾ ಸ್ಪರ್ಧೆ :-**

1. ಕಾಲೇಜು, ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಗೆ 1 ಗಂಟೆಯ ಅವಧಿ ನೀಡಲಾಗುವುದು.
2. ಡ್ರಾಯಿಂಗ್ ಹಾಳೆಯನ್ನು ಸಂಘಟಕರು ಒದಗಿಸುತ್ತಾರೆ. ಉಳಿದ ವಸ್ತು ಪರಿಕರಗಳನ್ನು ವಿದ್ಯಾರ್ಥಿಗಳೇ ತರಬೇಕು.
3. ಚಿತ್ರಕಲೆಯ ವಿಷಯವನ್ನು ಸ್ಪರ್ಧೆಯ ಅರ್ಧ ಗಂಟೆ ಮುಂಚಿತವಾಗಿ ನೀಡಲಾಗುವುದು.

**ವಿಜ್ಞಾನ ಮಾದರಿ ತಯಾರಿಕೆ :-**

1. ವಿಜ್ಞಾನ ಮಾದರಿ ತಯಾರಿಕೆ ಸ್ಪರ್ಧೆಗೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಬಹುದು.
2. ಈ ಸ್ಪರ್ಧೆಯು ವೈಯಕ್ತಿಕ ಸ್ಪರ್ಧೆಯಾಗಿದ್ದು, ಒಬ್ಬ ವಿದ್ಯಾರ್ಥಿಯ ಒಂದು ಮಾದರಿಗೆ ಮಾತ್ರ ಅವಕಾಶವಿರುವುದು.
3. ಮಾದರಿ ತಯಾರಿಗೆ ಬೇಕಾದ ವಸ್ತು ಪರಿಕರಗಳನ್ನು ವಿದ್ಯಾರ್ಥಿಗಳೇ ಸಿದ್ದಪಡಿಸಿಕೊಳ್ಳಬೇಕು.
4. ಸೃಜನಶೀಲವಾದ, ಅನ್ವೇಷಣಾ ನಾವಿನ್ಯತೆಯುಳ್ಳ ಹಾಗೂ ಬದುಕಿಗೆ ಉಪಯುಕ್ತವಾಗಬಲ್ಲ ಯಾವುದೇ ಮಾದರಿಯನ್ನು ಪ್ರಸ್ತುತಪಡಿಸುವುದು.

**ಜಾನಪದ ನೃತ್ಯ :-**

1. ಜಾನಪದ ನೃತ್ಯ ಸ್ಪರ್ಧೆ ಒಬ್ಬ ವಿದ್ಯಾರ್ಥಿ ಭಾಗವಹಿಸುವ ವೈಯಕ್ತಿಕ ಸ್ಪರ್ಧೆಯಾಗಿದೆ.
2. ಈ ಸ್ಪರ್ಧೆಗೆ 4 + 1 = 5 ನಿಮಿಷ ಅವಧಿ ನೀಡಲಾಗಿದೆ.

**ಸಾಮಾನ್ಯ ನಿಯಮ ಮತ್ತು ಸೂಚನೆಗಳು:-**

1. ಎಲ್ಲಾ ಸ್ಪರ್ಧೆಗಳನ್ನು ಕಾಲೇಜು, ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ನಡೆಯುವುದು.
2. ಸ್ಪರ್ಧಾ ಸಮಯದಲ್ಲಿ ಸಂಘಟಕರು ವಿದ್ಯಾರ್ಥಿಗಳ ಹೆಸರು, ಕಾಲೇಜು ಇತ್ಯಾದಿ ಗುರುತು ಅಥವಾ ಮಾಹಿತಿಗಳನ್ನು ಬಹಿರಂಗಪಡಿಸುವಂತಿಲ್ಲ. ಸ್ಪರ್ಧಿಸುವ ವಿದ್ಯಾರ್ಥಿಗಳಿಗೆ ಕ್ರಮ ಸಂಖ್ಯೆಯನ್ನು (ಗೋಪ್ಯ) ಕೊಟ್ಟು ಅದನ್ನು ತೀರ್ಪುಗಾರರಿಗೆ ನೀಡುವುದು.
3. ರಸಪ್ರಶ್ನೆ ಸ್ಪರ್ಧೆಯನ್ನು ಹೊರತುಪಡಿಸಿ ಒಬ್ಬ ವಿದ್ಯಾರ್ಥಿಯು ಎರಡು ಸ್ಪರ್ಧೆಗಳಲ್ಲಿ ಮಾತ್ರ ಭಾಗವಹಿಸಬಹುದು.
4. ಸ್ಪರ್ಧೆಗಳ ಸಂಘಟಕರು ಸ್ಪರ್ಧೆಗಳನ್ನು ಸಂಜೆ ನಾಲ್ಕು ಗಂಟೆಯ ಒಳಗೆ ಮುಗಿಸಿ ವಿದ್ಯಾರ್ಥಿಗಳು ತಮ್ಮ ದೂರದ ಮನೆ, ಊರುಗಳಿಗೆ ತೆರಳಲು ಅನುಕೂಲವಾಗುವಂತೆ ನೋಡಿಕೊಳ್ಳುವುದು.
5. ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.

6. ಈ ಎಲ್ಲಾ ಸಾಂಸ್ಕೃತಿಕ ಸ್ಪರ್ಧೆಗಳು ಇಲಾಖೆಯ ಮಹತ್ವದ ಕಾರ್ಯಕ್ರಮಗಳಾಗಿದ್ದು, ಇಲಾಖೆಯ ನಿಯಮಾವಳಿಯಂತೆ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದಂತೆ ನಡೆಸುವುದು.

(ಸೂಚನೆ: ಆಯಾ ಸಂದರ್ಭಕ್ಕೆ ಹೊರಡಿಸುವ ಸುತ್ತೋಲೆಗಳನ್ನು ಗಮನಿಸಬಹುದು.)

**2. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ**

ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದು ಶಿಕ್ಷಣದ ಒಂದು ಅವಿಭಾಜ್ಯ ಪ್ರಕ್ರಿಯೆ ಆಗಿದೆ. ಈ ಶೈಕ್ಷಣಿಕ ಪ್ರವಾಸವನ್ನು ಡಿಸೆಂಬರ್ ತಿಂಗಳ ಕೊನೆಯ ವಾರದೊಳಗಾಗಿ ಏರ್ಪಡಿಸಬೇಕು. ಕಾಲೇಜಿನಿಂದ ಶೈಕ್ಷಣಿಕ ಪ್ರವಾಸ ಏರ್ಪಡಿಸುವಾಗ ವಿದ್ಯಾರ್ಥಿಗಳ ಪೋಷಕರಿಂದ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆಯುವುದು ಹಾಗೂ ರಾಜ್ಯದ/ಹೊರರಾಜ್ಯಗಳಿಗೆ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದು ಕೊಂಡು ಹೋಗುವ ಸಂದರ್ಭದಲ್ಲಿ ಜಿಲ್ಲಾ ಉಪನಿರ್ದೇಶಕರಿಂದ ಲಿಖಿತ ಅನುಮತಿಯನ್ನು ಕಡ್ಡಾಯವಾಗಿ ಪಡೆದಿರಬೇಕು. ಯಾವುದೇ ಕಾರಣಕ್ಕೂ ಡಿಸೆಂಬರ್ ನಂತರ ಪ್ರವಾಸಕ್ಕೆ ಅನುಮತಿ ನೀಡಲಾಗುವುದಿಲ್ಲ. ಡಿಸೆಂಬರ್ ನಂತರ ಶೈಕ್ಷಣಿಕ ಪ್ರವಾಸ ಏರ್ಪಡಿಸಿದಲ್ಲಿ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

### 3. ಯುವ ಸಂಸತ್ ಸ್ಪರ್ಧೆನಡೆಸುವ ಬಗ್ಗೆ:

ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಾಜಕೀಯ ಪ್ರಜ್ಞೆ ಹಾಗೂ ಸಂಸತ್ ಕಾರ್ಯನಿರ್ವಹಣೆಯ ಬಗ್ಗೆ ಅರಿವನ್ನು ಮೂಡಿಸಲು 2011-12ನೇ ಸಾಲಿನಿಂದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಗುತ್ತದೆ. ಈ ಸ್ಪರ್ಧೆಯನ್ನು ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸಬೇಕಿರುತ್ತದೆ. ಜಿಲ್ಲಾ ಮತ್ತು ವಿಭಾಗ ಮಟ್ಟದ ಸ್ಪರ್ಧೆಗಳು ಡಿಸೆಂಬರ್ ಮೊದಲ ವಾರದಲ್ಲಿ ನಡೆಸಬೇಕು. ಈ ಸ್ಪರ್ಧೆಯನ್ನು ನಡೆಸಲು ಅನುಕೂಲವಾಗುವಂತೆ ಪ್ರತ್ಯೇಕ ಮಾಹಿತಿ ಕೈಪಿಡಿಯನ್ನು ಪ್ರತಿ ಕಾಲೇಜಿಗೆ ಉಪನಿರ್ದೇಶಕರ ಕಛೇರಿಯ ಮೂಲಕ ಒದಗಿಸಲಾಗುವುದು. ಜಿಲ್ಲಾ ಮಟ್ಟ, ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟದ ಸ್ಪರ್ಧಾ ವೇಳಾ ಪಟ್ಟಿಯನ್ನು ಪ್ರತ್ಯೇಕವಾಗಿ ನಂತರ ಕಳುಹಿಸಲಾಗುವುದು.

ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ವಿವಿಧ ಹಂತದಲ್ಲಿ ಯುವಸಂಸತ್ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಬೇಕಾಗಿದ್ದು, ಜಿಲ್ಲಾ ಮಟ್ಟದಲ್ಲಿ ಸ್ಪರ್ಧೆಗಳನ್ನು ನಡೆಸುವ ಪೂರ್ಣ ಜವಾಬ್ದಾರಿಯನ್ನು ಜಿಲ್ಲಾ ಉಪನಿರ್ದೇಶಕರು ತೆಗೆದುಕೊಳ್ಳಬೇಕಿರುತ್ತದೆ. ಇದಕ್ಕಾಗಿ ಆಯಾ ಜಿಲ್ಲಾ ಉಪನಿರ್ದೇಶಕರು ಆಸಕ್ತಿಯುಳ್ಳ ಹಾಗೂ ಕ್ರಿಯಾ ಶೀಲರಾಗಿರುವ ರಾಜ್ಯಶಾಸ್ತ್ರ ವಿಷಯದ ಉಪನ್ಯಾಸಕರ ಸಮಿತಿಯನ್ನು ರಚಿಸಿ ಈ ಸ್ಪರ್ಧೆಗಳನ್ನು ವ್ಯವಸ್ಥಿತವಾಗಿ ನಡೆಸಲು ಏರ್ಪಾಡು ಮಾಡುವುದು.

ಸೂಚನೆ: ಈ ಸ್ಪರ್ಧೆಯನ್ನು ನಡೆಸುವ ಬಗ್ಗೆ ಎಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ಕಡ್ಡಾಯವಾಗಿ ಮಾಹಿತಿ ನೀಡುವುದು. ಸ್ಪರ್ಧೆ ನಡೆಸಲು ಇಲಾಖೆಯಿಂದ ಬಿಡುಗಡೆ ಮಾಡುವ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಇಲಾಖೆಗೆ ಸಲ್ಲಿಸುವುದು.

# ಅಧ್ಯಾಯ-8
## ರಾಷ್ಟ್ರೀಯ ಹಸಿರು ಪಡೆಯ ಮಾಹಿತಿ

**ಅ. ರಾಷ್ಟ್ರೀಯ ಹಸಿರು ಪಡೆ(Eco-club) –ಇಂಡೋ ನಾರ್ವೆಯನ್ ಎನ್‌ವೈರ್ನಮೆಂಟ್ ಕಾರ್ಯಕ್ರಮ.**

ಸರ್ಕಾರದ ಆದೇಶ ಸಂಖ್ಯೆ:ಅಪಜೀ 107/ಇಪಿಸಿ/2012 ದಿನಾಂಕ 24-01-2014 ರನ್ವಯ 459 ಪದವಿ ಪೂರ್ವ ಕಾಲೇಜುಗಳಲ್ಲಿ ಮತ್ತು 2012-13ನೇ ಸಾಲಿನ EMPRE (Envoirnmental Management & Policy Research Institute) ವತಿಯಿಂದ 468 ಪದವಿ ಪೂರ್ವ ಕಾಲೇಜುಗಳಲ್ಲಿ ರಾಷ್ಟ್ರೀಯ ಹಸಿರು ಪಡೆ (Eco-clubs) ಘಟಕಗಳನ್ನು ಸ್ಥಾಪಿಸಲಾಗಿದೆ.

- ರಾಜ್ಯದಲ್ಲಿ ಹಲವಾರು ಪದವಿ ಪೂರ್ವ ಕಾಲೇಜುಗಳಲ್ಲಿ '**ರಾಷ್ಟ್ರೀಯ ಹಸಿರುಪಡೆ**' (Eco club) ಸ್ಥಾಪಿಸಲಾಗಿದೆ.
- ಪ್ರತಿ ಕಾಲೇಜಿನಲ್ಲಿ ಕಾರ್ಯ ಕ್ರಮವನ್ನು ನೋಡಿಕೊಳ್ಳಲು ಒಬ್ಬ ಸಂಪನ್ಮೂಲ ಉಪನ್ಯಾಸಕರನ್ನು ಗುರುತಿಸಿ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ.
- ಹಸಿರು ಪಡೆ ಅಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು.

➢ ಪರಿಸರದ ಬಗ್ಗೆ ವಿಚಾರ ಸಂಕಿರಣಗಳು, ಚರ್ಚಾ ಸ್ಪರ್ಧೆಗಳು, ಉಪನ್ಯಾಸಗಳು ಮತ್ತು ಜನ ಪ್ರಿಯ ಭಾಷಣಗಳನ್ನು ಕಾಲೇಜುಗಳಲ್ಲಿ ಏರ್ಪಡಿಸುವುದು.

➢ ಮಾಲಿನ್ಯಗೊಂಡ, ಹಾಳಾಗಿರುವ ಸ್ಥಳಗಳು, ವನ್ಯ ಪ್ರಾಣಿ ಧಾಮಗಳು ಮುಂತಾದ ಪರಿಸರಕ್ಕೆ ಸಂಬಂಧಿಸಿದ ಪ್ರಮುಖ ಸ್ಥಳಗಳ ಭೇಟಿ.

➢ ಪರಿಸರದ ಜಾಗೃತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ರ‍ಯಾಲಿಗಳು, ಮೆರವಣಿಗೆಗಳು, ಮಾನವ ಸರಪಳಿ ಹಾಗೂ ಬೀದಿ ನಾಟಕಗಳನ್ನು ಏರ್ಪಡಿಸುವುದು.

➢ ಕಾಲೇಜಿನ ಒಳಗೆ ಹಾಗೂ ಹೊರಗೆ ಕ್ರಿಯಾಶೀಲ ಚಟುವಟಿಕೆಗಳಾದ ಗಿಡ ನೆಡುವುದು, ಸ್ವಚ್ಛತಾ ಚಳುವಳಿ ಇವುಗಳನ್ನು ಹಮ್ಮಿಕೊಳ್ಳುವುದು.

➢ ಮಾಲಿನ್ಯ ಮೂಲಗಳ ಮಾಹಿತಿ ಪಟ್ಟಿ ತಯಾರಿಸುವುದು ಮತ್ತು ಅದನ್ನು ಜಾರಿಗೊಳಿಸುವ ಸಂಸ್ಥೆಗಳಿಗೆ ಕಳುಹಿಸುವುದು.

➢ ಸಾರ್ವಜನಿಕ ಸ್ಥಳಗಳಲ್ಲಿ ಗಲೀಜು ಮಾಡುವುದು ಮತ್ತು ಪೋಸ್ಟರ್‌ಗಳನ್ನು ಅಂಟಿಸುವುದಕ್ಕೆ ವಿರುದ್ಧವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಊಟಕ್ಕೆ ಮೊದಲು ಕೈತೊಳೆಯುವುದರ ಬಗ್ಗೆ ತಿಳುವಳಿಕೆ ನೀಡವುದು.

➢ ಪರಿಸರಕ್ಕೆ ಒಳ್ಳೆಯದಲ್ಲದ ಅಭ್ಯಾಸಗಳ ವಿರುದ್ಧದ ಜಾಗೃತಿಗೆ ಚಾಲನೆನೀಡುವುದು.